ಸಂಪಾದಕರು :
ಎಂ.ಎಸ್. ವಿಕಾಸ್

ಶನಿವಾರ, ಆಗಸ್ಟ್ 26, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 104 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
☎ 08192 254736 91642 99999

### ಜನಸ್ನೇಹಿ ಪೊಲೀಸ್, ಅಪರಾಧ ಪ್ರಕರಣಗಳ ಶೀಘ್ರ ಪತ್ತೆಗೆ ಕ್ರಮ

## ನೂತನ ಎಸ್ಪಿ ಉಮಾ ಅಧಿಕಾರ ಸ್ವೀಕಾರ



ದಾವಣಗೆರೆ, ಆ. 25 - ಜಿಲ್ಲೆಯ ನೂತನ ಪೊಲೀಸ್ ವರಿಷ್ಠಾಧಿಕಾರಿಯಾಗಿ ಉಮಾ ಪ್ರಶಾಂತ್ ಅವರು ಶುಕ್ರವಾರ ಸಂಜೆ ಅಧಿಕಾರ ವಹಿಸಿಕೊಂಡರು.

ನಿರ್ಗಮಿತ ಎಸ್ಪಿ ಡಾ.ಕೆ. ಅರುಣ್ ಅವರು ಎಸ್ಪಿ ಕಚೇರಿಯಲ್ಲಿ ಅಧಿಕಾರ ಹಸ್ತಾಂತರಿಸಿದರು. ಉಮಾ ಪ್ರಶಾಂತ್ ಇದಕ್ಕೂ ಮುನ್ನ ಚಿಕ್ಕಮಗಳೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರು.

ಕಳೆದ ಐದು ತಿಂಗಳಿನಿಂದ ದಾವಣಗೆರೆಯ ಎಸ್ಪಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಡಾ. ಕೆ. ಅರುಣ್ ಅವರನ್ನು ಕಲಬುರ್ಗಿಯ ಪೊಲೀಸ್ ತರಬೇತಿ ಶಾಲೆಯ ಪ್ರಾಂಶುಪಾಲರಾಗಿ ವರ್ಗಾವಣೆ ಮಾಡಲಾಗಿದೆ.

ಅಧಿಕಾರ ಸ್ವೀಕರಿಸಿದ ನಂತರ ಪತ್ರಕರ್ತರೊಂದಿಗ ಮಾತನಾಡಿದ ಉಮಾ ಪ್ರಶಾಂತ್, ಪೊಲೀಸ್ ವ್ಯವಸ್ಥೆ ಜನಸ್ನೇಹಿ ಮಾಡಲಾಗುವುದು. ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳ ತಡೆಗೆ ವಿಶೇಷ ಆದ್ಯತೆ ನೀಡಲಾಗುವುದು ಎಂದರು.

ಡಿಜಿ-ಐಜಿಪಿ ಸೇರಿ ಎಲ್ಲ ಮೇಲಾಧಿಕಾರಿಗಳ ನಿರ್ದೇಶನದಂತೆ ಪೊಲೀಸ್ ಅಧಿಕಾರಿ-ಸಿಬ್ಬಂದಿ ಕಲ್ಯಾಣದ ಜತೆಗೆ, ಸಾರ್ವಜನಿಕರ ಸಹಯೋಗದೊಂದಿಗೆ ಜನಸ್ನೇಹಿ ಪೊಲೀಸ್ ಆಡಳಿತ ತರಲು ಉತ್ತಮ ಕಾರ್ಯಕ್ರಮ ರೂಪಿಸಲಾಗುವುದು ಎಂದು ಹೇಳಿದರು. ಇಲ್ಲಿ ಉತ್ತಮ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಇದ್ದು ಅಪರಾಧ ಪ್ರಕರಣಗಳು ಹೆಚ್ಚಾಗದಂತೆ ಎಚ್ಚರ ವಹಿಸಲಾಗುವುದು. ಅಪರಾಧ ಪ್ರಕರಣಗಳ ಶೀಘ್ರ ಪತ್ತೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಅಕ್ರಮ ಮರಳುಗಾರಿಕೆ ಸೇರಿದಂತೆ ಎಲ್ಲ ರೀತಿಯ ಅನೈತಿಕ ಚಟುವಟಿಕೆಗಳನ್ನು ಕಟ್ಟುನಿಟ್ಟಾಗಿ ನಿಯಂತ್ರಿಸುವುದರ ಜತೆಗೆ ಹಿಂದಿನ ಎಸ್ಪಿ ಅರುಣ್ ಅವರು ಮಾಡಿದ ಎಲ್ಲ ಒಳ್ಳೆಯ ಕೆಲಸ ಕಾರ್ಯವನ್ನು ಮುಂದುವರೆಸುತ್ತೇವೆ ಎಂದರು.

## ಕಾವೇರಿ : 24 ಸಾವಿರ ಕ್ಯೂಸೆಕ್ಸ್ ನೀರಿನ ತಮಿಳುನಾಡು ಅರ್ಜಿಗೆ ಸುಪ್ರೀಂ ನಕಾರ

ನವದೆಹಲಿ, ಆ. 25 - ಪ್ರತಿದಿನ 24 ಸಾವಿರ ಕ್ಯೂಸೆಕ್ಸ್ ಕಾವೇರಿ ನೀರು ಹರಿಸಬೇಕೆಂಬ ತಮಿಳುನಾಡು ಮನವಿಯ ಬಗ್ಗೆ ಯಾವುದೇ ಆದೇಶ ಹೊರಡಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ನಾವು ಈ ವಿಷಯದಲ್ಲಿ ಪರಿಣಿತರಲ್ಲ ಎಂದು ನ್ಯಾಯಮೂರ್ತಿ ಬಿ. ಆರ್. ಗವಾಯಿ ನೇತೃತ್ವದ ತ್ರಿಸದಸ್ಯ ಪೀಠ ತಿಳಿಸಿದೆ. ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರದ ಸಭೆ ಸೋಮವಾರ ನಡೆಯಲಿದೆ ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ ಅವರು ಸುಪ್ರೀಂ ಕೋರ್ಟ್‌ಗೆ ತಿಳಿಸಿದರು. ಇದನ್ನು ಪರಿಗಣಿಸಿದ ನ್ಯಾಯಾಲಯ, ನೀರು ಹರಿಸುವ ಕುರಿತು ಪ್ರಾಧಿಕಾರ ತನ್ನ ವರದಿ ಸಲ್ಲಿಸುವುದು ಸೂಕ್ತ ಎಂದು ತಿಳಿಸಿದೆ. ವಿಚಾರಣೆ ನಡೆಸಿದ ಪೀಠದಲ್ಲಿ ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಪಿ.ಕೆ. ಮಿಶ್ರ ಅವರಿದ್ದಾರೆ.

ಬೆಳೆಗಳ ರಕ್ಷಣೆಗಾಗಿ ಪ್ರತಿದಿನ 24 ಸಾವಿರ ಕ್ಯೂಸೆಕ್ಸ್ ನೀರು ಹರಿಸಬೇಕು ಎಂಬ ತಮಿಳುನಾಡು ಅರ್ಜಿಗೆ ಕರ್ನಾಟಕ ಆಕ್ಷೇಪಿಸಿತ್ತು.

## ಮಹಿಳೆಯರ ಹಿತದೃಷ್ಟಿಯಿಂದ ಎಂ.ಟಿ.ಪಿ. ಕಾಯ್ದೆ : ಸುಪ್ರೀಂ ಕೋರ್ಟ್

ನವದೆಹಲಿ, ಆ. 25 - ವೈದ್ಯಕೀಯ ಗರ್ಭಪಾತ ಕಾಯ್ದೆಯ (ಎಂ.ಟಿ.ಪಿ.) ಕೆಲ ಅಂಶಗಳನ್ನು ಕಿತ್ತು ಹಾಕಬೇಕೆಂದು ದಾಖಲಾಗಿದ್ದ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಮಹಿಳೆಯರ ಹಿತದೃಷ್ಟಿಯಿಂದ ಸಂಸತ್ತು ಈ ಕಾಯ್ದೆ ರೂಪಿಸಿದೆ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ.ಪರ್ಡಿವಾಲ ಮತ್ತು ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ ತಿಳಿಸಿದೆ. ನಂತರ ಅರ್ಜಿದಾರ ಹೈಕೋರ್ಟ್ ಮೊರೆ ಹೋಗಲು ಅವಕಾಶ ಕೇಳಿದಾಗ, ಸುಪ್ರೀಂ ಕೋರ್ಟ್ ಅನುಮತಿಸಿದೆ.

## ಚಂದ್ರನ ಮೇಲೆ ಕ್ರಮಿಸಿದ ರೋವರ್



ಬೆಂಗಳೂರು, ಆ. 25 - ಚಂದ್ರಯಾನ - 3ರ ರೋವರ್ ಪ್ರಗ್ಯಾನ್, ಚಂದ್ರನ ಮೇಲೆ ಎಂಟು ಮೀಟರ್ ದೂರ ಕ್ರಮಿಸಿದೆ. ಅದರಲ್ಲಿನ ಉಪಕರಣಗಳು ಚಾಲನೆಗೊಂಡಿವೆ ಎಂದು ಇಸ್ರೋ ತಿಳಿಸಿದೆ. ಪ್ರೊಪಲ್ಷನ್ ಮೊಡ್ಯೂಲ್, ಲ್ಯಾಂಡರ್ ಹಾಗೂ ರೋವರ್‌ಗಳಲ್ಲಿರುವ ಎಲ್ಲಾ ಉಪಕರಣಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿವೆ ಎಂದು ಇಸ್ರೋ ತಿಳಿಸಿದೆ.

ರೋವರ್‌ನ ಎಲ್ಲಾ ಯೋಜಿತ ಚಲನೆಗಳನ್ನು ಖಚಿತಪಡಿಸಲಾಗಿದೆ. ರೋವರ್ ಎಂಟು ಮೀಟರ್ ಕ್ರಮಿಸಿದೆ ಎಂದು ಹೇಳಿರುವ ಇಸ್ರೋ, ರೋವರ್ ಚಂದ್ರನ ಮೇಲೆ ಇಳಿಯುವ ವಿಡಿಯೋ ಬಿಡುಗಡೆ ಮಾಡಿದೆ.

# ಬರದಲ್ಲೂ ಆಹಾರ ಧಾನ್ಯ ಇಳುವರಿ ಕಡಿಮೆಯಾಗದು

**ರೈತರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಕೇಂದ್ರದ ಮಾರ್ಗಸೂಚಿ ಮುಂದಿಟ್ಟುಕೊಂಡು ಬರಪೀಡಿತ ಆಯ್ದ ಗ್ರಾಮಗಳಲ್ಲಿ ಬೆಳೆ ಸಮೀಕ್ಷೆ ಮಾಡಲಾಗುತ್ತಿದೆ.**

**- ಚಲುವರಾಯ ಸ್ವಾಮಿ, ಕೃಷಿ ಸಚಿವ**

ಬೆಂಗಳೂರು, ಆ.25 - ಮಳೆ ಕೊರತೆಯಿಂದ ರಾಜ್ಯದ ಬಹುಭಾಗ ಬರದ ಮುಷ್ಠಿಯಲ್ಲಿದ್ದರೂ ಆಹಾರ ಧಾನ್ಯ ಉತ್ಪಾದನೆಯಲ್ಲಿ ವ್ಯತ್ಯಾಸವಾಗದು ಎಂದು ಕೃಷಿ ಸಚಿವ ಚಲುವರಾಯ ಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 130 ತಾಲ್ಲೂಕುಗಳು ಬರದ ಛಾಯೆಯಲ್ಲಿವೆ. ಆದರೆ, ಕೇಂದ್ರ ಸರ್ಕಾರದ ಮಾರ್ಗಸೂಚಿ ಪ್ರಕಾರ ಇವುಗಳನ್ನು ಇನ್ನೂ ಒಂದು ವಾರ ಕಾಲ ಅಧಿಕೃತವಾಗಿ ಘೋಷಣೆ ಮಾಡಲು ಸಾಧ್ಯವಿಲ್ಲ ಎಂದರು.

ಜಲಾಶಯಗಳ ಕೆಳಭಾಗ, ಕೆರೆ-ಕಟ್ಟೆಗಳು ಹಾಗೂ ಬೋರ್‌ವೆಲ್ ವ್ಯಾಪ್ತಿಯಲ್ಲಿ ಬಿತ್ತನೆ ಯಾಗಿರುವ ಬೆಳೆಗಳಿಗೆ ನೀರಿನ ಕೊರತೆ ಇಲ್ಲ. ಉತ್ತರ ಕರ್ನಾಟಕ ಭಾಗದ ಬಹುತೇಕ ಜಲಾಶಯ ಗಳು ಭರ್ತಿಯಾಗಿವೆ. ಉಳಿದ ಭಾಗದಲ್ಲಿ ಒಂದು ಬೆಳೆಗಾಗುವಷ್ಟು ನೀರು ಸಂಗ್ರಹವಾಗಿರುವು ದರಿಂದ ಆಹಾರಧಾನ್ಯ ಉತ್ಪಾದನೆಯಲ್ಲಿ ದೊಡ್ಡ ವ್ಯತ್ಯಾಸವಾಗುವುದಿಲ್ಲ ಎಂದು ಹೇಳಿದರು.

ಮಳೆ ಇಲ್ಲದೆ ರೈತರು ಕಂಗಾಲಾಗಿದ್ದರು, ಅವರ ಬೆನ್ನೆಲುಬಾಗಿ ಸರ್ಕಾರ ನಿಂತಿದೆ. ಒಂದೆಡೆ ವಿಮೆ ಮೂಲಕ ಪರಿಹಾರ ಕೊಡಿಸುವುದು. ಮತ್ತೊಂದೆಡೆ ಗ್ರಾಮೀಣ ಭಾಗದ ಶೇ.90ರಷ್ಟು ಕುಟುಂಬಗಳಿಗೆ ಸರ್ಕಾರದ ನಾಲ್ಕು ಗ್ಯಾರಂಟಿ ಯೋಜನೆಗಳು ಅವರ ಮನೆ ಬಾಗಿಲಿಗೆ ತಲುಪುತ್ತವೆ. ಇದರಿಂದ ಅವನು ಧೃತಿಗೆಡುವ ಅಗತ್ಯವಿಲ್ಲ ಎಂದೂ ಸಚಿವರು ಹೇಳಿದರು.

ಜಿಲ್ಲಾಧಿಕಾರಿಗಳು ಮತ್ತು ನಮ್ಮ ಇಲಾಖಾ ಧಿಕಾರಿಗಳು ಮಾಸಾಂತ್ಯದೊಳಗೆ ವಾಸ್ತವ ಸ್ಥಿತಿಯ ವರದಿ ನೀಡಲಿದ್ದಾರೆ. ಆ ವರದಿಯನ್ನು ಸಚಿವ ಸಂಪುಟದ ಉಪ ಸಮಿತಿಯಲ್ಲಿ ಚರ್ಚಿಸಿ ನಂತರ ಬರ ಘೋಷಣೆ ಮಾಡಲಾಗುವುದು ಎಂದು ತಿಳಿಸಿದರು.

ಮುಂಗಾರು ಹಂಗಾಮಿನಲ್ಲಿ ಶೇ.79ರಷ್ಟು ಅಂದರೆ, 64.84 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಬಿತ್ತನೆಯಾಗಿದೆ. ಆದರೆ, ಬಿತ್ತನೆಯಾಗಿ ಮೊಳಕೆಯೊಡೆದಿದ್ದರೂ ಮಳೆ ಇಲ್ಲದೆ, ರೈತರಿಗೆ ಧಕ್ಕಬಹುದಾದ ಆಹಾರ ಧಾನ್ಯ ಸಿಗುತ್ತಿಲ್ಲ. ಇನ್ನೊಂದು ವಾರದಲ್ಲಿ ಮಳೆಯಾದರೂ (3ನೇ ಪುಟಕ್ಕೆ)

## ಮಳೆ ಕೊರತೆ: ದಾವಣಗೆರೆ ಲೋಕಸಭಾ ಕ್ಷೇತ್ರವನ್ನು ಬರ ಪೀಡಿತ ಘೋಷಿಸಲು ಮನವಿ



ದಾವಣಗೆರೆ, ಆ. 25- ತೀವ್ರ ಮಳೆ ಕೊರತೆಯ ಕಾರಣದಿಂದ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ರೈತಾಪಿ ವರ್ಗಕ್ಕೆ ಸ್ವಲ್ಪಮಟ್ಟಿಗಾದರೂ ಆಸರೆಯಾಗುವ ನಿಟ್ಟಿನಲ್ಲಿ ದಾವಣಗೆರೆ ಲೋಕಸಭಾ ಕ್ಷೇತ್ರವನ್ನು ಬರಪೀಡಿತ ಎಂದು ಘೋಷಣೆ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೃಷಿ ಸಚಿವ ಚೆಲುವರಾಯಸ್ವಾಮಿ, ಕಂದಾಯ ಸಚಿವ ಕೃಷ್ಣ ಭೈರೇಗೌಡರಿಗೆ ಪತ್ರದ ಮೂಲಕ ಸಂಸದ ಜಿ.ಎಂ. ಸಿದ್ದೇಶ್ವರ ಒತ್ತಾಯಿಸಿದ್ದಾರೆ.

ದಾವಣಗೆರೆ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಹರಪನಹಳ್ಳಿ ಸೇರಿ 7 ತಾಲ್ಲೂಕುಗಳಲ್ಲಿ ತೀವ್ರ ಮಳೆ ಕೊರತೆಯುಂಟಾಗಿದ್ದು, ಕೃಷಿಕ ವರ್ಗ ತೀವ್ರ ಸಂಕಷ್ಟಕ್ಕೆ ಗುರಿಯಾಗುವ ಎಲ್ಲಾ (3ನೇ ಪುಟಕ್ಕೆ)

## ಮಣಿಪುರ ಪ್ರಕರಣಗಳ ವಿಚಾರಣೆ ಅಸ್ಸಾಂಗೆ

ನವದೆಹಲಿ, ಆ. 25 - ಮಣಿಪುರದ 17 ಹಿಂಸಾಚಾರ ಪ್ರಕರಣಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್, ಪಕ್ಕದ ಅಸ್ಸಾಂಗೆ ವರ್ಗಾಯಿಸಿದೆ. ಈ ಪ್ರಕರಣಗಳಿಗಾಗಿ ನ್ಯಾಯಿಕ ಅಧಿಕಾರಿಗಳನ್ನು ನೇಮಿಸುವಂತೆಯೂ ಗೌಹಾತಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗೆ ತಿಳಿಸಲಾಗಿದೆ.

ಪ್ರಕರಣದ ಸಂತ್ರಸ್ತರು ಹಾಗೂ ಸಾಕ್ಷಿಗಳು ಆನ್‌ಲೈನ್ ಮೂಲಕ ವಿಚಾರಣೆಗೆ ಹಾಜರಾಗಲು ಅವಕಾಶ ನೀಡಬೇಕು (2ನೇ ಪುಟಕ್ಕೆ)





|| ಶ್ರೀ ಮಜ್ಜಿಗೆರೆ ಮುರುಡ ಬಸವೇಶ್ವರ ಪ್ರಸನ್ನ || || ಶ್ರೀ ಗುರು ಬಕ್ಕೇಶ್ವರ ಮಹಾಸ್ವಾಮಿ ಪ್ರಸನ್ನ ||

ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಶ್ರೀಮತಿ, ಶ್ರೀ ವಿನಯ್ ಮಾಗಾನಹಳ್ಳಿ
ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 22-08-2023ನೇ ಮಂಗಳವಾರ ಬೆಳಿಗ್ಗೆ 7-55 ಕ್ಕೆ ನನ್ನ ಪೂಜ್ಯ ಮಾತೋಶ್ರೀಯವರಾದ
ಶ್ರೀಮತಿ ಮಾಗಾನಹಳ್ಳಿ ಪಾರ್ವತಮ್ಮನವರು
(ದಿ|| ಶ್ರೀ ಮಾಗಾನಹಳ್ಳಿ ರಾಜಶೇಖರಪ್ಪನವರ ಧರ್ಮಪತ್ನಿ)
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು
ದಿನಾಂಕ 26-08-2023ನೇ ಶನಿವಾರ ಮಧ್ಯಾಹ್ನ 12-30 ಕ್ಕೆ ದಾವಣಗೆರೆಯ ಎಂ.ಸಿ.ಸಿ. 'ಎ' ಬ್ಲಾಕ್ ನಲ್ಲಿರುವ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಸಮುದಾಯ ಭವನದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಶ್ರೀಮತಿ ಶ್ರೀ ವಿನಯ್ ಮಾಗಾನಹಳ್ಳಿ, ಶ್ರೀಮತಿ ಶ್ರೀ ಬಸವರಾಜ್ ಮಾಗಾನಹಳ್ಳಿ ಶ್ರೀಮತಿ ವಿನುತ ಶ್ರೀ ವೀರೇಶ್, ಮೊಮ್ಮಕ್ಕಳು, ಮಾಗಾನಹಳ್ಳಿ ವಂಶಸ್ಥರು, ಮುದ್ದಳ್ಳಿ ವಂಶಸ್ಥರು ಹಾಗೂ ಬಂಧು-ಮಿತ್ರರು. ಮೊ. 9886648411
ವಿ.ಸೂ.: ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.





ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಪ್ರಧಾನ ಕಚೇರಿ : ಅಂಚೆ ಪೆಟ್ಟಿಗೆ ಸಂಖ್ಯೆ 217, ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ದಾವಣಗೆರೆ - 577 002. ಫೋ. : 272540, 272541

ಕಾರ್ಯನಿರ್ವಾಹಕ ಮಂಡಲಿ ಸದಸ್ಯರು :



ಶ್ರೀ ಕೋಗುಂಡಿ ಬಕ್ಕೇಶಪ್ಪ, ಅಧ್ಯಕ್ಷರು
ಶ್ರೀ ಅಂದನೂರು ಮುಪ್ಪಣ್ಣ, ಉಪಾಧ್ಯಕ್ಷರು
ಶ್ರೀ ಬಿ.ಸಿ.ಉಮಾಪತಿ, ನಿರ್ದೇಶಕರು
ಶ್ರೀ ಪಲ್ಲಾಗಟ್ಟೆ ಶಿವಾನಂದಪ್ಪ, ನಿರ್ದೇಶಕರು
ಶ್ರೀ ಎಂ. ಚಂದ್ರಶೇಖರ್, ನಿರ್ದೇಶಕರು
ಶ್ರೀ ಟಿ.ಎಸ್. ಜಯರುದ್ರೇಶ್, ನಿರ್ದೇಶಕರು ಮತ್ತು ವ್ಯವಸ್ಥಾಪನಾ ಮಂಡಳಿ ಅಧ್ಯಕ್ಷರು
ಶ್ರೀ ದೇವರಮನಿ ಶಿವಕುಮಾರ್, ನಿರ್ದೇಶಕರು ಮತ್ತು ವ್ಯವಸ್ಥಾಪನಾ ಮಂಡಳಿ ಸದಸ್ಯರು
ಶ್ರೀ ಅಜ್ಜಂಪುರ ಶೆಟ್ರು ವಿಜಯಕುಮಾರ್, ನಿರ್ದೇಶಕರು
ಶ್ರೀಮತಿ ಸುರೇಖ ಎಂ. ಚಿಗಟೇರಿ, ನಿರ್ದೇಶಕರು
ಶ್ರೀ ಕಂಚಿಕೇರಿ ಮಹೇಶ್, ನಿರ್ದೇಶಕರು ಮತ್ತು ವ್ಯವಸ್ಥಾಪನಾ ಮಂಡಳಿ ಸದಸ್ಯರು



ಶ್ರೀ ನಲ್ಲೂರು ಎಸ್. ರಾಘವೇಂದ್ರ, ನಿರ್ದೇಶಕರು
ಶ್ರೀ ಇ.ಎಂ. ಮಂಜುನಾಥ, ನಿರ್ದೇಶಕರು
ಶ್ರೀ ವಿ. ವಿಕ್ರಮ್, ನಿರ್ದೇಶಕರು
ಶ್ರೀಮತಿ ಎ.ಆರ್. ಅರ್ಚನ, ನಿರ್ದೇಶಕರು
ಶ್ರೀ ಮುಂಡಾಸ್ ವೀರೇಂದ್ರ, ಚಾರ್ಟರ್ಡ್ ಅಕೌಂಟೆಂಟ್, ವೃತ್ತಿಪರ ನಿರ್ದೇಶಕರು
ಶ್ರೀ ಮಲ್ಲಿಕಾರ್ಜುನ ಕಣವಿ, ವಕೀಲರು, ವೃತ್ತಿಪರ ನಿರ್ದೇಶಕರು
ಶ್ರೀ ಬೆಳಗಾವಿ ಬಸವರಾಜಪ್ಪ, ಚಾರ್ಟರ್ಡ್ ಅಕೌಂಟೆಂಟ್, ವ್ಯವಸ್ಥಾಪನಾ ಮಂಡಳಿ ಸದಸ್ಯರು
ಶ್ರೀ ಜಂಬಗಿ ರಾಧೇಶ್, ತೆರಿಗೆ ಸಲಹೆಗಾರರು, ವ್ಯವಸ್ಥಾಪನಾ ಮಂಡಳಿ ಸದಸ್ಯರು
ಶ್ರೀ ಕೆ. ಕೊಟ್ರೇಶ್, ಸಾಫ್ಟ್‌ವೇರ್ ಇಂಜಿನಿಯರ್, ವ್ಯವಸ್ಥಾಪನಾ ಮಂಡಳಿ ಸದಸ್ಯರು
ಶ್ರೀ ಬಿ.ಎಸ್. ಮಲ್ಲೇಶ್, ಪ್ರಧಾನ ವ್ಯವಸ್ಥಾಪಕರು
ಶ್ರೀ ಆರ್.ಎ. ಪ್ರಸನ್ನ, ಉಪ ಪ್ರಧಾನ ವ್ಯವಸ್ಥಾಪಕರು

ಬ್ಯಾಂಕಿನ ಷೇರುದಾರರ ಗಮನಕ್ಕೆ

ಮಾನ್ಯ ಸದಸ್ಯರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಬ್ಯಾಂಕಿನ 2022-23ನೇ ಸಾಲಿನ ವಾರ್ಷಿಕ ಮಹಾಸಭೆಯು ದಿನಾಂಕ : 26.08.2023ರ ಶನಿವಾರದಂದು ಬೆಳಿಗ್ಗೆ 11.30 ಗಂಟೆಗೆ ನಗರದ ಶ್ರೀ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ನಡೆಯಲಿದ್ದು, ಮಾನ್ಯ ಸದಸ್ಯರು ಸಕಾಲಕ್ಕೆ ಸಭೆಗೆ ಆಗಮಿಸಬೇಕಾಗಿ ಕೋರಿದೆ.

ಶ್ರೀ ಕೋಗುಂಡಿ ಬಕ್ಕೇಶಪ್ಪ, ಅಧ್ಯಕ್ಷರು | ಶ್ರೀ ಅಂದನೂರು ಮುಪ್ಪಣ್ಣ, ಉಪಾಧ್ಯಕ್ಷರು | ಶ್ರೀ ಬಿ.ಎಸ್. ಮಲ್ಲೇಶ್, ಪ್ರಧಾನ ವ್ಯವಸ್ಥಾಪಕರು

# ದೈಹಿಕ, ಮಾನಸಿಕ ಆರೋಗ್ಯಕ್ಕೆ ಕ್ರೀಡೆ ಬಹುಮುಖ್ಯ



**ಹರಪನಹಳ್ಳಿ ತಾಲ್ಲೂಕು ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ಶಾಸಕರಾದ ಲತಾ ಮಲ್ಲಿಕಾರ್ಜುನ್ ಅಭಿಮತ**

ಹರಪನಹಳ್ಳಿ, ಆ.25- ದೈಹಿಕ, ಮಾನಸಿಕವಾಗಿ ಆರೋಗ್ಯವಾಗಿರಲು ಕ್ರೀಡೆಗಳು ಬಹುಮುಖ್ಯ ಎಂದು ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್ ಹೇಳಿದರು.

ಪಟ್ಟಣದ ನಿಸರ್ಗ ಪದವಿ ಪೂರ್ವ ಕಾಲೇಜಿನಲ್ಲಿ ಶ್ರೀ ಶರಣ ಬಸವ ಬುದ್ದ ಭೀಮ್ ಜೀ ವಿದ್ಯಾಸಂಸ್ಥೆ, ನಿಸರ್ಗ ಪದವಿ ಪೂರ್ವ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ಹರಪನಹಳ್ಳಿ ತಾಲ್ಲೂಕು ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾ ಕೂಟವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕ್ರೀಡೆ ನಮ್ಮ ದೇಹವನ್ನು ಆರೋಗ್ಯವಾಗಿರುಸುತ್ತದೆ. ಇದು ನಮ್ಮ ಕಣ್ಣುಗಳ ಬೆಳಕನ್ನು ಹೆಚ್ಚಿಸುತ್ತದೆ. ಮೂಳೆಗಳನ್ನು ಬಲಪಡಿಸುತ್ತದೆ ಮತ್ತು ರಕ್ತವನ್ನು ಸರಿಯಾಗಿ ಪರಿಚಲನೆ ಮಾಡುತ್ತದೆ. ಕ್ರೀಡೆ ಎನ್ನುವುದು ನಮ್ಮ ಮನಸ್ಸಿನ ಮಟ್ಟವನ್ನು ಅಭಿವೃದ್ಧಿ ಪಡಿಸುವ, ಕೇಂದ್ರೀಕರಿಸುವ ಶಕ್ತಿಯನ್ನು ಹೆಚ್ಚಿಸುವ ಒಂದು ವ್ಯಾಯಾಮವಾಗಿದೆ ಎಂದರು.

ನೀಲಗುಂದದ ಗುಡ್ಡದ ವಿರಕ್ತ ಮಠದ ಶ್ರೀ ಚನ್ನಬಸವ ಶಿವಯೋಗಿಗಳು ಸಾನ್ನಿಧ್ಯ ವಹಿಸಿ ಮಾತನಾಡಿ, ಕ್ರೀಡೆ ನಮ್ಮ ಜೀವನದ ಒಂದು ಭಾಗವಾಗಿದೆ. ದೈಹಿಕ ಹಾಗೂ ಮಾನಸಿಕವಾಗಿ ನಮ್ಮ ಅಭಿವೃದ್ಧಿಯ ಮೂಲವಾಗಿದೆ. ನಮ್ಮ ದೇಹದ ರಕ್ತಪರಿಚಲನೆಗೆ ಸಹಕಾರಿಯಾಗಿದೆ. ಕ್ರೀಡೆ ನಮ್ಮ ಮೆದುಳಿನ ಬೆಳವಣಿಗೆಯಲ್ಲಿ ಪ್ರಯೋಜನಕಾರಿಯಾಗಿದೆ. ಯಶಸ್ವೀ ವ್ಯಕ್ತಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಾಗಿರಲು ಮಾನಸಿಕ ಬೆಳವಣಿಗೆಯು ನಮ್ಮ ಶಾಲಾ ದಿನಗಳಿಂದ ಪ್ರಾರಂಭವಾಗುತ್ತದೆ. ಆದರೆ ದೈಹಿಕ ಬೆಳವಣಿಗೆಗೆ ವ್ಯಾಯಾಮವು ಸಹಕಾರಿಯಾಗುತ್ತದೆ ಎಂದರು.

ಶ್ರೀ ಶರಣ ಬಸವ ಬುದ್ದ ಭೀಮ್ ಜೀ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಗುಂಡಗತ್ತಿ ಕೆ. ಕೊಟ್ರಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿ, ಕ್ರೀಡೆಗಳಿಂದ ಆರೋಗ್ಯ ಸಮತೋಲನವಾಗಿ ಕಾಪಾಡಲು ಸಹಕಾರಿಯಾಗಿದೆ. ನಿದ್ರಾ ಹೀನತೆ ಹಾಗೂ ಒತ್ತಡವನ್ನು ಕಡಿಮೆ ಮಾಡುವುದರ ಜೊತೆಗೆ ಜನರಲ್ಲಿ ಶಿಸ್ತು, ಒಗ್ಗಟ್ಟು ಹಾಗೂ ಸಂಘಟನಾ ಶಕ್ತಿಯನ್ನು ಬೆಳೆಸುತ್ತದೆ ಎಂದರು.

ಉಪವಿಭಾಗಾಧಿಕಾರಿ ಟಿ.ವಿ. ಪ್ರಕಾಶ ಧ್ವಜವಂದನೆ ಸ್ವೀಕಾರ ಮಾಡಿದರು. ಸಿ.ಪಿ.ಐ. ನಾಗರಾಜ ಕಮ್ಮಾರ್ ಕ್ರೀಡಾ ಜ್ಯೋತಿ ಬೆಳಗಿಸಿದರು. ನಿಸರ್ಗ ಪದವಿ ಪೂರ್ವ ಕಾಲೇಜು ಪ್ರಾಚಾರ್ಯರಾದ ಆರ್.ಎಚ್.ಕಲ್ಯಾಣದವರ್ ಕ್ರೀಡಾ ಪ್ರತಿಜ್ಞಾ ವಿಧಿ ಬೋಧಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ಶರಣ ಬಸವ ಬುದ್ದ ಭೀಮ್ ಜೀ ವಿದ್ಯಾ ಸಂಸ್ಥೆಯ ಸಂಸ್ಥಾಪಕ ಸಿ.ಕೊಟ್ರಮ್ಮ ಕೊಟ್ರಪ್ಪ, ಕಾರ್ಯದರ್ಶಿ ವ್ಯವಸ್ಥಾಪಕ ರಾಜು ಎಲಿಗಾರ್, ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿ ಷಣ್ಮುಖಪ್ಪ, ದೈಹಿಕ ಶಿಕ್ಷಣ ಉಪನ್ಯಾಸಕ ಸಾಗರ್.ಪಿ.ಬಿ ಸೇರಿದಂತೆ ಇತರರು ಇದ್ದರು.

# ಹರಪನಹಳ್ಳಿ ಸ್ಥಿರಾಸ್ತಿ ಬೆಲೆ ಪರಿಷ್ಕರಣೆ ಸಾರ್ವಜನಿಕರ ಆಕ್ಷೇಪಣೆಗೆ ಅವಕಾಶ

ಹರಪನಹಳ್ಳಿ, ಆ.25- ತಾಲ್ಲೂಕು ಉಪ ನೋಂದಣಿ ಕಚೇರಿ ವ್ಯಾಪ್ತಿಯಲ್ಲಿ ಬರುವ ಸ್ಥಿರಾಸ್ತಿಗಳ ಮಾರ್ಗಸೂಚಿ ಬೆಲೆಯನ್ನು 2023-24ನೇ ಸಾಲಿಗೆ ಪರಿಷ್ಕರಿಸಲು ಮಾರುಕಟ್ಟೆ ಮೌಲ್ಯ ನಿರ್ಧರಣಾ ಉಪಸಮಿತಿ ನಿರ್ಧರಿಸಿದೆ. ತಹಶೀಲ್ದಾರರು ಹರಪನಹಳ್ಳಿ ಇವರ ಅಧ್ಯಕ್ಷತೆಯಲ್ಲಿ ಕಳೆದ ವಾರ ನಡೆದ

ಸಭೆಯಲ್ಲಿ ಮಾರುಕಟ್ಟೆ ಬೆಲೆಗಳನ್ನು ಪರಿಷ್ಕರಿಸಿ ಪರಿಷ್ಕೃತ ದರಗಳ ಕರಡು ಪ್ರತಿಯನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಉಪನೋಂದಣಿ ಕಚೇರಿಯಲ್ಲಿ ಪ್ರಕಟಿಸಲಾಗಿದೆ.

ಉದ್ದೇಶಿತ ದರಗಳ ಬಗ್ಗೆ ಸಾರ್ವಜನಿಕರು ತಮ್ಮ ಆಕ್ಷೇಪಣೆಗಳೇನಾದರೂ ಇದ್ದಲ್ಲಿ 15 ದಿನಗಳೊಳಗಾಗಿ ಸದಸ್ಯ ಕಾರ್ಯದರ್ಶಿ ಹಾಗೂ ಉಪ ನೋಂದಣಾಧಿಕಾರಿಗಳು, ಮಾರುಕಟ್ಟೆ ಬೆಲೆ ಉಪ ಸಮಿತಿ ಹರಪನಹಳ್ಳಿ ಇವರಿಗೆ ಸಲ್ಲಿಸಲು ಸೂಚಿಸಲಾಗಿದೆ. ಅವಧಿ ಮುಗಿದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ ಎಂದು ತಿಳಿಸಲಾಗಿದೆ.

# 'ನಾನು ಲೋಕಸಭಾ ಕ್ಷೇತ್ರದ ಸ್ಪರ್ಧಾಕಾಂಕ್ಷಿಯಲ್ಲ' : ಡಾ. ಪ್ರಭಾ

ಜಗಳೂರು, ಆ.25- ರಾಜ್ಯದಲ್ಲಿ ಮುಂಬರುವ ಲೋಕಸಭಾ ಚುನಾವಣೆಗೆ ವಿಧಾನಸಭಾ ಚುನಾವಣೆ ಗೆಲುವು ದಿಕ್ಸೂಚಿಯಾಗಲಿದೆ ಎಂದು ಶಾಸಕ ಬಿ. ದೇವೇಂದ್ರಪ್ಪ ಭವಿಷ್ಯ ನುಡಿದರು.

ಪಟ್ಟಣದ ಶಾಸಕರ ನಿವಾಸದಲ್ಲಿ ಇಂದು ಹಮ್ಮಿಕೊಂಡಿದ್ದ ವರಮಹಾಲಕ್ಷ್ಮಿ ಪೂಜೆ ಕಾರ್ಯಕ್ರಮದಲ್ಲಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಪತ್ನಿ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಸ್ವಾಗತಿಸಿ ಮಾತನಾಡಿದರು.

ದೇಶದಲ್ಲಿ ಕೋಮುವಾದಿ ಶಕ್ತಿ ಭ್ರಷ್ಟ ಬಿಜೆಪಿ ಸರ್ಕಾರದ ಆಡಳಿತ ಮುಕ್ತಗೊಳಿಸಬೇಕು. ರಾಜ್ಯದಲ್ಲಿ ಲೋಕಸಭಾ ಚುನಾವಣೆಯಲ್ಲಿ 20ಕ್ಕೂ ಅಧಿಕ ಸ್ಥಾನಗಳಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಬೇಕು. ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದಿಂದ ಯಾರಿಗೇ ಟಿಕೇಟ್ ನೀಡಿದರೂ ಗೆಲ್ಲಿಸುವ ಸಂಕಲ್ಪ ಮಾಡಬೇಕು ಎಂದು ಕಾರ್ಯಕರ್ತರಿಗೆ ಕರೆ ನೀಡಿದರು.

ಭಾರತ ದೇಶದ ಸಂಸ್ಕೃತಿಯಲ್ಲಿ ಮಹಿಳೆಯರಿಗೆ ತಮ್ಮದೇ ಸ್ಥಾನಮಾನವಿದೆ. ವರಮಹಾಲಕ್ಷ್ಮಿ ಪೂಜೆ ವರದಾನವಾಗಿದೆ. ಭಕ್ತಿ ಶ್ರದ್ಧೆಯ ಮಹಿಳೆಯರನ್ನು ಗೌರವಿಸುವ ಹಬ್ಬವಾಗಿದೆ.



ಐಶ್ವರ್ಯ ಸಂಪತ್ತು ಗಳಿಸಿದ ಕುಟುಂಬದ ಸೊಸೆಯಾಗಿ ನಮ್ಮ ಕರೆಗೆ ಓಗೊಟ್ಟು ನಮ್ಮ ಮನೆಗೆ ವರಮಹಾಲಕ್ಷ್ಮಿ ಪೂಜೆಗೆ ಆಗಮಿಸಿರುವುದು ಸಂತೋಷ ತಂದಿದೆ. ಡಾ.ಪ್ರಭಾ ಮಲ್ಲಿಕಾರ್ಜುನ್ ಅವರು ಸರಳ ಸಜ್ಜನಿಕೆಯ ಎಸ್ಸೆಸ್ ಕುಟುಂಬದ ರೂವಾರಿಗಳು, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕ್ಷೇತ್ರದಿಂದ ಮಹಿಳೆಗೆ ಸ್ಥಾನಮಾನ ದೊರಕಲಿ ಎಂದು ಆಶಯ ವ್ಯಕ್ತಪಡಿಸಿದರು.

ಡಾ.ಪ್ರಭಾ ಮಲ್ಲಿಕಾರ್ಜುನ್ ಮಾತನಾಡಿ, ನಾನು ಲೋಕಸಭಾ ಕ್ಷೇತ್ರದ ಸ್ಪರ್ಧಾಕಾಂಕ್ಷಿಯಲ್ಲ. ಅವಕಾಶ ದೊರೆತಲ್ಲಿ, ನನ್ನ ಕುಟುಂಬದವರ ಸಹಕಾರವಿದ್ದಲ್ಲಿ ಸ್ಪರ್ಧೆ ಕುರಿತು ನಾನು ಸಮಾಲೋಚನೆ ನಡೆಸುವೆ ಎಂದರು. ಲೋಕಸಭಾ ಚುನಾವಣೆ ಹತ್ತರದಲ್ಲಿದೆ, ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಗೆಲುವಿಗೆ ಶ್ರಮಿಸಬೇಕು ಎಂದು ತಿಳಿಸಿದರು.

ನನ್ನ ಪತಿ ಎಸ್. ಎಸ್. ಮಲ್ಲಿಕಾರ್ಜುನ್ ಅವರು ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದಾಗ ಜಗಳೂರು ತಾಲ್ಲೂಕಿನಲ್ಲಿ ವ್ಯಾಪಕ ಬೆಂಬಲ ವ್ಯಕ್ತಪಡಿಸಿದ್ದನ್ನು ನಾನು ಮರೆತಿಲ್ಲ. ಜಿಲ್ಲೆಯ 6 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷದಿಂದ ಶಾಸಕರು ಆಯ್ಕೆಯಾಗಿದ್ದು. ಯಾವುದೇ ಸಂದರ್ಭದಲ್ಲಿ ನಮ್ಮ ಮನೆಗೆ ಆಗಮಿಸಿ ಅಹವಾಲು ಸಲ್ಲಿಸಿದರೂ ಈಡೇರಿಸಲು ಬದ್ದ ಎಂದು ಭರವಸೆ ನೀಡಿದರು.

ಶಾಸಕ ದೇವೇಂದ್ರಪ್ಪ ಅವರು ಸಾವಿರಾರು ಮಹಿಳೆಯರಿಗೆ ಬಾಗಿನ ಕೊಡುವ ಮೂಲಕ ವರಮಹಾಲಕ್ಷ್ಮಿ ಹಬ್ಬವನ್ನು ವಿಶೇಷವಾಗಿ ಆಚರಿಸಿರುವುದು ಸಂತೋಷವಾಗಿದೆ ಎಂದು ಪ್ರಭಾ ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಕೆಪಿಸಿಸಿ ಎಸ್ ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ.ಪಾಲಯ್ಯ, ಕೆಪಿಸಿಸಿ ಸದಸ್ಯ ಕಲ್ಲೇಶ್ ರಾಜ್ ಪಟೇಲ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ಎಸ್.ಮಂಜುನಾಥ್, ಪ. ಪಂ. ಸದಸ್ಯರಾದ ರಮೇಶ್ ರೆಡ್ಡಿ, ಶಕೀಲ್ ಅಹಮದ್, ಮಂಜುನಾಥ್, ಮುಖಂಡರಾದ ಸುರೇಶ್ ಗೌಡ, ಶಂಭುಲಿಂಗಪ್ಪ, ತಿಪ್ಪೇಸ್ವಾಮಿ, ಪಲ್ಲಾಗಟ್ಟೆ ಶೇಖರಪ್ಪ, ಗೌಸ್, ಕೀರ್ತಿಕುಮಾರ್ ಮುಂತಾದವರು ಇದ್ದರು.

# ಶೇ.60ರಷ್ಟು ಪಕ್ಷಿ ಪ್ರಭೇದಗಳ ಸಂಖ್ಯೆಯಲ್ಲಿ ಇಳಿಕೆ

ನವದೆಹಲಿ, ಆ. 25 - ಕಳೆದ 30 ವರ್ಷಗಳಲ್ಲಿ ಅಧ್ಯಯನ ಮಾಡಲಾದ 338 ಪಕ್ಷಿ ಪ್ರಭೇದಗಳಲ್ಲಿ ಶೇ.60ರ ಸಂಖ್ಯೆ ಇಳಿಕೆಯಾಗಿದೆ ಎಂದು ನೂತನ ವರದಿಯೊಂದು ತಿಳಿಸಿದೆ. ದೇಶದ 30 ಸಾವಿರ ಪಕ್ಷಿ ವೀಕ್ಷಕರಿಂದ ಮಾಹಿತಿ ಪಡೆದು ಈ ವರದಿ ರೂಪಿಸಲಾಗಿದೆ. ಕಳೆದ ಏಳು ವರ್ಷಗಳಲ್ಲಿ ಶೇ.40ರಷ್ಟು ಪ್ರಭೇದಗಳ ಪಕ್ಷಿಗಳ ಸಂಖ್ಯೆ ಕಡಿಮೆಯಾಗಿದೆ. 338 ಪ್ರಭೇದಗಳ ಪೈಕಿ 204 ಪ್ರಭೇದಗಳ ಸಂಖ್ಯೆ ಕಡಿಮೆಯಾಗಿದೆ. 98ರ ಸಂಖ್ಯೆ ಸ್ಥಿರವಾಗಿದೆ ಹಾಗೂ 36ರ ಸಂಖ್ಯೆ ಹೆಚ್ಚಾಗಿದೆ. ಹುಲ್ಲುಗಾವಲು ಸೇರಿದಂತೆ ಬಯಲು ಪ್ರದೇಶಗಳಲ್ಲಿ ಕಂಡುಬರುವ ಪಕ್ಷಿಗಳ ಸಂಖ್ಯೆಯಲ್ಲಿ ತೀವ್ರ ಇಳಿಕೆಯಾಗಿದೆ. ಸರ್ವಭಕ್ಷಕ ಪಕ್ಷಿಗಳಿಗೆ ಹೋಲಿಸಿದರೆ ಇತರೆ ಪಕ್ಷಿಗಳ ಸಂಖ್ಯೆ ಇಳಿಮುಖವಾಗಿದೆ. ವಲಸೆಯೇತರ ಪಕ್ಷಿಗಳಿಗೆ ಹೋಲಿಸಿದರೆ ವಲಸೆ ಪಕ್ಷಿಗಳಿಗೆ ಹೆಚ್ಚು ಅಪಾಯ ಇದೆ. ಪಶ್ಚಿಮ ಘಟ್ಟಗಳಲ್ಲಿ ಪಕ್ಷಿಗಳ ಇಳಿಮುಖ ತೀವ್ರವಾಗಿದೆ.

# ಮಳೆ ಕೊರತೆ ಮಾಹಿತಿ ಸಲ್ಲಿಸಲು ಶಾಸಕ ಪ್ರಕಾಶ ಕೋಳಿವಾಡ ಸೂಚನೆ

ರಾಣೇಬೆನ್ನೂರು, ಆ.25- ಅತಿವೃಷ್ಟಿ, ಅನಾವೃಷ್ಟಿಯಿಂದ ರೈತರಿಗೆ, ಸಾರ್ವಜನಿಕರಿಗೆ ಆಗಿರುವ ತೊಂದರೆ ಬಗ್ಗೆ ತೀವ್ರ ಗಮನ ಹರಿಸಿ ಕಾರ್ಯ ನಿರ್ವಹಿಸುವಂತೆ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಶಾಸಕ ಪ್ರಕಾಶ ಕೋಳಿವಾಡ ಸೂಚನೆ ನೀಡಿದರು.

ಅವರು ಬೆಳಿಗ್ಗೆ ತಾಲ್ಲೂಕು ಆಡಳಿತದ ಸಭಾಭವನದಲ್ಲಿ ಹೋಬಳಿ ಮತ್ತು ಎಲ್ಲ ಹಂತಗಳ ಅಧಿಕಾರಿ ಹಾಗೂ ಸಿಬ್ಬಂದಿ ಸಭೆ ನಡೆಸಿದರು. ಬೆಳೆ ಪ್ರಮಾಣ ಮತ್ತು ಆಗಿರಬಹುದಾದ ನಷ್ಟದ ಬಗ್ಗೆ ಸರ್ಕಾರಕ್ಕೆ ಸರಿಯಾದ ಮಾಹಿತಿ ಕಳಿಸಲು ಹೇಳಿ, ತಮ್ಮ ಅಧಿಕಾರ ವ್ಯಾಪ್ತಿಯ ಕೇಂದ್ರ ಸ್ಥಾನದಲ್ಲಿ ತಮ್ಮ ಸಿಬ್ಬಂದಿ ಜೊತೆಗಿದ್ದು ಕಾರ್ಯ ನಿರ್ವಹಿಸುವಂತೆ ಶಾಸಕರು ತಿಳಿಸಿದರು.



# 'ದೌರ್ಜನ್ಯ ವಿರುದ್ಧ ಸೌಜನ್ಯ' : ಇಂದಿನಿಂದ ಪಾದಯಾತ್ರೆ

**ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದಿಂದ ಪ್ರತಿಭಟನೆ**

ದಾವಣಗೆರೆ, ಆ. 25- ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಧರ್ಮಸ್ಥಳದಲ್ಲಿ ಅ. 9, 2012 ರಲ್ಲಿ ಅತ್ಯಾಚಾರಕ್ಕೊಳಗಾಗಿ ಧಾರುಣವಾಗಿ ಕೊಲೆಯಾದ ಸೌಜನ್ಯ ಎಂಬ ಯುವತಿ ಕುಟುಂಬಕ್ಕೆ ಇದುವರೆಗೂ ನ್ಯಾಯ ದೊರೆತಿಲ್ಲ ಎಂದು ಆರೋಪಿಸಿ, ಸೂಕ್ತ ಕ್ರಮಕ್ಕೆ ಒತ್ತಾಯಿಸಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ನಾಳೆ ದಿನಾಂಕ 26 ರಿಂದ ಸೆಪ್ಟಂಬರ್ 8 ರವರೆಗೆ ಬೆಳ್ತಂಗಡಿಯಿಂದ ಬೆಂಗಳೂರುವರೆಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಪಕ್ಷದ ರಾಜ್ಯ ಕಾರ್ಯದರ್ಶಿ ಮಲ್ಲಿಕಾರ್ಜುನ ಸ್ವಾಮಿ ಭಟ್ರಹಳ್ಳಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಬೆಳ್ತಂಗಡಿಯಿಂದ ಆರಂಭಗೊಂಡ ಪಾದಯಾತ್ರೆಯು ಧರ್ಮಸ್ಥಳ, ಉಜಿರೆ, ಚಾರ್ಮಡಿ, ಬಣಕಲ್, ಜನ್ನಾಪುರ, ಬೇಲೂರು, ಹೂವಿನಹಳ್ಳಿ ಕಾವಲ್, ಶಾಂತಿಗ್ರಾಮ, ಚನ್ನರಾಯಪಟ್ಟಣ, ಕದಬಳ್ಳಿ, ಯಡಿಯೂರು, ಕುಣಿಗಲ್, ಸೋಲೂರು, ಮಾಕಳಿ ಮಾರ್ಗವಾಗಿ ಬೆಂಗಳೂರು ಸೇರಲಿದೆ.

14 ದಿನಗಳ ಈ ಪಾದಯಾತ್ರೆ ಸುಮಾರು 330 ಕಿ.ಮೀ. ಕ್ರಮಿಸಲಿದ್ದು, ಸೆ. 8 ರಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ರಾಜ್ಯದ ಜನತೆಯ ಪರವಾಗಿ ರಾಜ್ಯ ಸರ್ಕಾರಕ್ಕೆ ಹಕ್ಕೊತ್ತಾಯ ಮಂಡಿಸಲಿದೆ ಎಂದರು.

ಸೌಜನ್ಯ ಹತ್ಯೆ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ತಕ್ಷಣವೇ ಮರು ತನಿಖೆ ನಡೆಸಲು ಕ್ರಮ ಕೈಗೊಳ್ಳಬೇಕು. ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ಪೊಲೀಸ್ ತಂಡ ರಚಿಸಬೇಕು. ರಾಜ್ಯದಲ್ಲಿ ಮಕ್ಕಳ ಮತ್ತು ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರ ಮತ್ತು ಕೊಲೆ ಪ್ರಕರಣಗಳ ಶೀಘ್ರ ವಿಲೇವಾರಿಗೆ ವಿಶೇಷ ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ನಿರಂತರವಾಗಿ ಮಹಿಳೆಯರ ಮೇಲೆ ಅತ್ಯಾಚಾರ, ದೌರ್ಜನ್ಯ, ದಬ್ಬಾಳಿಕೆ ನಡೆಯುತ್ತಿದ್ದು, ಅದಕ್ಷ ಮತತು ಭ್ರಷ್ಟ ಪೊಲೀಸ್ ವ್ಯವಸ್ಥೆಯಿಂದ ಬಹುತೇಕ ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗದಿರುವುದೇ ಇಂತಹ ಪ್ರಕರಣಗಳು ಹೆಚ್ಚಾಗಲು ಕಾರಣವಾಗಿದೆ ಎಂದು ಹೇಳಿದರು.

ಕೆಆರ್‌ಎಸ್ ಪಕ್ಷ ಸಂಗ್ರಹಿಸಿರುವ ಮಾಹಿತಿ ಆಧರಿಸಿ ಹೇಳುವುದಾದರೆ ಕಳೆದ ಹತ್ತು ವರ್ಷಗಳಲ್ಲಿ ಮಹಿಳೆಯರ ಮೇಲೆ ನಡೆದಿರುವ ಅತ್ಯಾಚಾರ, ದೌರ್ಜನ್ಯ, ದಬ್ಬಾಳಿಕೆ ಪ್ರಕರಣಗಳಲ್ಲಿ ಕೇವಲ ಶೇ. 1.18 ರಷ್ಟು ಮಾತ್ರ ಶಿಕ್ಷೆಯಾಗಿರುವುದಾಗಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪಕ್ಷದ ಜಿಲ್ಲಾಧ್ಯಕ್ಷ ಜಿ.ಎಂ. ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಎಂ.ಬಿ. ತಿಪ್ಪೇಸ್ವಾಮಿ, ಉಪಾಧ್ಯಕ್ಷೆ ಷನವಾಜ್ ಖಾನಂ, ಯುವ ಘಟಕದ ಜಿಲ್ಲಾಧ್ಯಕ್ಷ ಎನ್.ಎಸ್. ಅಭಿಷೇಕ್, ಜೆ.ಡಿ. ರಹಮತ್ ಉಲ್ಲಾ ಮತ್ತಿತರರಿದ್ದರು.

# ಕೃತಕ ಬುದ್ಧಿವಂತಿಕೆಯಿಂದ ಭಾರತದಲ್ಲಿ ಹೆಚ್ಚು ಹುದ್ದೆ

ನವದೆಹಲಿ, ಆ. 25 - ಕೃತಕ ಬುದ್ಧಿವಂತಿಕೆ (ಎ.ಐ.) ಮೂಲಕ ಭಾರತದಲ್ಲಿ ಹೆಚ್ಚು ಹುದ್ದೆಗಳು ಸೃಷ್ಟಿಯಾಗುತ್ತವೆ. ಕಡಿಮೆ ಕೌಶಲ್ಯದವರೂ ಉನ್ನತ ಹಂತದ ಹುದ್ದೆಗಳನ್ನು ನಿರ್ವಹಿಸಲು ಸಾಧ್ಯವಾಗಲಿದೆ ಎಂದು ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್ ತಿಳಿಸಿದ್ದಾರೆ.

ಬಿ20 ಸಮ್ಮಿಟ್ ಇಂಡಿಯಾ 2023ರಲ್ಲಿ ಮಾತನಾಡಿದ ಅವರು, ಎ.ಐ. ಕಾರಣದಿಂದ ಹುದ್ದೆಗಳ ಕಡಿತವಾಗುವ ಭೀತಿ ಇದೆ. ಆದರೆ, ಭಾರತದಂತಹ ದೇಶಗಳಲ್ಲಿ ಎ.ಐ. ಜನರನ್ನು ಸಬಲೀಕರಣಗೊಳಿಸುತ್ತದೆ ಎಂದು ತಿಳಿಸಿದರು.

ಯಾವುದೇ ಕೌಶಲ್ಯ ಹೊಂದದವರು ಇಲ್ಲವೇ ಸ್ವಲ್ಪ ಕೌಶಲ್ಯ ಹೊಂದಿದವರು ಉನ್ನತ ಹಂತದ ಉದ್ಯೋಗ ನಿರ್ವಹಿಸಲು ಸಾಧ್ಯವಾಗುತ್ತದೆ ಎಂದವರು ತಿಳಿಸಿದ್ದಾರೆ.

ಎ.ಐ. ನೆರವಿನಿಂದ ನರ್ಸ್‌ಗಳು ವೈದ್ಯರ ಕೆಲಸದ ಹೊರೆ ಕಡಿಮೆ ಮಾಡಲು ಸಾಧ್ಯ. ಎ.ಐ. ಬೇರೆ ಬೇರೆ ಮಾರುಕಟ್ಟೆಗಳಲ್ಲಿ ಬೇರೆ ಬೇರೆ ರೀತಿ ಪರಿಣಾಮ ಬೀರುತ್ತದೆ ಎಂದವರು ಹೇಳಿದರು.

## ತಾನು ಲ್ಯಾಂಡರ್ ರೂಪಿಸಿದ್ದೆ ಎಂದವನ ವಿರುದ್ಧ ಪೊಲೀಸರ ತನಿಖೆ

ಸೂರತ್, ಆ. 25 - ತಾನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ವಿಜ್ಞಾನಿ ಹಾಗೂ ಚಂದ್ರಯಾನ - 3 ಲ್ಯಾಂಡರ್ ವಿನ್ಯಾಸ ರೂಪಿಸಿದ್ದೆ ಎಂದು ಹೇಳಿಕೊಂಡ ವ್ಯಕ್ತಿ ವಿರುದ್ಧ ಗುಜರಾತ್‌ನ ಸೂರತ್ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಮಿತುಲ್ ತ್ರಿವೇದಿ ಎಂಬ ವ್ಯಕ್ತಿ ಸ್ಥಳೀಯ ಮಾಧ್ಯಮಗಳಿಗೆ ಸಂದರ್ಶನ ನೀಡಿ, ಲ್ಯಾಂಡರ್ ವಿನ್ಯಾಸ ರೂಪಿಸಿದ್ದು ನಾನೇ ಎಂದು ಹೇಳಿದ್ದ. ಆದರೆ, ಇಸ್ರೋ ವಿಜ್ಞಾನಿ ಎಂಬುದಕ್ಕೆ ಯಾವುದೇ ಸಾಕ್ಷಿ ನೀಡಿರಲಿಲ್ಲ.

ಕೆಲ ಸ್ಥಳೀಯ ಪತ್ರಿಕೆಗಳು ಈತನ ಹೇಳಿಕೆಯನ್ನು ಪ್ರಶ್ನಿಸಿ ವರದಿ ಪ್ರಕಟಿಸಿದ್ದವು. ಮಿತುಲ್ ತ್ರಿವೇದಿ ನೀಡಿದ ಹೇಳಿಕೆ ಸುಳ್ಳು ಎಂಬುದು ಮೇಲ್ನೋಟಕ್ಕೆ ಕಂಡು ಬಂದಿದೆ. ಈ ಬಗ್ಗೆ ತನಿಖೆ ಆರಂಭಿಸಿರುವುದಾಗಿ ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

## ರಾಣೇಬೆನ್ನೂರಿನಲ್ಲಿ ಬಿಜೆಪಿ ಸಂಭ್ರಮ



ರಾಣೇಬೆನ್ನೂರು, ಆ. 25 - ಚಂದ್ರಯಾನ 3 ಲ್ಯಾಂಡರ್ ಯಶಸ್ವಿಯಾಗಿ ಚಂದ್ರನ ಮೇಲ್ಮೈ ಮಧ್ಯ ತಲುಪಿದ್ದರಿಂದ ಹಾವೇರಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿದ್ದರಾಜ ಕಲಕೋಟಿ, ಜಿಲ್ಲಾ ವಕ್ತಾರ ಕೆ.ಶಿವಲಿಂಗಪ್ಪ, ಮುಖಂಡ ಪ್ರಭು ಹಿಟ್ನಳ್ಳಿ ಮತ್ತಿತರರು ರಾಷ್ಟ್ರಧ್ವಜ ಪ್ರದರ್ಶಿಸಿ, ಪಟಾಕಿ ಸಿಡಿಸಿ, ಸಿಹಿ ಹಂಚಿದರು.

# ಸಾಮಾಜಿಕವಾಗಿ ಸಂವಿಧಾನ ಸಮರ್ಪಕ ಬಳಕೆಯಾಗಿಲ್ಲ

ಹರಿಹರ, ಅ. 25 - ಸಂವಿಧಾನವನ್ನು ರಾಜಕೀಯವಾಗಿ ಮಾತ್ರ ಬಳಕೆ ಮಾಡಿಕೊಂಡಿದ್ದೇವೆ. ಸಾಮಾಜಿಕ, ಆರ್ಥಿಕ ಹಾಗೂ ಔದ್ಯೋಗಿಕವಾಗಿ ಸಮರ್ಪಕವಾಗಿ ಬಳಕೆ ಮಾಡಿಕೊಳ್ಳುವಲ್ಲಿ ವಿಫಲರಾಗಿದ್ದೇವೆ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅಭಿಪ್ರಾಯಪಟ್ಟರು.

ನಗರದ ಪ್ರೊ. ಬಿ. ಕೃಷ್ಣಪ್ಪ ಭವನದ ಮೈತ್ರಿವನ ಸಭಾಂಗಣದಲ್ಲಿ ಕರ್ನಾಟಕ ದಲಿತ ಸಂಘರ್ಷ ರಾಜ್ಯ ಸಮಿತಿ(ಅಂಬೇಡ್ಕರ್ ವಾದ) ಇವರ ವತಿಯಿಂದ ನಡೆದ 'ದಲಿತ ಚಳವಳಿ ಅಂದು, ಇಂದು, ಮುಂದು' ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ಕಾರ್ಯಕರ್ತರು ಮತ್ತು ಪದಾಧಿಕಾರಿಗಳ ರಾಜ್ಯ ಮಟ್ಟದ ಅಧ್ಯಯನ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅತಿಯಾದ ಜಾತಿ ವ್ಯವಸ್ಥೆಯಿಂದ ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ ಅಸಮಾನತೆಗಳು ಹೆಚ್ಚಾಗುತ್ತಿವೆ. ಸಂವಿಧಾನದಲ್ಲಿ ಸಾಮಾಜಿಕ ನ್ಯಾಯದ ತಿಳಿವಳಿಕೆ ಇದೆ. ಅಸಮಾನತೆ ನಿವಾರಣೆ ಸಂವಿಧಾನದಿಂದ ಮಾತ್ರ ಸಾಧ್ಯ ಎಂದವರು ಹೇಳಿದರು.

ಬ್ರಿಟಿಷರ ವಿರುದ್ಧದ ಹೋರಾಟ ಕೇವಲ ರಾಜಕೀಯ ಉದ್ದೇಶದ್ದಲ್ಲ. ಅದು ಆರ್ಥಿಕ ಹಾಗೂ ಸಾಮಾಜಿಕ ಹೋರಾಟವೂ ಆಗಿತ್ತು. ಅಸ್ಪೃಶ್ಯತೆ ನಿವಾರಣೆ, ಸತಿ ಸಹಗಮನ ಪದ್ಧತಿ, ದೇವದಾಸಿ ಪದ್ಧತಿಗಳ ವಿರುದ್ಧ ಸಾಮಾಜಿಕ ಹೋರಾಟ ನಡೆದಿತ್ತು ಎಂದು ನ್ಯಾಯಮೂರ್ತಿ ನಾಗಮೋಹನ ದಾಸ್ ತಿಳಿಸಿದರು.



**ಹರಿಹರದ ಕಾರ್ಯಕ್ರಮದಲ್ಲಿ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್**

ಭಾರತದ ಸಾಧನೆಗೆ ಸಂವಿಧಾನ ಕಾರಣ. ನಿನ್ನೆ ನಡೆದ ಬಾಹ್ಯಾಕಾಶ ಸಾಧನೆಗೆ ಸಂವಿಧಾನ ಕಾರಣ. ರಾಷ್ಟ್ರಪತಿ, ಪ್ರಧಾನಿ ಸೇರಿದಂತೆ ಹಲವಾರು ಹುದ್ದೆಗಳಲ್ಲಿ ಕೆಳ ವರ್ಗದ ಜನರು ಅಧಿಕಾರಕ್ಕೆ ಬರಲು ಸಂವಿಧಾನ ಕಾರಣ ಎಂದು ಹೇಳಿದರು.

ಮಾನವ ಬಂಧುತ್ವ ವೇದಿಕೆಯ ಸಂಚಾಲಕ ಎ.ಬಿ. ರಾಮಚಂದ್ರಪ್ಪ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಸಂಘಟನೆಗಳು ಹರಿದು ಹಂಚಿಕೆಯಾಗಿವೆ. ಬಲಿಷ್ಠ, ಸದೃಢ ಹಾಗೂ ಜಾತ್ಯತೀಯ ಭಾರತ ಕಟ್ಟಲು ಸಂಘಗಳು ಜೊತೆಯಾಗಬೇಕಿದೆ ಎಂದರು.

ಬಾಹ್ಯಾಕಾಶದ ಸಾಧನೆ ಜೊತೆಗೆ, ನಮ್ಮ ದೇಶದಲ್ಲಿ ಇರುವಂತ ಅಸ್ಪೃಶ್ಯತೆ ನಿವಾರಣೆ ಆಗಬೇಕು. ನಮ್ಮ ಊರು, ಕೇರಿ ಅಭಿವೃದ್ಧಿ ಕಂಡಾಗ ವಿಶ್ವಗುರು ಆಗಲು ಸಾಧ್ಯ ಎಂದು ಹೇಳಿದರು.

ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಅಧ್ಯಕ್ಷತೆಯನ್ನು ವಹಿಸಿದ್ದರು.

ಈ ಸಂದರ್ಭದಲ್ಲಿ ಕಾರ್ಯದರ್ಶಿ ಡಾ. ಜಿ.ಎನ್. ಉಮೇಶ್, ಬಿ. ರಾಜಶೇಖರ ಮೂರ್ತಿ ಜನ ಪ್ರಕಾಶನ, ರುದ್ರಪ್ಪ ಹನಗವಾಡಿ, ಜಿಲ್ಲಾ ಸಂಚಾಲಕ ದುಗ್ಗಪ್ಪ, ಮಂಜುನಾಥ್ ನಾಗನಾಳ, ನಾಗಪ್ಪ ಬಡಗೇರ್, ನಾಗರಾಜ್, ಹುಲಗೇಶ್, ಅಣ್ಣಯ್ಯ ಚಿಕ್ಕಮಗಳೂರು, ಜೀವೇಶ್ ಮತ್ತಿತರರು ಉಪಸ್ಥಿತರಿದ್ದರು.

## ರಾಣೇಬೆನ್ನೂರಿನಲ್ಲಿ ಇಂದು ಜಿಲ್ಲಾ ನೇಕಾರ ಒಕ್ಕೂಟದ ಸಭೆ

ಜಿಲ್ಲಾ ನೇಕಾರ ಒಕ್ಕೂಟದ ನೂತನ ಪದಾಧಿಕಾರಿಗಳ ಆಯ್ಕೆ ಹಿನ್ನಲೆಯಲ್ಲಿ ಇಂದು ಮಧ್ಯಾಹ್ನ 3.30ಕ್ಕೆ ಶ್ರೀ ತುಳಜಾಭವಾನಿ ದೇವಸ್ಥಾನದ ಸಭಾ ಭವನದಲ್ಲಿ ಸಭೆ ಕರೆಯಲಾಗಿದೆ ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಾನಂದ ಬಗಾದಿ ತಿಳಿಸಿದ್ದಾರೆ. ಸಭೆಗೆ ನೇಕಾರ ಒಕ್ಕೂಟದ ರಾಜ್ಯಾಧ್ಯಕ್ಷ ಸೋಮಶೇಖರ, ಪ್ರಧಾನ ಕಾರ್ಯದರ್ಶಿ ರಾಘು ಶೆಟ್ಟಿಗಾರ, ಉಪಾಧ್ಯಕ್ಷ ರವೀಂದ್ರ ಕಲುಬುರ್ಗಿ, ಕಾರ್ಯದರ್ಶಿ ಡಾ. ಬಸವರಾಜ ಕೇಲಗಾರ, ತೋಟಪ್ಪ ಶೇಖ, ನವೀನ ಚಿಲ್ಲಾಳ ಆಗಮಿಸುವರು. ಒಕ್ಕೂಟದ ಜಿಲ್ಲಾಧ್ಯಕ್ಷ ಶಂಕ್ರಣ್ಣ ನ್ಯಾಮತಿ ಸಭೆಯ ಅಧ್ಯಕ್ಷತೆ ವಹಿಸುವರು.

## ನಗರದಲ್ಲಿ ಇಂದು ಸಂವಾದ

ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಇಂದು ಸಂಜೆ 4.30 ಕ್ಕೆ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಸಭಾಂಗಣದಲ್ಲಿ ನಡೆಯಲಿದೆ.

'ವ್ಯಕ್ತಿ ಮತ್ತು ಸಮಾಜದ ಆರೋಗ್ಯ, ಆನಂದಕ್ಕೆ ಸಮಾಜ ಸೇವೆ' ಕುರಿತು ಜಿಲ್ಲಾ ಮಾಹಿತಿ ತಂತ್ರಜ್ಞಾನ ಅಧಿಕಾರಿ ಉದಯ್ ಕುಮಾರ್ ಮಾತನಾಡಲಿದ್ದಾರೆ. ಗುರುಮೂರ್ತಿ, ಸಿ.ಜಿ. ದಿನೇಶ, ಎಂ.ಎನ್. ಕೊಟ್ರೇಶ್ವರ್, ಡಾ. ಶಶಿಧರ್ ತವಣಿ, ನವೀನ್ ಗುಬ್ಬಿ, ಕಿರಣ್ ಬೊಂಗಾಳೆ, ಸಚಿನ್ ಕೊಂಡಜ್ಜಿ, ನಿರಂಜನ್ , ಕಾರ್ತಿಕ ಭಾಗವಹಿಸಲಿದ್ದಾರೆ.

## ಮಣಿಪುರ ಪ್ರಕರಣಗಳ ವಿಚಾರಣೆ ಅಸ್ಸಾಂಗೆ

**(1ನೇ ಪುಟದಿಂದ)** ಎಂದೂ ಸುಪ್ರೀಂ ಕೋರ್ಟ್ ತಿಳಿಸಿದೆ.

ಸಿ.ಬಿ.ಐ. ತನಿಖೆ ನಡೆಸುತ್ತಿರುವ 17 ಪ್ರಕರಣಗಳ ವರ್ಗಾವಣೆಗೆ ಆದೇಶಿಸಲಾಗಿದೆ. ಈ ವರ್ಗಾವಣೆಯನ್ನು ವಿರೋಧಿಸಿ ದಾಖಲಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ.

**ಸಿರಿಗೆರೆಯ ಶ್ರೀಮತಿ ಸಿದ್ದಮ್ಮ ನಿಧನ**



ಚಿತ್ರದುರ್ಗ ತಾಲ್ಲೂಕು ಸಿರಿಗೆರೆಯ ರಿಪಬ್ಲಿಕ್ ಬಸ್ ಮಾಲೀಕರಾದ ಎಮ್. ರೇವಣ್ಣನವರ ಧರ್ಮಪತ್ನಿ ಶ್ರೀಮತಿ ಸಿದ್ದಮ್ಮ (82) ಅವರು ದಿನಾಂಕ 25-8-2023ರ ಶುಕ್ರವಾರ ಸಂಜೆ ನಿಧನರಾದರು. ಓರ್ವ ಪುತ್ರಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯ ಕ್ರಿಯೆಯು ದಿನಾಂಕ 26-8-2023ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಸಿರಿಗೆರೆಯ ಮೃತರ ತೋಟದಲ್ಲಿ ನಡೆಯಲಿದೆ.

# ಕೇಜ್ರಿವಾಲ್ ಮಾನಹಾನಿ ವಿಚಾರಣೆ ತಡೆಗೆ ಸುಪ್ರೀಂ ಕೋರ್ಟ್ ನಕಾರ

ನವದೆಹಲಿ, ಆ. 25 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಶೈಕ್ಷಣಿಕ ಅರ್ಹತೆಗೆ ಸಂಬಂಧಿಸಿದಂತೆ ಗುಜರಾತ್ ವಿಶ್ವವಿದ್ಯಾಲಯ ದಾಖಲಿಸಿರುವ ಅಪರಾಧಿಕ ಮಾನಹಾನಿ ಪ್ರಕರಣಕ್ಕೆ ತಡೆ ನೀಡಬೇಕು ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ದಾಖಲಿಸಿದ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಮೋದಿ ಪದವಿಗೆ ಸಂಬಂಧಿಸಿದಂತೆ ಆರ್.ಟಿ.ಐ. ಕಾಯ್ದೆಯಡಿ ಅರ್ಜಿ ದಾಖಲಿಸಲಾಗಿತ್ತು. ಈ ಅರ್ಜಿಯ ಹಿನ್ನೆಲೆಯಲ್ಲಿ ಮಾಹಿತಿ ನೀಡುವಂತೆ ಮುಖ್ಯ ಮಾಹಿತಿ ಆಯುಕ್ತರು ಆದೇಶಿಸಿದ್ದರು. ಈ ಆದೇಶವನ್ನು ಗುಜರಾತ್ ಹೈಕೋರ್ಟ್ ತಳ್ಳಿ ಹಾಕಿತ್ತು.

ನಂತರ ಕೇಜ್ರಿವಾಲ್ ಹಾಗೂ ಆಮ್ ಆದ್ಮಿ ಪಾರ್ಟಿ ನಾಯಕ ಸಂಜಯ್ ಸಿಂಗ್ ಅವರು ಗುಜರಾತ್ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ನೀಡಿದ ಹೇಳಿಕೆಗಳಿಗೆ ಆಕ್ಷೇಪಿಸಿ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಪಿಯೂಶ್ ಮಾನನಷ್ಟ ಪ್ರಕರಣ ದಾಖಲಿಸಿದ್ದರು.

ಈ ಪ್ರಕರಣ ತಡೆಯುವಂತೆ ಕೇಜ್ರಿವಾಲ್ ಗುಜರಾತ್ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು. ಆ ಅರ್ಜಿಯನ್ನು ಹೈಕೋರ್ಟ್ ತಳ್ಳಿ ಹಾಕಿತ್ತು.

ಹೈಕೋರ್ಟ್ ಆಗಸ್ಟ್ 29ರಂದು ವಿಚಾರಣೆ ನಡೆಸಲಿದೆ. ಈ ನಡುವೆ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದ ಕೇಜ್ರಿವಾಲ್, ಪ್ರಕರಣ ತಡೆಯುವಂತೆ ಕೋರಿದ್ದರು. ಆದರೆ, ನ್ಯಾಯಾಲಯ ಈ ಅರ್ಜಿಯ ವಿಚಾರಣೆಗೆ ನಿರಾಕರಿಸಿದೆ.

## ಜಗಳೂರು ಸ್ಥಿರ ಸ್ವತ್ತುಗಳ ಮಾರುಕಟ್ಟೆ ಬೆಲೆ ಪರಿಷ್ಕರಣೆ: ಆಕ್ಷೇಪಣೆಗೆ ಕಾಲಾವಕಾಶ

ಜಗಳೂರು, ಆ.25- ಕೇಂದ್ರ ಮೌಲ್ಯಮಾಪನ ಸಮಿತಿ ನಿರ್ದೇಶನದಂತೆ 2023-24ನೇ ಸಾಲಿಗೆ ತಾಲ್ಲೂಕು ವ್ಯಾಪ್ತಿಯಲ್ಲಿ ಸ್ಥಿರಾಸ್ತಿ ಮಾರುಕಟ್ಟೆ ದರಗಳನ್ನು ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ಕಳೆದ 22ರಂದು ಸಭೆ ಸೇರಿ ಪರಿಷ್ಕರಿಸಿ, ಕರಡು ಪ್ರತಿ ಪ್ರಕಟಿಸಲಾಗಿದೆ.

ಪ್ರಸ್ತಾವಿತ ದರಗಳಿಗೆ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದ್ದು, 15 ದಿನಗಳ ಒಳಗಾಗಿ ಉಪ ನೋಂದಣಿ ಕಛೇರಿಗೆ ಸಲ್ಲಿಸಬಹುದು.

# ಹನಗವಾಡಿಯಲ್ಲಿನ ರಾಜ್ಯಮಟ್ಟದ ಅಧ್ಯಯನ ಶಿಬಿರದಲ್ಲಿ ಇಂದು

ಹರಿಹರ ತಾಲ್ಲೂಕು ಹನಗವಾಡಿ ಗ್ರಾಮದ ಪ್ರೊ. ಬಿ. ಕೃಷ್ಣಪ್ಪ ಭವನ (ಮೈತ್ರಿ ವನ)ದಲ್ಲಿ ನಡೆಯುತ್ತಿರುವ ದಲಿತ ಚಳವಳಿ ಅಂದು, ಇಂದು, ಮುಂದು ಕುರಿತ ಕಾರ್ಯಕರ್ತರು ಮತ್ತು ಪದಾಧಿಕಾರಿಗಳ ರಾಜ್ಯಮಟ್ಟದ ಅಧ್ಯಯನ ಶಿಬಿರದಲ್ಲಿ ಇಂದು ವಿವಿಧ ಗೋಷ್ಠಿಗಳು ನಡೆಯಲಿವೆ.

ಬೆಳಿಗ್ಗೆ 10 ಗಂಟೆಗೆ ಮೊದಲ ಗೋಷ್ಠಿ ನಡೆಯಲಿದ್ದು, 'ಶಿಕ್ಷಣ ವ್ಯವಸ್ಥೆ ಮತ್ತು ದಲಿತರ ಪ್ರತಿನಿಧೀಕರಣ' ವಿಚಾರ ಕುರಿತು ಜನಪರ ಹೋರಾಟಗಾರ ಬಿ. ಶ್ರೀಪಾದ ಭಟ್, ರಾಮನಗರ ಪ್ರಾಧ್ಯಾಪಕ ಡಾ. ಹೆಚ್.ಡಿ. ಉಮಾಶಂಕರ್ ವಿಷಯ ಮಂಡನೆ ಮಾಡುವರು.

ಮಧ್ಯಾಹ್ನ 12 ಕ್ಕೆ ನಡೆಯುವ ಎರಡನೇ ಗೋಷ್ಠಿಯಲ್ಲಿ 'ಮೀಸಲಾತಿಯ ಚಾರಿತ್ರಿಕ ಬೆಳವಣಿಗೆ ಮತ್ತು ನ್ಯಾಯಾಂಗದ ತೀರ್ಪುಗಳು' ಕುರಿತು ಹೈಕೋರ್ಟ್ ವಕೀಲ ಹೆಚ್.ವಿ. ಮಂಜುನಾಥ ಅವರೊಂದಿಗೆ ಗುಂಪು ಚರ್ಚೆ ನಡೆಸಲಾಗುವುದು.

ಮಧ್ಯಾಹ್ನ 2 ಗಂಟೆಗೆ 'ಮಾಧ್ಯಮಗಳು ಮತ್ತು ದಲಿತರ ಪ್ರಶ್ನೆಗಳು' ಕುರಿತು ಪತ್ರಕರ್ತ ಡಾ. ರವಿಕುಮಾರ್ ಬಾಗಿ ಮಾತನಾಡಲಿದ್ದಾರೆ. ಸಂಜೆ 4 ಗಂಟೆಗೆ 'ಜನಪ್ರಿಯ ಸಂಸ್ಕೃತಿಯಲ್ಲಿ ಅಂಬೇಡ್ಕರ್' ವಿಚಾರ ಕುರಿತು ಕೆ.ಪಿ. ಲಕ್ಷ್ಮಣ್, ಅನಿಲ್ ರೇವೂರ್ ಮಾತನಾಡಲಿದ್ದಾರೆ. ನಂತರ ಸಂಜೆ 6 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# 'ಬದ್ಧತೆ ಇರುವವ ಮಾತ್ರ ಬದುಕಿನಲ್ಲಿ ಗೆಲ್ಲುತ್ತಾನೆ'



### ಮುಂಬಯಿನ ಡೊಂಬವಲಿಯಲ್ಲಿ 'ತುಮ್ಹಾರೆ ಸಿವಾ..' ವಚನ ಸಂಸ್ಕೃತಿ ಅಭಿಯಾನದಲ್ಲಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

ಮುಂಬೈ, ಆ.25- ಹಿರಿಯ ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮೀಜಿ ಯವರು ಕಾಲ, ಕಾಸು, ಕಾಯಕವನ್ನು ಎಂದೂ ವ್ಯರ್ಥ ಮಾಡಿದವರಲ್ಲ. ಅದೇ ಪರಂಪರೆಯನ್ನು ತಾವು ಮುಂದುವರೆಸಿಕೊಂಡು ಬಂದಿರುವುದಾಗಿ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಇಲ್ಲಿನ ಡೊಂಬವಲಿಯಲ್ಲಿ ನಡೆದ 'ತುಮ್ಹಾರೆ ಸಿವಾ ಔರ್ ಕೋಯಿ ನಹೀ' ವಚನ ಸಂಸ್ಕೃತಿ ಅಭಿಯಾನದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಇದೊಂದು ಅಪರೂಪದ ಸಾಂಸ್ಕೃತಿಕ ಅಭಿಯಾನ. ಇಡೀ ಭಾರತದಲ್ಲಿ ಈ ರೀತಿಯ ಸಂಚಲನ ಇದುವರೆಗೂ ನಡೆದಿಲ್ಲ. ಈ ಕಾರ್ಯದ ಹಿಂದೆ ಎಷ್ಟೆಲ್ಲಾ ಕಷ್ಟ ಇದೆ ಅಂತ ಇಲ್ಲಿರುವಂತಹ ಕೆಲವರಿಗಾದರೂ ಗೊತ್ತಿದೆ. ನಾವು ಇದ್ದ ವಿಚಾರಗಳನ್ನು ನೇರವಾಗಿ ಹೇಳುವುದನ್ನು ಮೈಗೂಡಿಸಿಕೊಂಡಿದ್ದೇವೆ. ಯಾರೋ ಸಿಟ್ಟು, ಬೇಸರ ಆಗ್ತಾರೆ ಅಂತ್ಹೇಳಿ ಸತ್ಯವನ್ನು ಮರೆಮಾಚುವ ಅಗತ್ಯವಿಲ್ಲ. ಶರಣರ ವಚನಗಳನ್ನು ಎಷ್ಟೇ ಕಷ್ಟವಾದರೂ ಅದರ ಪರಿಶ್ರಮವನ್ನು ನಾವು ಅನುಭವಿಸಿ ಸಮಾಜಕ್ಕೆ ನಲಿವನ್ನು ನೀಡಬೇಕೆಂಬ ಧ್ಯೇಯವನ್ನು ನಮ್ಮ ಕಣ್ಮುಂದೆ ಇಟ್ಟುಕೊಂಡಿದ್ದೇವೆ ಎಂದು ನುಡಿದರು.

ನಮ್ಮ ಕಲಾವಿದರು ಆರೋಗ್ಯವನ್ನೂ ಲೆಕ್ಕಿಸದೇ ಏನೂ ನಡೆದಿಲ್ಲವೇನೋ ಎನ್ನುವ ಹಾಗೆ ಅವರು ವೇದಿಕೆಯಲ್ಲಿ ನೃತ್ಯ ಪ್ರದರ್ಶನ ಮಾಡುತ್ತಾರೆ. ಅದೊಂದು ಬದುಕಿಗೆ ಬದ್ಧತೆ. ನಾವು ಯಾವುದಾದರೊಂದು ಕೆಲಸಕ್ಕೆ ಒಪ್ಪಿಕೊಂಡಿದ್ದೇವೆ ಎಂದರೆ ಆ ಬದ್ಧತೆಗೆ ತಕ್ಕ ಹಾಗೆ ನಡೆದುಕೊಳ್ಳಬೇಕು. ಬದ್ಧತೆಯಿಲ್ಲದ ಬದುಕನ್ನು ನಡೆಸುವವರು ಬದುಕಿನಲ್ಲಿ ಸೋಲುತ್ತಾರೆ. ಯಾರಿಗೆ ಬದ್ಧತೆ ಇರುತ್ತೋ ಅವರು ಬದುಕಿನಲ್ಲಿ ಗೆಲ್ಲುತ್ತಾರೆ. ಹಾಗಾಗಿ ನಮ್ಮ ಕಲಾವಿದರು ಬದುಕಿನಲ್ಲಿ ಗೆದ್ದಿದ್ದಾರೆ ಅಂತ ಭಾವಿಸಿದ್ದೇವೆ. ಈ ಅಭಿಯಾನ ಅನುಭವ, ಅನುಭಾವ ಗೋಷ್ಠಿ ಇದ್ದ ಹಾಗೆ. ಶರಣರು ಏನೇ ಹೇಳಿದರೂ ಅದನ್ನು ಒಪ್ಪಿಕೊಳ್ಳುತ್ತಿರಲಿಲ್ಲ. ಪರಸ್ಪರ ಸಂವಾದ ಮಾಡುವುದರ ಮೂಲಕ ಹೊಸ ಬೆಳಕನ್ನು ಸಮಾಜಕ್ಕೆ ಕೊಡುತ್ತಿದ್ದರು. ಆ ಬೆಳಕನ್ನು ನಾವು ನೀವೂ ಸೇರಿ ಪಡೆಯಬೇಕು ಎನ್ನುವಂಥದ್ದು ನಮ್ಮ ಅಭಿಲಾಷೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಆರ್.ಬಿ.ಹೆಬ್ಬಳ್ಳಿ ವಹಿಸಿದ್ದರು. ಹೋಟೆಲ್ ಉದ್ಯಮಿ ಭಾಸ್ಕರ ಶೆಟ್ಟಿ, ಡೊಂಬಿವಲಿ ಕರ್ನಾಟಕ ಸಂಘದ ಕಾರ್ಯಾಧ್ಯಕ್ಷ ಸುಕುಮಾರ ಎನ್. ಶೆಟ್ಟಿ, 'ಅನಂತ ಹಲವಾಯಿ' ಖ್ಯಾತಿಯ ರಾಜು ಗವಳಿ, ಹಿರಿಯ ಪತ್ರಕರ್ತ ವಸಂತ ಕಲಕೋಟಿ ಹಾಗೂ ಬಸವ ಸೇವಾ ಮಂಡಳ ಡೊಂಬಿವಲಿ ಕಾರ್ಯಾಧ್ಯಕ್ಷ ಬಸಲಿಂಗಪ್ಪ ಸೊಡ್ಡಗಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಗುರುರಾಜ ಪೋತನೀಸ ಕಾರ್ಯಕ್ರಮ ನಿರೂಪಿಸಿದರು.

# ರೋಗ ನಿರೋಧಕತೆಯಲ್ಲೂ ಲಿಂಗಭೇದ !

### ಮಹಿಳೆ ಹಾಗೂ ಪುರುಷರಲ್ಲಿ ಯಾರಿಗೆ ಹೆಚ್ಚು ಲಾಭ ?



ಬರ್ಮಿಂಗ್‌ಹ್ಯಾಮ್, ಆ. 25 - ಶೀತ, ಜ್ವರ ಇತ್ಯಾದಿಗಳು ಬಂದಾಗ ಹೆಂಗಸರಿಗಿಂತ ಗಂಡಸರೇ ಹೆಚ್ಚು ಬಳಲುವುದನ್ನು ಹಲವರು ಗಮನಿಸಿರಬಹುದು. ಹೀಗಾಗಿ ಗಂಡಸರಿಗೆ ಹೆಚ್ಚು ಶೀತ - ಜ್ವರ ಇತ್ಯಾದಿಗಳು ಕಾಡುವಾಗ 'ಮ್ಯಾನ್ ಫ್ಲು' ಎಂದೂ ಬಣ್ಣಿಸುತ್ತಾರೆ.

ರೋಗ ನಿರೋಧಕತೆ ಪುರುಷರಿಗಿಂತ ಮಹಿಳೆಯರಲ್ಲಿ ಹೆಚ್ಚಾಗಿರುತ್ತದೆ ಎಂಬುದು ಬಹಳಷ್ಟು ಜನರಿಗೆ ಗೊತ್ತಿಲ್ಲ ಎಂದು ಬ್ರಿಟನ್‌ನ ಬರ್ಮಿಂಗ್‌ಹ್ಯಾಮ್ ಯೂನಿವರ್ಸಿಟಿಯ ಪ್ರಾಧ್ಯಾಪಕರಾದ ಹೆಲೆನ್ ಮೆಕ್‌ಗೆಟ್ರಿಕ್ ಹೇಳಿದ್ದಾರೆ.

ಹೆಚ್.ಐ.ವಿ., ಹೆಪಟೈಟಿಸ್ ಬಿ ಹಾಗೂ ಮಲೇರಿಯಾ ಸಂಬಂಧದ ರೋಗಗಳಿಗೆ ಪುರುಷರೇ ಹೆಚ್ಚು ಸಿಲುಕುತ್ತಾರೆ. ಅವರಲ್ಲಿ ರೋಗ ಲಕ್ಷಣಗಳೂ ತೀವ್ರವಾಗಿರುತ್ತವೆ ಎಂದು ವಿಶ್ವವಿದ್ಯಾನಿಲಯದ ಇನ್ನೋರ್ವ ಪ್ರಾಧ್ಯಾಪಕ ಆಸಿಫ್ ಇಕ್ಬಾಲ್ ಹೇಳಿದ್ದಾರೆ.

ಹೆಪಟೈಟಿಸ್ ಬಿ, ಕ್ಷಯ ಹಾಗೂ ಹೊಟ್ಟೆ ನೋವಿಗೆ ಕಾರಣವಾಗುವ ಬ್ಯಾಕ್ಟೀರಿಯಾ ಆದ ಕ್ಯಾಪಿಲೊಬ್ಯಾಕ್ಟರ್ ಜೆಲುನಿ ಸಮಸ್ಯೆಗಳಿಂದ ಆಸ್ಪತ್ರೆಗೆ ದಾಖಲಾಗುವವರಲ್ಲಿ ಪುರುಷರ ಸಂಖ್ಯೆಯೇ ಹೆಚ್ಚು ಎಂದು ಉಭಯ ಉಪನ್ಯಾಸಕರು ತಿಳಿಸಿದ್ದಾರೆ.

ಹಾಗಾದರೆ ರೋಗ ನಿರೋಧಕತೆ ಹೆಚ್ಚಾಗಿರುವುದು ಹೆಣ್ಮಕ್ಕಳ ಅದೃಷ್ಟ ಎಂದು ಕೆಲವರು ಭಾವಿಸಬಹುದು. ಆದರೆ, ವಾಸ್ತವ ಸ್ಥಿತಿ ಅಷ್ಟು ಸರಳ ಇಲ್ಲ. ರೋಗ ನಿರೋಧಕ ವ್ಯವಸ್ಥೆಗೇ ಸಮಸ್ಯೆ ಆದಾಗ ತೀವ್ರ ಸಂಕಷ್ಟ ಎದುರಿಸುವವರು ಮಹಿಳೆಯರೇ. ಹೀಗಾಗಿ ರೋಗದ ವಿಷಯದಲ್ಲಿ ಒಂದೇ ನಾಣ್ಯಕ್ಕೆ ಎರಡು ಬೇರೆ ಬೇರೆ ಮುಖಗಳಿವೆ ಎಂದರೆ ತಪ್ಪಾಗಲಾರದು.

ಪುರುಷ ಹಾಗೂ ಮಹಿಳೆಯರ ನಡುವೆ ಇರುವ ಭಿನ್ನತೆಗಳು ಅವರ ಆರೋಗ್ಯದ ಮೇಲೆ ಬೇರೆ ಬೇರೆ ರೀತಿಯ ಪರಿಣಾಮ ಬೀರುತ್ತಿವೆ. ಇದೊಂದು ರೀತಿಯ 'ಲಿಂಗ ಸಂಘರ್ಷ' ಇದ್ದಂತೆ.

**ಭಿನ್ನತೆಯ ಆರಂಭ :** ಈ ಭಿನ್ನತೆ ಹುಟ್ಟುವುದಾದರೂ ಹೇಗೆ? ಇದಕ್ಕೆ ಉತ್ತರ ಎಕ್ಸ್ ವರ್ಣತಂತುವಿನಲ್ಲಿದೆ. ಮಹಿಳೆಯರು ಎರಡು ಎಕ್ಸ್ ವರ್ಣತಂತು ಹೊಂದಿರುತ್ತಾರೆ. ಪುರುಷರು ಒಂದು ಎಕ್ಸ್ ಹಾಗೂ ಒಂದು ವೈ ವರ್ಣತಂತು ಹೊಂದಿರುತ್ತಾರೆ. ಎಕ್ಸ್ ವರ್ಣತಂತುವಿನಲ್ಲಿ ದೊಡ್ಡ ಸಂಖ್ಯೆಯ ರೋಗ ನಿರೋಧಕ ಸಂಬಂಧದ ಜೀನ್‌ಗಳಿರುತ್ತವೆ.

ಜೀನ್ - ಪ್ರೋಟೀನ್‌ಗಳು ಮೈಕ್ರೋಆರ್.ಎನ್.ಎ.ಗಳಿಂದ ನಿಯಂತ್ರಿಸಲ್ಪಡುತ್ತವೆ. ವೈ ವರ್ಣತಂತುವಿನಲ್ಲಿ ಕೇವಲ ಎರಡು ಮೈಕ್ರೋಆರ್.ಎನ್.ಎ. ಜೀನ್‌ಗಳಿರುತ್ತವೆ.

ಎಕ್ಸ್ ವರ್ಣತಂತುವಿನಲ್ಲಿ ಜೀನ್‌ಗಳ ಸಂಖ್ಯೆಯೂ ಹೆಚ್ಚಾಗಿರುತ್ತದೆ. ವೈ ವರ್ಣತಂತುವಿನಲ್ಲಿ 55 ಜೀನ್‌ಗಳಿದ್ದರೆ, ಎಕ್ಸ್ ವರ್ಣತಂತುವಿನಲ್ಲಿ 900ಕ್ಕೂ ಹೆಚ್ಚು ಜೀನ್‌ಗಳಿರುತ್ತವೆ. ಹೀಗಾಗಿಯೇ ರೋಗ ನಿರೋಧಕತೆಗೆ ಸಂಬಂಧಿಸಿದಂತೆ ಹೆಂಗಸರು ಹೆಚ್ಚು ಜೀನ್-ಪ್ರೋಟೀನ್ ನಿಯಂತ್ರಕ ಹೊಂದಿರುತ್ತಾರೆ.

**ಹಾರ್ಮೋನ್‌ಗಳಲ್ಲೂ ವ್ಯತ್ಯಾಸ :** ಎರಡನೆಯದಾಗಿ ಮಹಿಳೆ ಹಾಗೂ ಪುರುಷರಲ್ಲಿನ ಲಿಂಗ ಸಂಬಂಧಿ ಹಾರ್ಮೋನುಗಳಲ್ಲಿಯೂ ವ್ಯತ್ಯಾಸ ಇದೆ. ಪ್ರೊಜೆಸ್ಟಿರೋನ್ ಹಾಗೂ ಟೆಸ್ಟೋಸ್ಟಿರೋನ್‌ಗಳು ರೋಗ ನಿರೋಧಕತೆ ನಿಯಂತ್ರಿಸುವಲ್ಲಿ ಹೆಚ್ಚಿನ ಪಾತ್ರ ವಹಿಸುತ್ತವೆ ಎಂದು ವ್ಯಾಪಕವಾಗಿ ನಂಬಲಾಗಿದೆ.

ಋತುಮತಿಯಲ್ಲದ ಮಹಿಳೆಯರಲ್ಲಿ ಪ್ರೊಜೆಸ್ಟಿರೋನ್ ಪ್ರಮಾಣ ಪುರುಷರಿಗಿಂತ ಹೆಚ್ಚಾಗಿರುವುದು ಕಂಡು ಬಂದಿದೆ. ಪುರುಷರಲ್ಲಿ ಟೆಸ್ಟೋಸ್ಟಿರೋನ್ ಹೆಚ್ಚಾಗಿರುತ್ತದೆ.

ಮಹಿಳೆಯರಲ್ಲಿ ಓಸ್ಟ್ರೋಜಿನ್ ಹಾರ್ಮೋನುಗಳು ಗರ್ಭಾವಸ್ಥೆಯಲ್ಲಿ ಹೆಚ್ಚಾಗುವುದು ಕಂಡು ಬಂದಿದೆ. ಈ ಕಾರಣದಿಂದಾಗಿ ಗರ್ಭಿಣಿಯರಾದಾಗ ಹಾಗೂ ಆನಂತರದಲ್ಲಿ ಮಹಿಳೆಯರಲ್ಲಿ ರೋಗ ನಿರೋಧಕತೆ ಹೆಚ್ಚಾಗಿರುತ್ತದೆ.

ಇದರಿಂದಾಗಿ ಮಹಿಳೆಯರು ಹಾಗೂ ನವಜಾತ ಮಕ್ಕಳು ಗರ್ಭಿಣಿ ಹಾಗೂ ಬಾಣಂತಿಯ ದಿನಗಳಲ್ಲಿ ಹೆಚ್ಚಿನ ರಕ್ಷಣೆ ಪಡೆಯುತ್ತಾರೆ.

**ಮಹಿಳೆಯರಿಗೂ ಸಮಸ್ಯೆ :** ಮಹಿಳೆಯರಿಗೆ ರೋಗಗಳನ್ನು ಎದುರಿಸುವ ಶಕ್ತಿ ಏನೋ ಸಿಗುತ್ತದೆ. ಆದರೆ, ರೋಗ ಬಂದಾಗ, ನಿರೋಧಕ ವ್ಯವಸ್ಥೆ ಅತಿ ಹೆಚ್ಚು ಕಾಲ ಸಕ್ರಿಯವಾಗಿರುತ್ತದೆ. ಹೀಗಾಗಿ ರೋಗ ನಿರೋಧಕತೆಯ ಸಮಸ್ಯೆಗಳು ಬಂದಾಗ ಮಹಿಳೆಯರು ಹೆಚ್ಚು ಕಾಲ ಬಳಲುತ್ತಾರೆ.

ಮಲ್ಟಿಪಲ್ ಸ್ಕಿರೋಸಿಸ್ ಎಂಬ ನರಮಂಡಲ ಸಂಬಂಧಿ ಸಮಸ್ಯೆ, ಸಂಧಿವಾತ, ಚರ್ಮರೋಗ, ಜೊಗ್ರೇನ್ಸ್ ಸಿಂಡ್ರೋಮ್ ಹಾಗೂ ಥೈರಾಯ್ಡ್‌ನ ಕೆಲವು ಸಮಸ್ಯೆಗಳು ಮಹಿಳೆಯರಲ್ಲಿ ಹೆಚ್ಚಾಗಿರುತ್ತವೆ.

ಕೆಲವೊಮ್ಮೆ ಸ್ವಂತ ದೇಹದ ಅಂಗಾಂಶಗಳನ್ನೇ ನಿರೋಧಕ ವ್ಯವಸ್ಥೆಯು ರೋಗ ಎಂದು ದಾಳಿ ಮಾಡುತ್ತದೆ. ಇದರಿಂದಾಗಿ ಅಂಗಾಂಶ ಹಾನಿ, ನೋವು ಇತ್ಯಾದಿ ಸಮಸ್ಯೆಗಳು ಕಂಡು ಬರುತ್ತವೆ. ಸೋಂಕಿನ ನಂತರ ಮಹಿಳೆಯರಲ್ಲಿ ತೀವ್ರ ಉರಿಯೂತದ ಸಮಸ್ಯೆಯೂ ಹೆಚ್ಚಾಗಿ ಕಂಡು ಬರುತ್ತದೆ.

ಆದರೂ, ಮಹಿಳೆಯರಿಗೆ ಸಹಕಾರಿಯಾದ ಮತ್ತೊಂದು ಅಂಶವಿದೆ. ರೋಗ ತಡೆಗಾಗಿ ನೀಡಲಾಗುವ ಸಾಮಾನ್ಯ ಲಸಿಕೆಗಳಿಗೆ ಮಹಿಳೆಯರು ಹೆಚ್ಚಾಗಿ ಸ್ಪಂದಿಸುತ್ತಾರೆ. ಲಸಿಕೆ ನೀಡಿದಾಗ ಪುರುಷರಿಗಿಂತ ಮಹಿಳೆಯರಲ್ಲಿ ಆಂಟಿಬಾಡಿಗಳ ಸಂಖ್ಯೆ ಹೆಚ್ಚಾಗಿರುತ್ತದೆ.

ರೋಗ ನಿರೋಧಕತೆಯ ಅಧ್ಯಯನ ನಡೆಸುವಾಗ ಹಾಗೂ ರೋಗಿಗೆ ಚಿಕಿತ್ಸೆ ನೀಡಿದಾಗ ಅವರ ಲಿಂಗವನ್ನು ಪ್ರಮುಖವಾಗಿ ಪರಿಗಣಿಸಬೇಕು ಎಂಬುದನ್ನು ಈ ಎಲ್ಲ ಅಂಶಗಳು ತೋರಿಸುವುದಂತೂ ಸ್ಪಷ್ಟವಾಗಿದೆ.

### ರೋಗ ನಿರೋಧಕತೆಗೆ ಹಲವು ಹಂತ

ರೋಗ ನಿರೋಧಕತೆಗೆ ಸಂಬಂಧಿಸಿದಂತೆ ಪ್ರತಿ ಹಂತದಲ್ಲೂ ಭಿನ್ನತೆಗಳಿವೆ. ರೋಗ ನಿರೋಧಕತೆಯ ಕಣಗಳು, ಅವುಗಳು ಸಕ್ರಿಯಗೊಳ್ಳುವ ಪ್ರಮಾಣದಿಂದ ಈ ಭಿನ್ನತೆ ಆರಂಭವಾಗುತ್ತದೆ.

ರೋಗ ನಿರೋಧಕತೆ ಕೇವಲ ಹುಟ್ಟಿನಿಂದಷ್ಟೇ ಭಿನ್ನವಾಗಿರುವುದಿಲ್ಲ. ಬೆಳೆಯುತ್ತಾ ಹೋದಂತೆ ರೋಗ ನಿರೋಧಕತೆಯಲ್ಲಿ ಇನ್ನಷ್ಟು ವ್ಯತ್ಯಾಸಗಳಾಗುತ್ತವೆ. ವ್ಯಕ್ತಿಗಳು ಈ ಹಿಂದೆ ಎದುರಿಸಿದ ರೋಗಗಳು ಹಾಗೂ ಎದುರಿಸಿದ ದೈಹಿಕ ಸವಾಲುಗಳ ಆಧಾರದ ಮೇಲೆ ರೋಗ ನಿರೋಧಕತೆ ನಿರ್ಧಾರವಾಗುತ್ತದೆ.

ಲಿಂಗ ಭೇದ ಹುಟ್ಟಿನಿಂದಲೇ ಆರಂಭವಾಗುತ್ತದೆ. ಹೀಗಾಗಿ ಹುಟ್ಟಿನಿಂದ ಹಿಡಿದು, ಹದಿಹರೆಯ ಹಾಗೂ ವೃದ್ಧಾಪ್ಯಕ್ಕೆ ಸಾಗಿ ಬರುವವರೆಗೆ ಲಿಂಗ ರೋಗ ನಿರೋ ಧಕತೆ ಮೇಲೆ ಪರಿಣಾಮ ಬೀರುತ್ತದೆ.

# ಇಳುವರಿ ಕಡಿಮೆಯಾಗದು

**(1ನೇ ಪುಟದಿಂದ)** ಶೇ.50ರಿಂದ 60ರಷ್ಟು ಬೆಳೆ ಉಳಿಯುತ್ತದೆ. ಆದರೆ, ಹವಾಮಾನ ಇಲಾಖೆ ನೀಡಿರುವ ವರದಿ ಪ್ರಕಾರ ಆಗಸ್ಟ್ ಮತ್ತು ಸೆಪ್ಟಂಬರ್‌ನಲ್ಲಿ ವಾಡಿಕೆ ಮಳೆಯಾಗುವ ಮುನ್ಸೂಚನೆಗಳಿಲ್ಲ ಎಂದು ಹೇಳಿದರು. ಒಂದು ವೇಳೆ ಮಳೆಯಾದರೆ ರೈತರಿಗೆ ಅಲ್ಪಾವಧಿ ಬೆಳೆ ಬೆಳೆಯಲು ಅಗತ್ಯವಿರುವ ಬಿತ್ತನೆ ಬೀಜ, ಗೊಬ್ಬರ ಒದಗಿಸಲಾಗುವುದು. ಭತ್ತ ಮತ್ತು ರಾಗಿ ಬೆಳೆಯಲು ಈಗಲೂ ಕಾಲ ಮಿಂಚಿಲ್ಲ ಎಂದರು.

ಸಂಕಷ್ಟದಲ್ಲಿರುವ ರೈತರ ನೆರವಿಗಾಗಿ ತಾವು ಮತ್ತು ಅಧಿಕಾರಿಗಳು ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳುತ್ತೇವೆ. ಪ್ರತಿ ತಿಂಗಳು ಒಂದು ಜಿಲ್ಲೆಯಲ್ಲಿ ಪ್ರವಾಸ ಮಾಡಿ ಕೃಷಿಕರ ಜಮೀನಿಗೆ ಭೇಟಿಯಾಗಿ ಸಮಸ್ಯೆಗಳನ್ನು ಆಲಿಸಿ ಸ್ಥಳದಲ್ಲೇ ಪರಿಹಾರ ಕಂಡುಹಿಡಿಯಲು ಪ್ರಯತ್ನಿಸಲಾಗುವುದು. ಇದೇ 29ರಂದು ಚಿತ್ರದುರ್ಗ ಜಿಲ್ಲೆಯಲ್ಲಿ ರೈತರೊಂದಿಗೆ ಸಂವಾದ ನಡೆಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡುವುದಾಗಿ ಹೇಳಿದರು.

# ಕಾವೇರಿ ಸಮಸ್ಯೆಗೆ ಮೇಕೆದಾಟು ಪರಿಹಾರ : ಡಿಕೆಶಿ



ಬೆಂಗಳೂರು, ಆ. 25 - ಸದ್ಯ ಕರ್ನಾಟಕ ಹಾಗೂ ತಮಿಳುನಾಡು ರಾಜ್ಯಗಳ ನಡುವೆ ಕಾವೇರಿ ನೀರು ಹಂಚಿಕೆ ವಿಚಾರವಾಗಿ ಎದ್ದಿರುವ ಸಮಸ್ಯೆಗೆ ಮೇಕೆದಾಟು ಯೋಜನೆಯೊಂದೇ ಪರಿಹಾರ. ಈ ಬಗ್ಗೆ ನಾವು ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿದ್ದೇವೆ ಎಂದು ನೀರಾವರಿ ಸಚಿವರೂ ಆದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಕಾವೇರಿ ನದಿ ನೀರು ಬಿಡುಗಡೆ ವಿಚಾರದಲ್ಲಿ ಸುಪ್ರೀಂ ಕೋರ್ಟ್ ವಿಚಾರಣೆ ಹಾಗೂ ಕಾವೇರಿ ನದಿ ನೀರು ನಿರ್ವಹಣೆ ಪ್ರಾಧಿಕಾರವೇ ಪರಿಶೀಲಿಸಬೇಕು ಎಂದು ಹೇಳಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ನ್ಯಾಯಾಲಯವೇ ಕಾವೇರಿ ನಿರ್ವಹಣಾ ಪ್ರಾಧಿಕಾರ ರಚನೆ ಮಾಡಿದ್ದು, ಇದು ತಾಂತ್ರಿಕ ಸಮಿತಿಯಾಗಿದೆ. ಸದ್ಯ ಅವರು ತಾಂತ್ರಿಕ ಅಂಶಗಳ ಬಗ್ಗೆ ಗಮನಹರಿಸಬೇಕು ಎಂದರು.

ಈ ಪರಿಸ್ಥಿತಿಯಲ್ಲಿ ಪ್ರಮುಖ ಪರಿಹಾರ ಎಂದರೆ ಅದು ಮೇಕೆದಾಟು ಯೋಜನೆ ಮಾತ್ರ. ಮೇಕೆದಾಟು ಅಣೆಕಟ್ಟು ನಿರ್ಮಾಣವಾಗಿದ್ದರೆ ಇಂದು ಈ ಸಮಸ್ಯೆ ಹಾಗೂ ಪರಿಸ್ಥಿತಿಯೇ ಉದ್ಭವಿಸುತ್ತಿರಲಿಲ್ಲ. ಕಳೆದ ವರ್ಷ 400ಕ್ಕೂ ಹೆಚ್ಚು ಟಿಎಂಸಿ ನೀರು ವ್ಯರ್ಥವಾಗಿ ಸಮುದ್ರದ ಪಾಲಾಗಿದೆ. ಅದರಲ್ಲಿ ಸ್ವಲ್ಪ ಪ್ರಮಾಣದ ನೀರನ್ನು ಮೇಕೆದಾಟು ಅಣೆಕಟ್ಟು ಮೂಲಕ ಹಿಡಿದಿಟ್ಟಿದ್ದರೆ ಈ ಸಮಸ್ಯೆಯೇ ಎದುರಾಗುತ್ತಿರಲಿಲ್ಲ ಎಂದು ತಿಳಿಸಿದರು.

ಮೇಕೆದಾಟು ಅಣೆಕಟ್ಟಿನ ನೀರನ್ನು ನಾವು ನೀರಾವರಿಗೆ ಬಳಸಲು ಸಾಧ್ಯವಿಲ್ಲ. ಕೇವಲ ಕುಡಿಯುವ ನೀರಿಗೆ ಬಳಸಬಹುದು. ಮೇಕೆದಾಟು ಇಂತಹ ಸಂಕಷ್ಟದ ಸಮಯದಲ್ಲಿ ಹೆಚ್ಚು ಸಹಾಯಕ್ಕೆ ಬರುತ್ತದೆ.

ಈ ವಿಚಾರದ ಬಗ್ಗೆ ಸುಪ್ರೀಂ ಕೋರ್ಟ್ ಗಮನ ಹರಿಸಬೇಕಿದೆ. ನಾವು ನಮ್ಮ ಅರ್ಜಿಯಲ್ಲಿ ಈ ವಿಚಾರ ಪ್ರಸ್ತಾಪಿಸಿದ್ದೇವೆ. ನಾವು ಈ ವಿಚಾರವನ್ನು ಸುಪ್ರೀಂ ಕೋರ್ಟ್ ಗಮನಕ್ಕೆ ತರುತ್ತೇವೆ ಎಂದರು.

# ಬರ ಪೀಡಿತ ಘೋಷಿಸಲು ಮನವಿ

**(1ನೇ ಪುಟದಿಂದ)** ಲಕ್ಷಣಗಳಿವೆ. ಒಟ್ಟು ಬಿತ್ತನೆಯಾಗಿರುವ 1.85 ಲಕ್ಷ ಹೆಕ್ಟೇರ್‌ನಲ್ಲಿ ಭತ್ತದ ನಾಟಿ ಹೊರತುಪಡಿಸಿ 1.63 ಲಕ್ಷ ಹೆಕ್ಟೇರ್‌ನಲ್ಲಿ ಸುಮಾರು 1.27 ಲಕ್ಷ ಹೆಕ್ಟೇರ್ ಮೆಕ್ಕೆಜೋಳ ಬಿತ್ತನೆಯಾಗಿದೆ.

ಇನ್ನುಳಿದ 0.33 ಸಾವಿರ ಹೆಕ್ಟೇರ್‌ನಲ್ಲಿ ಇತರೆ ಬೆಳೆಗಳಿವೆ. 1.63 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿರುವ ಸಂಪೂರ್ಣ ಬೆಳೆ ಸಕಾಲದಲ್ಲಿ ಮಳೆಯಿಲ್ಲದೇ ಒಣಗಿಹೋಗಿವೆ. ಬಿತ್ತನೆ ಪೂರ್ವ ಪ್ರಕ್ರಿಯೆ ಹಾಗೂ ಬಿತ್ತನೆ ನಂತರದ ಬೆಳೆಗಳ ಪೋಷಣೆ ಸೇರಿದಂತೆ, ಕನಿಷ್ಟ 20 ಸಾವಿರದಷ್ಟು ಹಣವನ್ನು ರೈತರು ಪ್ರತಿ ಎಕರೆಗೆ ಖರ್ಚು ಮಾಡಿದ್ದಾರೆ.

ಈಗಾಗಲೇ ಸಾಕಷ್ಟು ಮಳೆ ಕೊರತೆಯನ್ನು ಜಿಲ್ಲೆ ಎದುರಿಸಿರುವುದರಿಂದ ಹಾಗೂ ಸಾಕಷ್ಟು ಬೆಳೆಹಾನಿ ಸಂಭವಿಸಿರುವುದರಿಂದ ಬರ ಎಂದು ಘೋಷಣೆ ಮಾಡುವ ಅನಿವಾರ್ಯತೆಯಿದೆ ಎಂದು ಸಿದ್ದೇಶ್ವರ ಹೇಳಿದ್ದಾರೆ. ಹಾಕಿದ ಬಂಡವಾಳವೂ ಕೂಡ ರೈತರಿಗೆ ಸಿಗದ ಪರಿಸ್ಥಿತಿ ಇರುವುದರಿಂದ ಕೂಡಲೇ ದಾವಣಗೆರೆ ಜಿಲ್ಲೆಯ ದಾವಣಗೆರೆ, ಹರಿಹರ, ಹೊನ್ನಾಳಿ, ನ್ಯಾಮತಿ, ಚನ್ನಗಿರಿ, ಜಗಳೂರು ಹಾಗೂ ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳು ಎಂದು ಘೋಷಣೆ ಮಾಡುವುದರ ಮೂಲಕ ಸಂಕಷ್ಟದಲ್ಲಿರುವ ರೈತರ ಹಿತ ಕಾಯುವಂತೆ ಕೋರಿದ್ದಾರೆ.

# ಅರೆ ನೀರಾವರಿ ಬೆಳೆಗಳಿಗೆ ಸಲಹೆ

ದಾವಣಗೆರೆ, ಆ.25- ಭದ್ರಾ ಯೋಜನೆಯ ಅಚ್ಚುಕಟ್ಟು ವ್ಯಾಪ್ತಿಯ ಬೆಳೆಗಳಿಗೆ ಮತ್ತು 2023-24 ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆಗಳಿಗೆ ಭದ್ರಾ ಜಲಾಶಯದಲ್ಲಿ ಲಭ್ಯವಿರುವ ನೀರಿನ ಪ್ರಮಾಣವನ್ನು ಗಣನೆಗೆ ತೆಗೆದು ಕೊಂಡು ಅರೆ ನೀರಾವರಿ ಬೆಳೆಗಳಿಗೆ ಮಾತ್ರ ನೀರನ್ನು ಒದಗಿಸಲಾಗುವುದು.

ಮುಂಗಾರು ಹಂಗಾಮಿನ ಬೆಳೆಗಳಿಗೆ ನೀರಿನ ಬಳಕೆಯಲ್ಲಿ ಮಿತವ್ಯಯ ಸಾಧಿಸಿ, ಬೇಸಿಗೆ ಬೆಳೆಗೆ ನೀರು ಉಳಿಸುವ ಸಲುವಾಗಿ ಅಚ್ಚುಕಟ್ಟು ಪ್ರದೇಶದಲ್ಲಿ ಮಳೆ ಬಿದ್ದಾಗ ಮಳೆಯ ಪ್ರಮಾಣಕ್ಕನುಗುಣವಾಗಿ ಕಾಲುವೆಗಳಲ್ಲಿ ನೀರು ಹರಿಸಲಾಗುತ್ತಿದ್ದು, ಮುಂಗಾರು ಹಂಗಾಮಿನಲ್ಲಿ ರೈತರು ಹೆಚ್ಚು ನೀರುಣಿಸುವ ಭತ್ತದ ಬೆಳೆಯನ್ನು ಹೊರತುಪಡಿಸಿ ಅರೆ ನೀರಾವರಿ ಬೆಳೆಗಳನ್ನು ಬೆಳೆಯಬೇಕು.

ಮಲೇಬೆನ್ನೂರು ಶಾಖಾ ನಾಲೆ ಅಚ್ಚುಕಟ್ಟು ಪ್ರದೇಶಕ್ಕೆ ಕಬ್ಬು 2800 ಹೆಕ್ಟೇರ್, ತೋಟಗಾರಿಕೆ 182 ಹೆಕ್ಟೇರ್, ಅರೆ ನೀರಾವರಿ 20,792 ಹೆಕ್ಟೇರ್ ಒಳಗೊಂಡಂತೆ ಒಟ್ಟು 23,774 ಹೆಕ್ಟೇರ್, ದೇವರಬೆಳಕೆರೆ ಪಿಕಪ್ ಯೋಜನೆಯ ಅಚ್ಚುಕಟ್ಟು ಪ್ರದೇಶಕ್ಕೆ ಕಬ್ಬು 500 ಹೆಕ್ಟೇರ್, ತೋಟಗಾರಿಕೆ 458 ಹೆಕ್ಟೇರ್, ಅರೆ ನೀರಾವರಿ 3,332 ಹೆಕ್ಟೇರ್ ಒಳಗೊಂಡಂತೆ ಒಟ್ಟು 4280 ಹೆಕ್ಟೇರ್ ಹಾಗೂ ಆನವೇರಿ ಶಾಖಾ ನಾಲೆ ಅಚ್ಚುಕಟ್ಟು ಪ್ರದೇಶಕ್ಕೆ ಕಬ್ಬು 200 ಹೆಕ್ಟೇರ್, ತೋಟಗಾರಿಕೆ 121 ಹೆಕ್ಟೇರ್, ಅರೆ ನೀರಾವರಿ 5998 ಹೆಕ್ಟೇರ್ ಒಳಗೊಂಡಂತೆ ಒಟ್ಟು 6319 ಹೆಕ್ಟೇರ್ ಮಾದರಿ ಬೆಳೆ ಬೆಳೆಯಲು ಹಾಗೂ ಈ ಬೆಳೆಗಳನ್ನು ಬೆಳೆಯದೇ ಭತ್ತ ಮತ್ತು ಇನ್ನಿತರೆ ಬೆಳೆ ಬೆಳೆದರೆ ಜಲ ಸಂಪನ್ಮೂಲ ಇಲಾಖೆಯು ಜವಾಬ್ದಾರಿಯಾಗುವುದಿಲ್ಲ.

ಬೆಳೆ ಪದ್ಧತಿಯನ್ನು ಉಲ್ಲಂಘಿಸುವವರು, ನೀರಾವರಿ ಕಾಲುವೆ ಹಾಗೂ ಕಟ್ಟಡಗಳನ್ನು ಜಖಂಗೊಳಿಸುವವರು, ನಿಯಮಿತ ಪ್ರಮಾಣಕ್ಕಿಂತ ಹೆಚ್ಚು ನೀರನ್ನು ಬಳಸುವವರು ಮತ್ತು ಪಂಪ್ ಮಾಡಿ ಅನಧಿಕೃತವಾಗಿ ನೀರನ್ನು ಬಳಸಿಕೊಂಡು ನೀರಾವರಿ ಬೆಳೆಗಳನ್ನು ಬೆಳೆದು ನಿಯಮ ಉಲ್ಲಂಘನೆ ಮಾಡಿದಲ್ಲಿ ಪರಿಶೀಲಿಸಿ ಅಂತವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಕನೀನಿನಿ, ನಂ.3 ಭದ್ರಾ ನಾಲಾ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಜಿ.ಎಸ್.ಪಟೇಲ್ ತಿಳಿಸಿದ್ದಾರೆ.

# ಸದೃಢ ದೇಹದಲ್ಲಿ ಸದೃಢ ಮನಸ್ಸಿರುತ್ತದೆ

### ಮಲೇಬೆನ್ನೂರು ವಲಯ ಮಟ್ಟದ ಕ್ರೀಡಾಕೂಟದಲ್ಲಿ ದಂಡಿ ತಿಪ್ಪೇಸ್ವಾಮಿ



ಮಲೇಬೆನ್ನೂರು, ಆ.25- ಕ್ರೀಡೆ ಮಕ್ಕಳ ಅಭಿವೃದ್ಧಿಗೆ ಪೂರಕವಾಗಿದ್ದು, ಸದೃಢ ದೇಹದಲ್ಲಿ ಸದೃಢ ಮನಸ್ಸಿರುತ್ತದೆ ಎಂಬ ವಾಣಿಯಂತೆ, ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಕಲಿಯಲು ದೈಹಿಕ ಶಿಕ್ಷಣ ಬಹಳ ಮುಖ್ಯ ಎಂದು ಮಲೇಬೆನ್ನೂರು ಎಸ್‌ಬಿಕೆಎಂ ಶಾಲೆಯ ಮುಖ್ಯ ಶಿಕ್ಷಕ ದಂಡಿ ತಿಪ್ಪೇಸ್ವಾಮಿ ಹೇಳಿದರು.

ಅವರು ಕುಂಬಳೂರು ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಮಲೇಬೆನ್ನೂರು ವಲಯ ಮಟ್ಟದ ಹಿರಿಯ ಪ್ರಾಥಮಿಕ ಶಾಲೆಗಳ ಕ್ರೀಡಾ ಕೂಟದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ಸಿಆರ್‌ಪಿ ಬಸವರಾಜಯ್ಯ ಮಾತನಾಡಿ, ಮಕ್ಕಳು ಶಿಕ್ಷಣದ ಜೊತೆಗೆ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ಹೆಚ್ಚು ತೊಡಗಿಸಿಕೊಳ್ಳಬೇಕೆಂದರು.

ಪುರಸಭೆ ಸದಸ್ಯೆ ಸುಲೋಚನಮ್ಮ ಓ.ಜಿ. ಕುಮಾರ್, ಮಾಲತೇಶ ಶಾಲೆಯ ಟ್ರಸ್ಟಿ ಭಾನುಪ್ರಕಾಶ್ ಕ್ರೀಡಾಕೂಟ ಉದ್ಘಾಟಿಸಿ, ಶುಭ ಕೋರಿದರು.

ವಿವಿಧ ಶಾಲೆಗಳ ಮುಖ್ಯ ಶಿಕ್ಷಕರಾದ ಡಿ.ಕೆ. ಕರಿಬಸಪ್ಪ, ಮೊಹಮದ್ ಖಲೀಲ್, ಶಶಿಕುಮಾರ್, ನಾಗರಾಜ್, ಶ್ರೀಮತಿ ಜ್ಯೋತಿ, ಸಿಆರ್‌ಪಿ ರೇಷ್ಮಾ ಬಾನು, ನಂಜುಂಡಪ್ಪ, ಜಿ.ಹಾಲಪ್ಪ, ಶಿವಕುಮಾರ್, ಬೆಣ್ಣೆಹಳ್ಳಿ ಬಸವರಾಜ್ ಮತ್ತಿತರರು ಈ ವೇಳೆ ಹಾಜರಿದ್ದರು.

# ನಗರದಲ್ಲಿ ಇಂದು ಅಂಗನವಾಡಿ ಕಾರ್ಯಕರ್ತೆಯರ ಜಿಲ್ಲಾ ಸಮ್ಮೇಳನ

ದಾವಣಗೆರೆ, ಆ. 25- ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಫೆಡರೇಷನ್ ದಾವಣಗೆರೆ ಜಿಲ್ಲಾ ಶಾಖೆ ವತಿಯಿಂದ ನಾಳೆ ದಿನಾಂಕ 26 ರಂದು ಬೆಳಿಗ್ಗೆ 11 ಕ್ಕೆ ನಗರದ ಶಿವಯೋಗಾಶ್ರಮದ ಆವರಣದಲ್ಲಿ 6 ನೇ ಜಿಲ್ಲಾ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ಸಂಘಟನೆ ಜಿಲ್ಲಾಧ್ಯಕ್ಷೆ ಎಂ.ಬಿ. ಶಾರದಮ್ಮ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಕಾರ್ಮಿಕ ಮುಖಂಡರೂ, ಪತ್ರಕರ್ತರಾದ ಡಾ. ಸಿದ್ದನಗೌಡ ಪಾಟೀಲ್ ಸಮ್ಮೇಳನ ಉದ್ಘಾಟಿಸುವರು. ಫೆಡರೇಷನ್ ಜಿಲ್ಲಾಧ್ಯಕ್ಷೆ ಎಂ.ಬಿ. ಶಾರದಮ್ಮ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ, ಫೆಡರೇಶನ್ ರಾಜ್ಯಾಧ್ಯಕ್ಷ ಅಮ್ಜದ್, ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ. ಜಯ್ಯಮ್ಮ, ರಾಜ್ಯ ಉಪಾಧ್ಯಕ್ಷೆ ಹೊನ್ನಪ್ಪ ಮರಿಯಮ್ಮನವರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ವಾಸಂತಿ ಉಪ್ಪಾರ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಎಂ.ಎಸ್. ಅಭಿಕುಮಾರ್, ಮುಖಂಡರಾದ ಆವರಗೆರೆ ರುದ್ರಮುನಿ, ಆನಂದರಾಜ್, ಆವರಗೆರೆ ಚಂದ್ರು, ರಾಘವೇಂದ್ರ ನಾಯರಿ, ಹೆಚ್.ಜಿ. ಉಮೇಶ್, ಆವರಗೆರೆ ವಾಸು, ಮಹ್ಮದ್ ಬಾಷಾ, ಎಸ್.ಎಸ್. ಮಲ್ಲಮ್ಮ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಆವರಗೆರೆ ವಾಸು, ಎಸ್.ಎಸ್. ಮಲ್ಲಮ್ಮ, ವಿಶಾಲಾಕ್ಷಿ ಮೃತ್ಯುಂಜಯ, ಡಿ. ಗೀತಾ, ಕೆ.ಸಿ. ನಿರ್ಮಲ, ರೇಣುಕ, ಸರ್ವಮ್ಮ ಮತ್ತಿತರರಿದ್ದರು.



# ರಾಷ್ಟ್ರೀಯ ಕ್ರೀಡಾ ದಿನಾಚರಣೆ : ನಗರದಲ್ಲಿ ರಸ್ತೆ ಓಟ

ದಾವಣಗೆರೆ, ಆ.25- ರಾಷ್ಟ್ರೀಯ ಕ್ರೀಡಾ ದಿನಾಚರಣೆ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ವಿವಿಧ ಕ್ರೀಡೆಗಳನ್ನು ಆಯೋಜಿಸಿದ್ದು, ಇಂದು ಬೆಳಗ್ಗೆ ರಸ್ತೆ ಓಟವನ್ನು ಪುರುಷರಿಗಾಗಿ 6 ಕಿ.ಮೀ, ಮಹಿಳೆಯರಿಗಾಗಿ 3 ಕಿ.ಮೀ ನಡೆಸಿದ್ದು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಶ್ರೀಹರ್ಷ ಇವರು ಜಿಲ್ಲಾ ಕ್ರೀಡಾಂಗಣದಲ್ಲಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಕಬಡ್ಡಿ ತರಬೇತುದಾರರಾದ ಶ್ರೀಶೈಲ, ಖೋಖೋ ತರಬೇತುದಾರ ಎಂ. ರಾಮಲಿಂಗಪ್ಪ, ಮಹಿಳಾ ತರಬೇತುದಾರರಾದ ಎಂ.ಸಿ. ಸುನೀತ, ಕುಸ್ತಿ ತರಬೇತುದಾರ ಕೆ.ವಿನೋದ್ ಕುಮಾರ್, ರಾಜ್ಯ ಯುವ ಪ್ರಶಸ್ತಿ ಪುರಸ್ಕೃತ ಎನ್.ಕೆ.ಕೊಟ್ರೇಶ್, ಕಚೇರಿ ಸಿಬ್ಬಂದಿಗಳಾದ ಸೈಯದ್ ಬಾಷಾ, ಅಶೋಕ್, ಪರಶುರಾಮ್ ಮತ್ತು ಹಿರಿಯ ಕ್ರೀಡಾಪಟುಗಳು, ಕ್ರೀಡಾ ಅಭಿಮಾನಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.


## ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ.,
ಆಡಳಿತ ಕಛೇರಿ, ನಂ.120, ಹೆಚ್.ಎಂ. ರಸ್ತೆ, ದಾವಣಗೆರೆ-577 001

**ಮಾನ್ಯ ಸದಸ್ಯರ ಗಮನಕ್ಕೆ**

ಬ್ಯಾಂಕಿನ ಉಪನಿಯಮ 20(1)(3) ರನ್ವಯ ಬ್ಯಾಂಕಿನ ಸದಸ್ಯರು ಕನಿಷ್ಟ ಷೇರು ಮೊತ್ತ ರೂ.1000/- ಹೊಂದಿರತಕ್ಕದ್ದು ಮತ್ತು ಉಳಿತಾಯ ಖಾತೆಯನ್ನು ಹೊಂದಿ ಕನಿಷ್ಟ ವ್ಯವಹಾರವನ್ನು ಮಾಡುವುದು ಕಡ್ಡಾಯವಾಗಿರುತ್ತದೆ. ಬ್ಯಾಂಕಿನಲ್ಲಿ ಸದಸ್ಯತ್ವ ಹೊಂದಿರುವ ಸದಸ್ಯರ ಲಾಭಾಂಶದ ಮೊತ್ತವು ಹೊಂದಾಣಿಕೆಯಾದ ಮೂರು ವರ್ಷಗಳ ನಂತರ ಮೀಸಲು ನಿಧಿಗೆ ವರ್ಗಾವಣೆ ಮಾಡಬೇಕಾಗುತ್ತದೆ. ಆದ್ದರಿಂದ ಭಾಗಶಃ ಷೇರು ಮೊತ್ತ ಹೊಂದಿರುವ ಮತ್ತು ಉಳಿತಾಯ ಖಾತೆಯನ್ನು ಹೊಂದಿರದ ಮಾನ್ಯ ಸದಸ್ಯರುಗಳು ಈ ಕೂಡಲೇ ಆಡಳಿತ ಕಛೇರಿಗೆ/ಸಮೀಪದ ಶಾಖೆಗೆ ಭೇಟಿ ನೀಡಿ ಷೇರು ಮೊತ್ತವನ್ನು ರೂ.1000/- ಗಳಿಗೆ ಸರಿ ಮಾಡಿಕೊಳ್ಳಲು ಹಾಗೂ ಉಳಿತಾಯ ಖಾತೆಯನ್ನು ತೆರೆಯಲು ಈ ಮೂಲಕ ಕೋರಲಾಗಿದೆ.

ಸದಸ್ಯರುಗಳಿಗೆ ಪ್ರತಿ ವರ್ಷದಂತೆ ಈ ವರ್ಷವೂ ವಾರ್ಷಿಕ ವರದಿ ಪುಸ್ತಕವನ್ನು ಅಂಚೆ ಮೂಲಕ ಕಳುಹಿಸುತ್ತಿದ್ದು, ವಾಸದ ವಿಳಾಸ ಸರಿ ಇರದ ಕಾರಣ ಬಹಳಷ್ಟು ಸದಸ್ಯರ ವಾರ್ಷಿಕ ವರದಿ ಪುಸ್ತಕಗಳು ವಾಪಸ್ಸಾಗುತ್ತಿರುತ್ತವೆ. ಆದ್ದರಿಂದ ಮಾನ್ಯ ಸದಸ್ಯರು ತಾವು ಖಾತೆಯನ್ನು ಹೊಂದಿರುವ ಶಾಖೆಗಳಲ್ಲಿ ವಾಸದ ವಿಳಾಸವನ್ನು ಸರಿಪಡಿಸಿಕೊಳ್ಳುವುದರೊಂದಿಗೆ ಮೊಬೈಲ್ ಸಂಖ್ಯೆ, ಕೆ.ವೈ.ಸಿ. (K.Y.C.) ಮತ್ತು ಸಿ.ಕೆ.ವೈ.ಸಿ. (C.K.Y.C.) ದಾಖಲಾತಿಗಳೊಂದಿಗೆ ಷೇರು ಖಾತೆ ಮತ್ತು ಉಳಿತಾಯ ಖಾತೆಗಳನ್ನು ನವೀಕರಿಸಿಕೊಳ್ಳಲು ಕೋರಿದೆ.

ಎಂ. ಬಸವರಾಜ, ಪ್ರಧಾನ ವ್ಯವಸ್ಥಾಪಕರು — ಎಸ್.ಎಸ್. ಮಲ್ಲಿಕಾರ್ಜುನ್, ಉಪಾಧ್ಯಕ್ಷರು — ಡಾ. ಶಾಮನೂರು ಶಿವಶಂಕರಪ್ಪನವರು, ಅಧ್ಯಕ್ಷರು




" ಜೈ ಪಟ್ಟಸಾಲಿ " ॥ ಶ್ರೀ ಸಾಲೇಶ್ವರ ಪ್ರಸನ್ನ ॥ " ಜೈ ನೇಕಾರ "



ಪಟ್ಟಸಾಲಿ ಸಮಾಜದ ಪರಮಪೂಜ್ಯ ಗುರುಗಳು ಶ್ರೀ ಶ್ರೀ ಶ್ರೀ 1008 ಜಗದ್ಗುರು ಬಸವರಾಜ ಪಟ್ಟದಾರ್ಯ ಮಹಾಸ್ವಾಮಿಗಳು






ಕುಲಗುರುಗಳಾದ ಶ್ರೀ ದೇವರದಾಸಿಮಯ್ಯನವರು

**ಆಹ್ವಾನ ಪತ್ರಿಕೆ**

**ಪಟ್ಟಸಾಲಿ ನೇಕಾರ ಸಮಾಜ ಸುಧಾರಣಾ ಸಂಘ (ರಿ)**
**ಪಟ್ಟಸಾಲಿ ನೇಕಾರ ಯುವಕರ ಸಂಘ (ರಿ)**





**ಪಟ್ಟಸಾಲಿ ನೇಕಾರ ಮಹಿಳಾ ಸಂಘ (ರಿ)**
ದಾವಣಗೆರೆ, ಇವರ ವತಿಯಿಂದ ನಡೆಯಲಿರುವ

**ವಾರ್ಷಿಕ ಮಹಾಸಭೆ**
ಮತ್ತು
**ಪಟ್ಟಸಾಲಿ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ**
**ಪಟ್ಟಸಾಲಿ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ**

ದಿನಾಂಕ: 27-08-2023 ನೇ ಭಾನುವಾರ ಸಮಯ: ಬೆಳಿಗ್ಗೆ 10:00 ರಿಂದ
ಸ್ಥಳ: ಪಟ್ಟಸಾಲಿ ನೇಕಾರ ವಿದ್ಯಾರ್ಥಿ ನಿಲಯ, 7ನೇ ಕ್ರಾಸ್, ಎಂ.ಸಿ.ಸಿ. "ಬಿ" ಬ್ಲಾಕ್, ಶ್ರೀ ಲಕ್ಷ್ಮಿವೆಂಕಟೇಶ್ವರ ದೇವಸ್ಥಾನದ ಪಕ್ಕ, ದಾವಣಗೆರೆ-04.

(ಬೆಳಿಗ್ಗೆ 8:00 ರಿಂದ ಉಪಹಾರ ಹಾಗೂ ಮಧ್ಯಾಹ್ನ : 1:30 ರಿಂದ ಭೋಜನ)

**ಪಟ್ಟಸಾಲಿ ಸಮಾಜದ ಕುಲಭಾಂದವರಿಗೆ ಸುಸ್ವಾಗತ**

ಪಟ್ಟಸಾಲಿ ಸಮಾಜದ ಕುಲಭಾಂದವರಿಗೆ ಯಾರಿಗಾದರೂ ಆಹ್ವಾನ ಪತ್ರಿಕೆ ತಲುಪದೇ ಇದ್ದರೇ ದಯವಿಟ್ಟು ಈ ಪತ್ರಿಕೆಯನ್ನೇ ಆಹ್ವಾನ ಪತ್ರಿಕೆ ಎಂದು ಭಾವಿಸಿ ಕಾರ್ಯಕ್ರಮಕ್ಕೆ ಆಗಮಿಸಲು ವಿನಂತಿ

ಅಧ್ಯಕ್ಷರು : ಡಿ.ಸಿ.ಶ್ರೀನಿವಾಸ್- 9980339280 ಕಾರ್ಯದರ್ಶಿ: ಟಿ. ಕೃಷ್ಣಪ್ಪ - 9886386264

# ಲಕ್ಕಶೆಟ್ಟಿಹಳ್ಳಿ : ಮಾಚಿದೇವ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಧರ್ಮಸ್ಥಳದ ನೆರವು



ಮಲೇಬೆನ್ನೂರು, ಆ.25- ಲಕ್ಕಶೆಟ್ಟಿಹಳ್ಳಿಯ ಶ್ರೀ ಗುರು ವೀರ ಮಡಿವಾಳ ಮಾಚಿದೇವ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಶ್ರೀ ಕ್ಷೇತ್ರ ಗ್ರಾಮಾಭಿವೃದ್ಧಿ ಯೋಜನೆಯಿಂದ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರು ಬಿಡುಗಡೆ ಮಾಡಿದ 1 ಲಕ್ಷ ರೂ. ಗಳ ಡಿಡಿಯನ್ನು ಯೋಜನೆಯ ಜಿಲ್ಲಾ ನಿರ್ದೇಶಕ ವಿಜಯಕುಮಾರ್ ನಾಗನಾಳ ಅವರು ಬುಧವಾರ ದೇವಸ್ಥಾನ ಸಮಿತಿಯವರಿಗೆ ಹಸ್ತಾಂತರಿಸಿದರು.

ದೇವಸ್ಥಾನ ಸಮಿತಿಯ ಕಾರ್ಯದರ್ಶಿ ಲೋಕಿಕೆರೆ ಅಣ್ಣಪ್ಪ, ಯಲವಟ್ಟಿ ಗ್ರಾ.ಪಂ. ಮಾಜಿ ಅಧ್ಯಕ್ಷೆ ಕರಿಬಸಮ್ಮ ಮಲ್ಲಿಕಾರ್ಜುನಪ್ಪ ಮಾತನಾಡಿ, ಧರ್ಮಸ್ಥಳ ಯೋಜನೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಮಲೇಬೆನ್ನೂರಿನ ಯೋಜನಾಧಿಕಾರಿ ವಸಂತ್ ದೇವಾಡಿಗ, ಸಮಿತಿಯ ಖಜಾಂಚಿ ಕೆ.ಕೆ. ನಿಂಗರಾಜ್, ಮುಖಂಡರಾದ ಸಾರಥಿ ಯಶವಂತ್, ನಂದಿಗಾವಿ ರಂಗಪ್ಪ, ಷಣ್ಮುಖಪ್ಪ, ಆರ್. ಚಂದ್ರಪ್ಪ, ಬಿ.ಎಸ್. ಮಂಜುನಾಥ್, ಬಿಳಸನೂರು ಚಂದ್ರಪ್ಪ, ಮಾಷ್ಠಿ ಮಂಜಪ್ಪ, ತಳವಾರ್ ಅಜ್ಜಗಪ್ಪ, ಎಂ.ಸಿ. ಗುಳ್ಳೆಪ್ಪ, ದೊಡ್ಡಜ್ಜಿ ಮಲ್ಲೇಶ್, ಮಾಷ್ಠಿ ವಿಜಯ್, ಹೊಳೆಸಿರಿಗೆರೆ ವಲಯ ಮೇಲ್ವಿಚಾರಕಿ ಸಂತೋಷಿನಿ, ಸೇವಾ ಪ್ರತಿನಿಧಿಗಳಾದ ಲತಾ ಇಟಗಿ, ಸುನೀತಾ ಇಟಗಿ, ಲತಾ ಮತ್ತಿತರರು ಈ ವೇಳೆ ಹಾಜರಿದ್ದರು.

# ನಗರದಲ್ಲಿ ಕಟ್ಟಡ ಕಾರ್ಮಿಕರ ಪ್ರತಿಭಟನೆ




ದಾವಣಗೆರೆ, ಆ. 25- ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಿಐಟಿಯು ನೇತೃತ್ವದಲ್ಲಿ ಕಟ್ಟಡ ಕಾರ್ಮಿಕರು ನಗರದ ದೇವರಾಜ ಅರಸು ಬಡಾವಣೆಯಲ್ಲಿನ ಜಿಲ್ಲಾ ಕಾರ್ಮಿಕ ಇಲಾಖೆ ಮುಂದೆ ನಿನ್ನೆ ಪ್ರತಿಭಟನೆ ನಡೆಸಿ, ಕಾರ್ಮಿಕ ಆಯುಕ್ತರ ಮೂಲಕ ಕಾರ್ಮಿಕ ಸಚಿವರಿಗೆ ಮನವಿ ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್ ಜಿಲ್ಲಾಧ್ಯಕ್ಷ ಕೆ.ಹೆಚ್. ಆನಂದರಾಜ್ ಮಾತನಾಡಿ, ಕಟ್ಟಡ ಕಾರ್ಮಿಕರ ಮಕ್ಕಳ ಬಾಕಿ ಇರುವ ಶೈಕ್ಷಣಿಕ ಅರ್ಜಿಗಳಿಗೆ ತಕ್ಷಣ ಹಣ ವರ್ಗಾವಣೆ ಮಾಡಬೇಕು. ಫಲಾನುಭವಿಯ ಕಾರ್ಡ್ ನವೀಕರಣಕ್ಕೆ ವೇತನ ಚೀಟಿ ಮತ್ತು ಹಾಜರಾತಿ ಪಟ್ಟಿ ಕಡ್ಡಾಯಗೊಳಿಸಿರುವ ಆದೇಶ ವನ್ನು ಹಿಂಪಡೆಯ ಬೇಕು. ಜೊತೆಗೆ ಬೋಗಸ್ ಕಾರ್ಡ್ ನಿಯಂತ್ರಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯಿಂದ ಆರಂಭಿಸಲಾದ ಶಿಶು ವಿಹಾರ, ಮೊಬೈಲ್ ಕ್ಲಿನಿಕ್‌ಗಳು, ಬಸ್ ಪಾಸ್ ಬೇಡ. ಇವುಗಳ ಬದಲು ಮನೆ ನಿರ್ಮಾಣಕ್ಕೆ ಐದು ಲಕ್ಷ ರೂ. ಸಹಾಯಧನ ನೀಡಬೇಕು. ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಭವಿಷ್ಯ ನಿಧಿ ಯೋಜನೆ ಜಾರಿ ಮಾಡಬೇಕು. ಸ್ಲಂ ಬೋರ್ಡ್‌ಗೆ ನೀಡಿದ ಹಣವನ್ನು ಮಂಡಳಿಗೆ ಮರು ಪಾವತಿ ಮಾಡಬೇಕೆಂದು ಹೇಳಿದರು.

ಪ್ರತಿಭಟನೆಯಲ್ಲಿ ಕಾರ್ಮಿಕ ಮುಖಂಡರಾದ ಕುಮಾರ್, ಶ್ರೀನಿವಾಸಮೂರ್ತಿ, ನೇತ್ರಾವತಿ, ಶಿವಣ್ಣ, ರೂಪ, ಮಂಜುನಾಥ್, ಚಿದಾನಂದ, ರಾಜಪ್ಪ ಇತರರು ಪಾಲ್ಗೊಂಡಿದ್ದರು.

# ಅದಾನಿ ಸಮೂಹಕ್ಕೆ ಗಂಗಾವರಂ ಬಂದರು

## ಜಂಟಿ ಸಂಸದೀಯ ಸಮಿತಿ ವಿಚಾರಣೆಗೆ ಕಾಂಗ್ರೆಸ್ ಒತ್ತಾಯ

ನವದೆಹಲಿ, ಆ. 25 - ಗಂಗಾವರಂ ಬಂದರನ್ನು ಅದಾನಿ ಸಮೂಹ ವಶಕ್ಕೆ ತೆಗೆದುಕೊಂಡಿರುವುದನ್ನು ಪ್ರಶ್ನಿಸಿರುವ ಕಾಂಗ್ರೆಸ್, ಈ ಬಗ್ಗೆ ಜಂಟಿ ಸಂಸದೀಯ ಸಮಿತಿ ವಿಚಾರಣೆ ನಡೆಸಬೇಕು ಎಂದು ಒತ್ತಾಯಿಸಿದೆ.

ಮಾಧ್ಯಮ ವರದಿಯೊಂದನ್ನು ಉಲ್ಲೇಖಿಸಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಒಂದೇ ಸಮೂಹಕ್ಕೆ ಪ್ರಮುಖ ವಲಯಗಳನ್ನು ವಿನಾಯಿತಿ ದರದಲ್ಲಿ ನೀಡಲಾಗುತ್ತಿದೆ ಎಂದು ಆರೋಪಿಸಿದ್ದಾರೆ.

ಆಂಧ್ರ ಪ್ರದೇಶದ ಗಂಗಾವರಂ ಬಂದರನ್ನು ಅದಾನಿ ಸಮೂಹ ಕಡಿಮೆ ದರದಲ್ಲಿ ಪಡೆದುಕೊಂಡಿದೆ. ಕಳೆದ ಒಂಭತ್ತು ವರ್ಷಗಳಲ್ಲಿ ಆರು ಬಂದರುಗಳನ್ನು ಅದಾನಿ ಸಮೂಹಕ್ಕೆ ಬಿಡ್ಡಿಂಗ್ ರಹಿತವಾಗಿ ನೀಡಲಾಗಿದೆ ಎಂದವರು ಆಕ್ಷೇಪಿಸಿದ್ದಾರೆ.

# ಇಂದು ಥೆರೇಸಾ ರ 113 ನೇ ಜನ್ಮ ದಿನ

2023, ಆಗಸ್ಟ್ 26, ಮದರ್ ಥೆರೇಸಾ ಅವರ 113 ನೇ ಜನ್ಮ ದಿನ. ಅವರ ಸೇವೆಯ ಜೀವನ ನಮ್ಮನ್ನೆಲ್ಲ ಕರುಣೆ ಮತ್ತು ಸೇವೆಯ ಹಾದಿಯಲ್ಲಿ ಮುಂದುವರೆಯಲು ಪ್ರೇರೇಪಿಸಲಿ.

ಮದರ್ ಥೆರೇಸಾ, ಕರುಣೆ ಮತ್ತು ಮಾನವೀಯತೆಯ ಮಹಾ ಬೆಳಕು. ಮದರ್ ಥೆರೇಸಾ, ಅಚಲವಾದ ಸಹಾನುಭೂತಿ ಮತ್ತು ನಿಸ್ವಾರ್ಥ ಸೇವೆಯ, ನಿರಂತರ ಕರುಣೆಯ ಸಂಕೇತವಾಗಿ ಜನಮಾನಸದಲ್ಲಿ ಉಳಿದಿದ್ದಾರೆ. 1910 ರಲ್ಲಿ ಮ್ಯಾಸಿಡೋನಿಯಾದ ಸ್ಕೋಪ್ಜೆಯಲ್ಲಿ ಜನಿಸಿದ ಅವರು, ಭಾರತದ ಕೋಲ್ಕತ್ತಾದ ಕೊಳೆಗೇರಿಗಳಲ್ಲಿ ಬಡವರಿಗೆ ಸಹಾಯ ಮಾಡಲು ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು.

1946 ರಲ್ಲಿ ರೈಲಿನಲ್ಲಿ ಡಾರ್ಜಿಲಿಂಗ್‌ಗೆ ಭೇಟಿ ನೀಡಿದಾಗ, ಮದರ್ ಥೆರೇಸಾ ಅವರು ಜೀಸಸ್‌ಗಾಗಿ ಭಾರತದ ಬಡವರ ಸೇವೆ ಮಾಡಲು ತಮ್ಮ ಆಂತರಿಕ ಆತ್ಮಸಾಕ್ಷಿಯ ಕರೆಯನ್ನು ಕೇಳಿಸಿಕೊಂಡು ಕಲ್ಕತ್ತಾದ ಶಾಲೆಯ ಮುಖ್ಯೋಪಾಧ್ಯಾಯಿನಿ ಕೆಲಸವನ್ನು ಬಿಡಲು ನಿರ್ಧರಿಸಿದರು. ನಂತರ 1950 ರಲ್ಲಿ 'ಮಿಷನರೀಸ್ ಆಫ್ ಚಾರಿಟಿ'ಯನ್ನು ಸ್ಥಾಪಿಸಿದ ಮದರ್ ಥೆರೇಸಾ ನಿರ್ಗತಿಕರಿಗೆ, ರೋಗಿಗಳಿಗೆ ಮತ್ತು ಅನಾಥರಿಗೆ ಆಶ್ರಯವನ್ನು ಒದಗಿಸಿ ದಣಿವರಿಯದೇ ಕಡುಬಡವರಿಗೆ ಸೇವೆ ಸಲ್ಲಿಸಿ, ತನ್ನ ಸೇವಾ ಕಾರ್ಯಗಳ ಮೂಲಕ ಕಟ್ಟ-ಕಡೆಯ ಜನರ ಜೀವನವನ್ನು ಪರಿವರ್ತಿಸಿದರು.

1979 ರಲ್ಲಿ ನೊಬೆಲ್ ಶಾಂತಿ ಪ್ರಶಸ್ತಿಯೊಂದಿಗೆ ಗುರುತಿಸಲ್ಪಟ್ಟ ಮದರ್ ಥೆರೇಸಾ ಪ್ರಭಾವವು ಧಾರ್ಮಿಕ ಮತ್ತು ಸಾಂಸ್ಕೃತಿಕ ಸೇವೆಯ ಗಡಿಗಳಾದ ಭಾಷೆ, ದೇಶ, ಕಾಲ ಮೀರಿ ಬೆಳೆದಿದೆ. ಅವರು ಬಡ ಜನರ ದುಃಖವನ್ನು ನಿವಾರಿಸುವ ಬದ್ಧತೆಯು ಜಾಗತಿಕ ಪ್ರಜ್ಞೆಯ ಮೇಲೆ ಅಳಿಸಲಾಗದ ಕರುಣೆಯ ಗುರುತನ್ನು ಬಿಟ್ಟಿದೆ. ಅವರ ಸತ್ಪರಂಪರೆಯು ವಿಶ್ವಾದ್ಯಂತ ಮಾನವೀಯ ಪ್ರಯತ್ನಗಳನ್ನು ಪ್ರೇರೇಪಿಸುತ್ತಿದೆ.

'ನಿರಂತರ ಪರಿಶ್ರಮ, ಅನುಕಂಪ, ಅರ್ಪಿತ ಮನೋಭಾವ, ಪ್ರಯತ್ನಶೀಲತೆ ಯಾವುದೇ ಸಾಧನೆಗೆ ತಾರಕ ಮಂತ್ರ' ಎಂಬುದು ಅವರ ಜೀವನದಿಂದ ನಾವೆಲ್ಲಾ ಕಲಿಯಬೇಕಾದ ಪಾಠ. ಅವರ ದಯೆಯ ಸಣ್ಣ-ಸಣ್ಣ ಕಾರ್ಯಗಳು ಸಹ ಸಮಾಜದಲ್ಲಿ ಧನಾತ್ಮಕ ಬದಲಾವಣೆಯ ಜಗತ್ತಿನಾದ್ಯಂತ ಅಲೆಗಳನ್ನು ಉಂಟುಮಾಡಿ ಯುವಜನತೆಯನ್ನು ಬಡವರ ಸೇವೆಗೆ ಪ್ರೇರೇಪಿಸುತ್ತಿದೆ.

ಮದರ್ ಥೆರೇಸಾ ಅವರು ಸ್ಥಾಪಿಸಿದ 'ಮಿಷನರೀಸ್ ಆಫ್ ಚಾರಿಟಿ' ವಿಶ್ವಾದ್ಯಂತ 133 ದೇಶಗಳಲ್ಲಿ 4500 ಸನ್ಯಾಸಿನಿಯರು ಹಾಗು ಸಾವಿರಾರು ಸ್ವಯಂಸೇವಕರನ್ನು ಹೊಂದಿದೆ. ಸಂಸ್ಥೆಯ ಕಾರ್ಯವು ಬಡವರ ಮತ್ತು ಅಂಚಿನಲ್ಲಿರುವವರ ಸೇವೆಯಲ್ಲಿ ಉತ್ಸುಕರಾಗಿರುವ ಗಮನಾರ್ಹ ಸಂಖ್ಯೆಯ ಜನರನ್ನು ಇಂದಿಗೂ ಆಕರ್ಷಿಸುತ್ತಿರುವುದು ಅವರ ನಿಸ್ವಾರ್ಥ ಸೇವೆಯ ಪ್ರತಿಬಿಂಬವಾಗಿದೆ.



ಮದರ್ ಥೆರೇಸಾ ಅವರ ಸೇವೆಯ ಹಾದಿಯಲ್ಲೇ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಡು ಬಡವರಿಗೆ, ಅಸಹಾಯಕರಿಗೆ ಸೈಕಲ್‌ಗಳ ವಿತರಣೆ, ತಳ್ಳುವ ತರಕಾರಿ ಗಾಡಿಗಳ ವಿತರಣೆ, ವಿದ್ಯಾರ್ಥಿನಿಯರಿಗೆ ಸ್ಕಾಲರ್‌ಶಿಪ್ ವಿತರಣೆ, ಬೇಸಿಗೆಯಲ್ಲಿ ಮಜ್ಜಿಗೆ ವಿತರಣೆ, ಪಶು-ಪಕ್ಷಿ ಪ್ರಾಣಿಗಳಿಗಾಗಿ ಕುಡಿಯುವ ನೀರಿನ ಬಾನಿಗಳನ್ನು ನೀಡುತ್ತಿದೆ. ಆಸಕ್ತ ದಾನಿಗಳು ಮತ್ತು ಫಲಾನುಭವಿಗಳು ಕರುಣಾ ಜೀವ ಕಲ್ಯಾಣ ಟ್ರಸ್ಟ್ ಅನ್ನು ಸಂಪರ್ಕಿಸಿ.

- ಶಿವನಕೆರೆ ಬಸವಲಿಂಗಪ್ಪ

# ಇಂದು ಬೆಂಗಳೂರಿಗೆ ಪ್ರಧಾನಿ ಮೋದಿ

**ವಿಜ್ಞಾನಿಗಳ ಜೊತೆ ಸಂವಾದ**

ಬೆಂಗಳೂರು, ಆ. 25 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಶನಿವಾರ ಬೆಂಗಳೂರಿಗೆ ಭೇಟಿ ನೀಡಲಿದ್ದು, ಚಂದ್ರಯಾನ - 3ರ ಯಶಸ್ಸಿನಲ್ಲಿ ಭಾಗಿಯಾದ ಇಸ್ರೋ ವಿಜ್ಞಾನಿ ಗಳ ಜೊತೆ ಸಂವಾದ ನಡೆಸಲಿದ್ದಾರೆ.

ಪ್ರಧಾನಿ ಮೋದಿ ಅವರು ಬೆಳಿಗ್ಗೆ 7.15ಕ್ಕೆ ಇಸ್ರೋದ ಐ.ಎಸ್.ಟಿ.ಆರ್.ಎ.ಸಿ. ಕೇಂದ್ರಕ್ಕೆ ಭೇಟಿ ನೀಡಲಿದ್ದಾರೆ ಎಂದು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ದಕ್ಷಿಣ ಆಫ್ರಿಕಾ ಹಾಗೂ ಗ್ರೀಕ್ ಪ್ರವಾಸದಿಂದ ವಾಪಸ್ಸಾದ ನಂತರ ಪ್ರಧಾನಿ ನೇರವಾಗಿ ಬೆಂಗಳೂರಿಗೆ ಬರಲಿದ್ದಾರೆ. ಹೆಚ್.ಎ.ಎಲ್. ವಿಮಾನ ನಿಲ್ದಾಣ ಹಾಗೂ ಐ.ಎಸ್.ಟಿ.ಆರ್.ಎ.ಸಿ.ಗೆ ಸಮೀಪ ಇರುವ ಜಾಲಹಳ್ಳಿ ಕ್ರಾಸ್ ಬಳಿ ಪ್ರಧಾನಿಗೆ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಸ್ವಾಗತಿಸಲಿದ್ದಾರೆ. ಆದರೆ, ಈ ಸಂದರ್ಭದಲ್ಲಿ ರೋಡ್ ಶೋ ಇರುವುದಿಲ್ಲ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

# ಅಂಬಾನಿ - ಅದಾನಿ ಜೇಬಿನಲ್ಲಿ ಹಣ ಇದ್ದರೆ ಬಡವರ ಉದ್ಧಾರವಾಗದು : ಸಿಎಂ ಸಿದ್ದರಾಮಯ್ಯ

ಬೆಂಗಳೂರು, ಆ.25 - ಬರೀ ಅಂಬಾನಿ-ಅದಾನಿ ಜೇಬಿನಲ್ಲಿ ಹಣ ಇದ್ದರೆ ಬಡವರ, ಮಧ್ಯಮ ವರ್ಗದವರ ಉದ್ಧಾರ ಸಾಧ್ಯವಿಲ್ಲ. ತಿಮ್ಮ-ಬೋರ-ಕಾಳನ ಜೇಬಿನಲ್ಲಿ ಹಣ ಇದ್ದರೆ ಮಾತ್ರ ಆರ್ಥಿಕತೆ ಬೆಳವಣಿಗೆ ಆಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿದರು.

ಕರ್ನಾಟಕ ಆದಿಜಾಂಬವರ ಸಾಂಸ್ಕೃತಿಕ ಸಮಿತಿ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ದಿ.ಡಾ.ಸಿದ್ದಲಿಂಗಯ್ಯ ಸ್ಮರಣೆ ಕಾರ್ಯಕ್ರಮ ಉದ್ಘಾಟಿಸಿ, ಸಿದ್ದಲಿಂಗಯ್ಯ ಅವರ ಪುತ್ಥಳಿಯನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ದುಡಿಯುವವರ, ಶ್ರಮಿಕರ ಜೇಬಿನಲ್ಲಿ ಹಣ ಇದ್ದರೆ ಅವರು ದೇಶದ ಆರ್ಥಿಕತೆಯ ಬೆಳವಣಿಗೆಗೆ ಕಾರಣರಾಗುತ್ತಾರೆ. ಕೇವಲ ಅಂಬಾನಿ, ಅದಾನಿ ಜೇಬು ತುಂಬಿಸುವವರ ಕೈಗೆ ಅಧಿಕಾರ ಕೊಟ್ಟು ಇಡಿ ದೇಶ ಪರಿತಪಿಸುವಂತಾಗಿದೆ ಎಂದರು.

ಈ ಕಾರಣಕ್ಕೆ ನಮ್ಮ ಸರ್ಕಾರ ತಿಮ್ಮ-ಬೋರ-ಕಾಳನಂತಹ ಶ್ರಮಿಕ ವರ್ಗದ ಜೇಬಿಗೆ ಹಣ ಹಾಕುವ ಅನ್ನಭಾಗ್ಯ, ಶಕ್ತಿ, ಗೃಹಲಕ್ಷ್ಮಿ, ಗೃಹಜ್ಯೋತಿ ಕಾರ್ಯಕ್ರಮಗಳನ್ನು ಜಾರಿ ಮಾಡಿ ಜನರ ಜೇಬಿಗೆ ಹಣ ಹಾಕುವ ಕೆಲಸಕ್ಕೆ ಮುಂದಾಗಿದ್ದೇವೆ. ಇದರಿಂದ ನಮ್ಮ ಆರ್ಥಿಕತೆ ಚೈತನ್ಯ ಪಡೆದುಕೊಳ್ಳುತ್ತಿದೆ ಎಂದು ವಿವರಿಸಿದರು.

ಸಂವಿಧಾನದ ವಿರೋಧಿಗಳ ಕೈಗೆ ಅಧಿಕಾರ ಕೊಟ್ಟು ಸಮಾನತೆ ಬರಬೇಕು ಎಂದರೆ ಹೇಗೆ ಸಾಧ್ಯ? ಅಂಬಾನಿ-ಅದಾನಿಯವರ ಜೇಬು ತುಂಬಿಸುವವರ ಕೈಗೆ ಕೇಂದ್ರದಲ್ಲಿ ಅಧಿಕಾರ ಕೊಟ್ಟು ಬಡವರ, ಮಧ್ಯಮ ವರ್ಗದವರ ಉದ್ಧಾರ ಆಗಬೇಕು ಎಂದರೆ ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ಸಿದ್ದಲಿಂಗಯ್ಯ ಅವರ ಆಶಯಗಳನ್ನು ಬದುಕಿನಲ್ಲಿ ಇಟ್ಟುಕೊಂಡವರಿಗೆ ಜೀವ ಬೆದರಿಕೆ ಪತ್ರಗಳು ಬರುತ್ತಿವೆ. ಈ ಬೆದರಿಕೆ ಪತ್ರ ಬರೆಯುವವರನ್ನು ಬೆಂಬಲಿಸುವವರ ಕೈಗೆ ಅಧಿಕಾರ ಕೊಟ್ಟು ಯಾರಿಗೆ ಬಂತು, ಎಲ್ಲಿಗೆ ಬಂತು 47 ರ ಸ್ವಾತಂತ್ರ್ಯ? ಎಂದು ಪ್ರಶ್ನಿಸಿದರೆ ಹೇಗೆ ಎಂದು ಸಭಿಕರನ್ನು ಪ್ರಶ್ನಿಸಿದರು.

ಸಿದ್ದಲಿಂಗಯ್ಯನವರ ಕವನಗಳು ಸಮಾಜದ ವಸ್ತು ಸ್ಥಿತಿಗೆ ಕನ್ನಡಿ ಹಿಡಿದಿವೆ. ಅಸಮಾನತೆ, ತಾರತಮ್ಯದ ವಿರುದ್ಧ ಸಮಾಜವನ್ನು ಎಚ್ಚರಿಸುವ ಧ್ವನಿ ಸಿದ್ದಲಿಂಗಯ್ಯ ಅವರ ಕವನಗಳಲ್ಲಿವೆ. ದೇಶಕ್ಕೆ ಬಂದಿರುವ ರಾಜಕೀಯ ಸ್ವಾತಂತ್ರ್ಯ ಸಾಮಾಜಿಕ ಪ್ರಜಾಪ್ರಭುತ್ವದ ತಳಹದಿಯ ಮೇಲೆ ಜಾರಿ ಆಗದಿದ್ದರೆ, ಸ್ವಾತಂತ್ರ್ಯಕ್ಕೆ ಅರ್ಥ ಇಲ್ಲ ಎಂದು ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಹೇಳಿದ್ದರು.

## ಇಸ್ರೋ ತಂಡಕ್ಕೆ ರಾಜ್ಯಪಾಲರ ಸನ್ಮಾನ

ಬೆಂಗಳೂರು, ಆ. 25 - ಚಂದ್ರಯಾನ - 3ರ ಯಶಸ್ಸು ಕಂಡಿರುವ ಇಸ್ರೋ ಅಧ್ಯಕ್ಷ ಎಸ್. ಸೋಮನಾಥ್ ಹಾಗೂ ಅವರ ತಂಡದವರಿಗೆ ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್ ಸನ್ಮಾನಿಸಿದ್ದಾರೆ. ಇಸ್ರೋ ಕೇಂದ್ರ ಕಚೇರಿಗೆ ತೆರಳಿದ ಗೆಹ್ಲೋಟ್, ಚಂದ್ರಯಾನ ತಂಡವು ಭಾರತಕ್ಕೆ ಹೆಮ್ಮೆ ತಂದಿದೆ ಎಂದಿದ್ದಾರೆ.

# ತ್ಯಾಗ, ಬಲಿದಾನದಿಂದ ಸ್ವಾತಂತ್ರ್ಯ ಲಭಿಸಿದೆ : ಲೋಕಣ್ಣ ಮಾಗೋಡ್ರ

ದಾವಣಗೆರೆ, ಆ. 25- ಹಳೇಪೇಟೆಯ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ನಡೆದ 77ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಕೋಡುಬಾಳು ಚನ್ನಬಸಪ್ಪ ಧ್ವಜಾರೋಹಣ ನೆರವೇರಿಸಿದರು.

ಈ ವೇಳೆ ಮಾತನಾಡಿದ ಮುಖ್ಯ ಶಿಕ್ಷಕ ಲೋಕಣ್ಣ ಮಾಗೋಡ್ರ, ಈ ದೇಶದ ಸ್ವಾತಂತ್ರ್ಯಕ್ಕಾಗಿ ಲಕ್ಷಾಂತರ ಜನರು ಬೀದಿಗಿಳಿದು, ಭೂಗತರಾಗಿ ಹೋರಾಟ ಮಾಡಿದ್ದಾರೆ. ಸಾವಿರಾರು ಜನರು ಸ್ವಾತಂತ್ರ್ಯ ಚಳವಳಿಯಲ್ಲಿ ತಮ್ಮ ಪ್ರಾಣಾರ್ಪಣೆ ಮಾಡಿ ಹುತಾತ್ಮರಾಗಿದ್ದಾರೆ. ಸಾವಿರಾರು ಜನ ಸ್ವಾತಂತ್ರ್ಯ ಯೋಧರು ಜೈಲು ಸೇರಿ ಕಠಿಣ ಶಿಕ್ಷೆಗೆ ಒಳಗಾಗಿದ್ದಾರೆ. ಇಂತಹ ತ್ಯಾಗ, ಬಲಿದಾನಗಳಿಂದ ಲಭಿಸಿದ ಸ್ವಾತಂತ್ರ್ಯ ದೇಶವನ್ನು ಸಂರಕ್ಷಿಸಬೇಕೆಂದರು.

ಜಿಲ್ಲಾ ಶಾಲಾಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿಗಳ ಒಕ್ಕೂಟದ ಪತ್ರಿಕಾ ಕಾರ್ಯದರ್ಶಿ ರಮೇಶ್ ಸಿ.ದಾಸರ್ ಮಾತನಾಡಿ, ಬ್ರಿಟಿಷರ ವಿರುದ್ಧ ಹೋರಾಟ ಮಾಡಿ ತ್ಯಾಗ, ಬಲಿದಾನಗಳಿಂದ ಸ್ವಾತಂತ್ರ್ಯ ಪಡೆದರೂ ಇಂದು ನಮ್ಮನ್ನು ಆಳುವ ಸರ್ಕಾರಗಳು ಬಂಡವಾಳಶಾಹಿಗಳ ಕಪಿ ಮುಷ್ಠಿಯಲ್ಲಿ ಸಿಲುಕಿ ದೇಶಕ್ಕಾಗಿ ದುಡಿಯುವ ರೈತರು, ಕಾರ್ಮಿಕರು, ಬಡವರು, ದುಡಿಯುವ ವರ್ಗದ ಹಿತವನ್ನು ಬಯಸದೇ ಸಂಕಷ್ಟಗಳಿಗೆ ಗುರಿ ಮಾಡುತ್ತಿವೆ ಎಂದು ದೂರಿದರು.

ಶಿಕ್ಷಕರಾದ ಎಂ.ಎಸ್. ನಮಿತಾ, ಆರ್. ಸಿ.ಅನಸೂಯಮ್ಮ, ವಿಜಯಕುಮಾರಿ, ಜಯಶ್ರೀ, ದೈಹಿಕ ಶಿಕ್ಷಕಿ ಸುಜಾತ, ಶಾಲೆಯ ಅಡುಗೆ ಸಿಬ್ಬಂದಿ, ಪೋಷಕರು ಇದ್ದರು.

# ಪಾಕಿಸ್ತಾನದ ಜಲ ಪ್ರದೇಶದಲ್ಲಿ ಬಂಧಿತ ಬೆಸ್ತರ ಬಿಡುಗಡೆ

**ರಾಜಕೀಯವಾಗಿ ವಿಷಯ ಬಗೆಹರಿಸಿಕೊಳ್ಳಬೇಕು : ಸುಪ್ರೀಂ ಕೋರ್ಟ್**

ನವದೆಹಲಿ, ಆ. 25 - ಪಾಕಿಸ್ತಾನದ ಜಲ ಪ್ರದೇಶದಲ್ಲಿ ಬಂಧಿತ ಭಾರತೀಯ ಬೇಸ್ತರ ವಿಷಯಕ್ಕೆ ಸಂಬಂಧಿಸಿದ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದ್ದು, ರಾಜಕೀಯ ವಿಷಯಗಳನ್ನು ರಾಜಕೀಯವಾಗಿಯೇ ಬಗೆಹರಿಸಿಕೊಳ್ಳಬೇಕು ಎಂದು ಹೇಳಿದೆ.

ಬೆಸ್ತರನ್ನು ಬಿಡುಗಡೆ ಮಾಡಲು ಪಾಕಿಸ್ತಾನಕ್ಕೆ ನಿರ್ದೇಶನ ನೀಡಲಾಗದು. ಈ ವಿಷಯ ಸಂವಿಧಾನದ 32ನೇ ವಿಧಿಯಡಿ ಬರುವುದಿಲ್ಲ ಎಂದು ನ್ಯಾಯಾಲಯ ಹೇಳಿದೆ.

ಸಂವಿಧಾನದ 32ನೇ ವಿಧಿಯ ಅನ್ವಯ ನಾಗರಿಕರು ನೇರವಾಗಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿ, ಮೂಲಭೂತ ಹಕ್ಕುಗಳನ್ನು ಜಾರಿಗೊಳಿಸಲು ಕೇಳಬಹುದಾಗಿದೆ.

ಪಾಕಿಸ್ತಾನದಲ್ಲಿ ಬಂಧಿತರಾದ ಬೆಸ್ತರನ್ನು ಬಿಡುಗಡೆ ಮಾಡುವ ಸಂಬಂಧ ಗುಜರಾತ್‌ನ ಇಬ್ಬರು ಹಾಗೂ ಮಹಾರಾಷ್ಟ್ರದ ಒಬ್ಬರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.


**ಸೈಟ್ ಮಾರಾಟಕ್ಕೆ (ಬಂಗ್ಲೆ)**
ಕಮರ್ಷಿಯಲ್ ಸೈಟ್ 100 ಅಡಿ ರಸ್ತೆಗೆ, ಕಿರಣ್ ಭೂಸನೂರ್ (ಏಜೆಂಟ್) 97315 63409
ಕರ್ನಾಟಕ ಗೃಹ ಮಂಡಳಿಯಲ್ಲಿ 60x79 ಪೂರ್ವ, 50x80 ಉತ್ತರ, 40x60 ಉತ್ತರ, 40x60 ಪೂರ್ವ, 40x60 ದಕ್ಷಿಣ 40 ಅಡಿ ರಸ್ತೆಗೆ 30x40 20x30

**ಸೈಟುಗಳು ಮಾರಾಟಕ್ಕಿವೆ**
1) 45x48 South ವಿನಾಯಕ ಬಡಾವಣೆಯಲ್ಲಿ. 2) 30x40 North ಬನಶ್ರೀ ಲೇಔಟ್‌ನಲ್ಲಿ. 3) 40x40 South ಡಾಲರ್ಸ್ ಕಾಲೋನಿಯಲ್ಲಿ
ಐನಳ್ಳಿ ಚನ್ನಬಸಪ್ಪ, ಏಜೆಂಟ್ 99166 12110

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250 91132 85992

**ಮಳಿಗೆ ಬಾಡಿಗೆಗಿದೆ**
15×15 Sq.Feet ಅಳತೆಯ ಕಾರ್ನರ್ ಮಳಿಗೆ ಬಾಡಿಗೆಗೆ ಇದೆ ರಾಮ್ ಅಂಡ್ ಕೋ ಸರ್ಕಲ್ ಹತ್ತಿರ, 4ನೇ ಮುಖ್ಯರಸ್ತೆ ಪಿ.ಜೆ. ಬಡಾವಣೆ, ದಾವಣಗೆರೆ. ಸಂಪರ್ಕಿಸಿ: 99649 32504

**ಬೇಕಾಗಿದ್ದಾರೆ**
ನೂತನವಾಗಿ ಆರಂಭವಾಗುತ್ತಿರುವ ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು ವೈಟರ್ ಅಂಡ್ ಕ್ಲೀನರ್ ಬೇಕಾಗಿದ್ದಾರೆ. ಕೆಲಸದ ಸಮಯ : ಬೆಳಿಗ್ಗೆ 10.30ರಿಂದ ರಾತ್ರಿ 10.30ರವರೆಗೆ
91483 08150

**ಕ್ಲಿನಿಕ್ ಮತ್ತು ಆಪ್ಟಿಕಲ್ಸ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.**
ಸಂಪರ್ಕಿಸಿ : ಮೊ. 83102-40764

**ಬೇಕಾಗಿದ್ದಾರೆ**
ರಿಸೆಪ್ಷನಿಸ್ಟ್ ಕೆಲಸಕ್ಕೆ ಉತ್ತಮ ಸಂವಹನ ಕೌಶಲ್ಯ ಹೊಂದಿರುವ ಮಹಿಳೆ ಬೇಕಾಗಿದ್ದಾರೆ.
ಶ್ರೀ ಹರ ಮ್ಯೂಸಿಕಲ್ ವರ್ಲ್ಡ್, ದಾವಣಗೆರೆ
ಸಂಜೆ 4.00 ರಿಂದ ರಾತ್ರಿ 8.30
81977 78488, 80733 92077

**ಮನೆ ಬಾಡಿಗೆಗೆ**
Ground floor, 2 BHK ಮನೆ, ಅಟ್ಯಾಚ್ ಬಾತ್‌ರೂಮ್ ಹೊಂದಿರುವ, ಮುನ್ಸಿಪಲ್ ಹಾಗೂ ಬೋರ್‌ವೆಲ್ ಸೌಕರ್ಯವಿರುವ ವಾಸ್ತು ಪ್ರಕಾರದ ಪೂರ್ವ ದಿಕ್ಕಿನ ಮನೆ. ಡೋ.ನಂ. 1830/41, LIC ಕಾಲೋನಿ, ವಿದ್ಯಾನಗರ, ನೂತನ ಕಾಲೇಜ್ ಹಿಂಭಾಗ, ದಾವಣಗೆರೆ. ಸಂಪರ್ಕಿಸಿ :
97405 43247

**ಮನೆ ಮತ್ತು ಗೋಡೌನ್ ಮಾರಾಟಕ್ಕಿವೆ**
ನರಸರಾಜ ರಸ್ತೆಯಲ್ಲಿ ಇರುವ ಮನೆ ಮತ್ತು ಎಪಿಎಂಸಿ ಯಾರ್ಡ್ 'ಸಿ' ಬ್ಲಾಕ್‌ನಲ್ಲಿರುವ ಗೋಡೌನ್ ಮಾರಾಟಕ್ಕಿವೆ. ಹಳೇ ಕುಂದುವಾಡ 30×50 ಪೂರ್ವ, KM Layout 30×50 ಪೂರ್ವ.
90361 89699, 7259269940

**ಮನೆಗಳು ಮಾರಾಟಕ್ಕಿವೆ**
1) 50x30 West ಮೂರು ಫ್ಲೋರ್ ಮನೆ ವಿವೇಕಾನಂದ ಬಡಾವಣೆಯಲ್ಲಿ. 2) 30x50 West ಮೂರು ಫ್ಲೋರ್ ಮನೆ ಡಾಲರ್ಸ್ ಕಾಲೋನಿಯಲ್ಲಿ
ಐನಳ್ಳಿ ಚನ್ನಬಸಪ್ಪ, ಏಜೆಂಟ್ 99166 12110

**ಬೇಕಾಗಿದ್ದಾರೆ**
ಫ್ರೂಟ್ ಜ್ಯೂಸ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ:
98864-39097

**EC / ಇಸಿ, E-swathu, Khatha Change Building Licence & Property Documents, Loans-All banks**
96118-66449

**ಬಾಡಿಗೆಗೆ ಮನೆಗಳು ದೊರೆಯುತ್ತವೆ. ವಿಚಾರಿಸಿರಿ**
MCC B Block, ಸಿದ್ದವೀರಪ್ಪ ಬಡಾವಣೆ, Three Bed Room, Two Bed Room ಮನೆಗಳು
ದಕ್ಷಿತ್ ಐನಳ್ಳಿ, ಏಜೆಂಟ್ 99027 56559

**ಬೇಕಾಗಿದ್ದಾರೆ**
ಆನಗೋಡು ಸಮೀಪ NH-48 ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಆನಗೋಡು ಸುತ್ತ-ಮುತ್ತ ಇರುವ ಉತ್ಸಾಹಿ ಯುವಕರು ಬೇಕಾಗಿದ್ದಾರೆ. ಸಂಪರ್ಕಿಸಿ :
90082 28222, 63606 11836

**ಜಮೀನು ಮಾರಾಟಕ್ಕೆ ಇದೆ**
ಹನಗವಾಡಿ ಬೈಪಾಸ್ ಹತ್ತಿರ, 5ಎ, 12 ಗುಂ. ಇದೆ. ಸೊಕ್ಕೆ ಹತ್ತಿರ 15 ಎಕರೆ ಜಮೀನು ಇದೆ. ಚಿತ್ರದುರ್ಗ- ಬಳ್ಳಿಕಟ್ಟೆ NH4 ಒಗೆ 6 ಎ. 20 ಗುಂ. ಇದೆ.
ಎಸ್. ಯಲ್ಲೋಜಿರಾವ್ 97418 11694

**ವಧು ಬೇಕಾಗಿದೆ**
ಸುಸಂಸ್ಕೃತ ಮನೆತನದ ಒಬ್ಬನೇ ಮಗನಿರುವ 36 ವರ್ಷದ ಸಾಧು ಲಿಂಗಾಯತ ವರನಿಗೆ ಲಿಂಗಾಯತ ವಧು ಬೇಕಾಗಿದೆ.
97424 48252, 74835 71646

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು.
99863 61250 80730 24690

**3 BHK on Lease only First floor House**
# 2396/12, 10 th Cross, (Main), 16th Division, MCC A Block, Davangere - 4.
83830 19890, 98994 14922 83105 04706

**ಸಹಾಯಕರು/Helper ಬೇಕಾಗಿದ್ದಾರೆ**
ಹುದ್ದೆಗಳ ಸಂಖ್ಯೆ -02
1)Helper women (ಸಹಾಯಕ ಮಹಿಳೆ ): 01
2) Helper boy (ಸಹಾಯಕ ಹುಡುಗ-18ರಿಂದ 25 ವರ್ಷ ): 01
ನಿಸರ್ಗ ಪ್ರಾಥಮಿಕ ಹಾಗೂ ಪ್ರೌಢಶಾಲೆ, 'C' ಬ್ಲಾಕ್, SOG ಬಡಾವಣೆ, ಇಂಡಸ್ಟ್ರಿಯಲ್ ಏರಿಯಾ, ದಾವಣಗೆರೆ.
87927 02690, 99862 26454, 98444 43374

**DULL IN MATHS**
JUNIOR ABACUS 1std to 3rd std
VEDIC MATHS 4th std to 10th std
Behind thimmareddy school Dollars Colony
97390 66956

**ಹುಡುಗರು ಬೇಕಾಗಿದ್ದಾರೆ**
Xerox ಅಂಗಡಿಯಲ್ಲಿ ಕೆಲಸ ಮಾಡಲು ನಾಲ್ವರು ಹುಡುಗರು ಬೇಕಾಗಿದ್ದಾರೆ. ರಾಂ & ಕೋ ಸರ್ಕಲ್ ಹತ್ತಿರ, ಕಂಪ್ಯೂಟರ್ ಜ್ಞಾನವುಳ್ಳವರಿಗೆ ಆದ್ಯತೆ.
70221 58935

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಶಿವ ಪಾರ್ವತಿ ಲೇಔಟ್, ಡಾಲರ್ಸ್ ಕಾಲೋನಿ ಮತ್ತು ತರಳಬಾಳು ಬಡಾವಣೆಯಲ್ಲಿ 30x40, 30x55, 40x40, 30x50 40x30, 40x60
ಮೊ : 95385 65909

**HOUSE FOR RENT**
2BHK RTO / SP ಆಫೀಸ್ ಹತ್ತಿರ. ಬೋರ್ ಹಾಗು ಕಾರ್ಪೊರೇಷನ್ ನೀರಿನ ಸವಲತ್ತಿರುವ ಹೊಸ ಮನೆ ಬಾಡಿಗೆಗೆ ಸಂಪರ್ಕಿಸಿ
78297 09850

**ಮನೆ ಮಾರಾಟಕ್ಕಿದೆ**
20x20 ಅಳತೆಯ ಹೊಸ ಆರ್‌ಸಿಸಿ ಮನೆ ಎಲ್ಲಾ ಸೌಕರ್ಯವುಳ್ಳ ಮನೆ ಮಾರಾಟಕ್ಕಿದೆ
ಎಸ್‌ಜೆಎಂ ನಗರ, ಹೊಸಕ್ಯಾಂಪ್, ಆರ್‌ಟಿಓ ಆಫೀಸ್ ಹತ್ತಿರ, ದಾವಣಗೆರೆ.
97391 00673

**ಮಳಿಗೆ ಬಾಡಿಗೆಗಿದೆ**
15X15 Sq.Feet ಅಳತೆಯ ಕಾರ್ನರ್ ಮಳಿಗೆ ಬಾಡಿಗೆಗೆ ಇದೆ. ರಾಮ್ ಅಂಡ್ ಕೋ ಸರ್ಕಲ್ ಹತ್ತಿರ, 4ನೇ ಮುಖ್ಯರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ. ಸಂಪರ್ಕಿಸಿ:
99649 32504

**ಸೈಟ್ ಮಾರಾಟಕ್ಕೆ**
ಡಾಲರ್ಸ್ ಕಾಲೋನಿ (40x51) ಪಶ್ಚಿಮ, ಕುಂದುವಾಡ ಸೈಟ್ 44 (30x50) ಪಶ್ಚಿಮ-ನೈರುತ್ಯ ಮೂಲೆ & ಸೈಟ್ 43 (30x50) ಪಶ್ಚಿಮ (ಅಕ್ಕ-ಪಕ್ಕ)
ಫೋ. : 97404 47907

**ಬೇಕಾಗಿದ್ದಾರೆ**
ಪದವೀಧರರು ಲೇಡಿ ಹಾಸ್ಟೆಲ್ ವಾರ್ಡನ್ ಆಗಿ ತುರ್ತು ಬೇಕಾಗಿದ್ದಾರೆ. ಆಸಕ್ತರು ಎಂ.ಇ.ಎಸ್. ಸಮೂಹ ಶಿಕ್ಷಣ ಸಂಸ್ಥೆ, ಆಂಜನೇಯ ಬಡಾವಣೆ, 9 ನೇ ಕ್ರಾಸ್ ದಾವಣಗೆರೆ
98804 36414, 98800 30171

**ಸೈಟು ಮಾರಾಟಕ್ಕಿದೆ**
ದಾವಣಗೆರೆ ಗ್ಲಾಸ್ ಹೌಸ್ (ಬಲಗಡೆ) ಹತ್ತಿರ 30×50 ಅಳತೆಯುಳ್ಳ (ಉತ್ತರ) ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ :
ಮೊ. : 9019888512

**ಗ್ಯಾಸ್ ಗೀಜರ್**
Fully Automatic Rs. 2990/-
R.O. +uv ವಾಟರ್ ಫಿಲ್ಟರ್, 5490/- ಸೇಲ್ಸ್ & ಸರ್ವೀಸ್‌ಗಾಗಿ ಸಂಪರ್ಕಿಸಿ :
ಮರುತ್ ಎಂಟರ್ ಪ್ರೈಸಸ್
ವೈಎಂಸಿ ಕಾಂಪ್ಲೆಕ್ಸ್, ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ.
98868 96574, 98458 67574

**ಮನೆ ಬಾಡಿಗೆ/ಲೀಜ್‌ಗಿದೆ**
#109/15, 1ನೇ ಮಹಡಿ, ಡಬಲ್ ಬೆಡ್ ರೂಂ ಮುನ್ಸಿಪಲ್ ಮತ್ತು ಬೋರ್ ನೀರಿನ ವ್ಯವಸ್ಥೆ ಇರುವ ಮನೆ ಇದೆ. ಎಪಿಎಂಸಿ ಲಿಂಕ್ ರಸ್ತೆ, ಮಹಾವೀರ ಕಲ್ಯಾಣ ಮಂಟಪ ರಸ್ತೆ ಹತ್ತಿರ, ದಾವಣಗೆರೆ.
9844969721, 9448366027


**REQUIRED**
Security guards and bouncers required in Davangere and Chitradurga
81056 99985 89715 04492

**ಬೇಕಾಗಿದ್ದಾರೆ**
1) ಡಿಲೆವರಿ ಬಾಯ್ಸ್
2) B.Com account with computer (Married Ladies preferred) Experience 5 years
ಎ.ಕೆ.ಟ್ರೇಡರ್ಸ್
ಆಶೀರ್ವಾದ್, ಬಾಪೂಜಿ ಆಸ್ಪತ್ರೆ ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ- 577004

**INTRODUCING**
Novadaya and Sainik Coaching, Nijalingappa Badavane.
M : 97390 66956

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**SECURITY GUARD ಬೇಕಾಗಿದ್ದಾರೆ**
ಉತ್ತಮ ವೇತನ,
70012 87756, 97409 77785

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
81478 03755

**ಅಧಿಕೃತ ಚೀಟಿ ಸಂಸ್ಥೆ**
ರೂ. 1 ಲಕ್ಷದ ಚೀಟಿ ಪ್ರಾರಂಭ 50 ಸದಸ್ಯರು, 1,400 ರಿಂದ 2,000 ರೂ.ವರೆಗೆ. ಸಂಪರ್ಕಿಸಿ
ಸ್ಕಂದ ಚಿಟ್ ಫಂಡ್ಸ್ (ರಿ.)
78997 75159

**ವಾಟರ್ ಪ್ರೂಫಿಂಗ್ (ನೀರಿನ ಲೀಕೇಜ್)**
ನಿಮ್ಮ ಮನೆಯ ಅಥವಾ ಕಟ್ಟಡಗಳ, ಮಹಡಿ, ಮೆಟ್ಟಿಲುಗಳು, ಬಾತ್ ರೂಂ, ಟೆರೇಸ್, ಸಂಪು, O.H ಟ್ಯಾಂಕ್, ಗೋಡೆಯ ಬಿರುಕು, ಕೀಲುಗಳ ಬಿರುಕು, ಕಿಟಕಿ, ಸಜ್ಜಾ, ಈಜುಕೊಳ, ಇತ್ಯಾದಿ ಯಾವುದೇ ರೀತಿಯ ನೀರಿನ ಲೀಕೇಜ್ ಆಗುತ್ತಿದ್ದರೆ, ನಮ್ಮನ್ನು ತಕ್ಷಣವೇ ಸಂಪರ್ಕಿಸಿ :
80955 09025
ಕೆಲಸ 100% ಗ್ಯಾರಂಟಿಯದೆ.

**ತಕ್ಷಣ ಬೇಕಾಗಿದ್ದಾರೆ**
ಆಸ್ಪತ್ರೆ ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ, ಆಕರ್ಷಕ ಸಂಬಳ 8000/- ಇರುತ್ತದೆ. ಸಂಪರ್ಕಿಸಿ :
89515 01053 73535 07622

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**WANTED TEACHERS**
BS.c, BE.d - 2 Posts, Aya - 2 Posts, Attractive salary will be given to experienced & right candidates only Contact to Vinayaka Convent Ganeshpet Kalikadevi Road, Dvg.
95356 10817

**ನರ್ಸಿಂಗ್ ಸಿಬ್ಬಂದಿ ಬೇಕಾಗಿದ್ದಾರೆ**
ಮಲೇಬೆನ್ನೂರಿನ ಆಸ್ಪತ್ರೆಯಲ್ಲಿ ನರ್ಸಿಂಗ್ (ನರ್ಸಿಂಗ್ ಪಾಸ್/ಫೇಲ್, ಲ್ಯಾಬ್ ಟೆಕ್ನೀಷಿಯನ್ ಪಾಸ್/ಫೇಲ್, ಪಿಯುಸಿ ಪಾಸ್/ಫೇಲ್, ಡಿಗ್ರಿ ಪಾಸ್/ಫೇಲ್) ಮತ್ತು ಆಯಾ (ಡಿ ಗ್ರೂಪ್) ಕೆಲಸ ನಿರ್ವಹಿಸಲು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ, ಉಳಿದುಕೊಳ್ಳಲು ಹಾಸ್ಟೆಲ್ ವ್ಯವಸ್ಥೆ ಇರುತ್ತದೆ.
ಮೊ : 99163 99692

**ಶ್ರೀ ಧರ್ಮಸ್ಥಳ ಮಂಜುನಾಥ ಸ್ವಾಮಿ ದೈವಶಕ್ತಿ ಜ್ಯೋತಿಷ್ಯರು**
(ಪಂಡಿತ್ ಮಂಜುನಾಥ ಭಟ್)
ನಂ.1. ವಶೀಕರಣ ಸ್ಪೆಷಲಿಸ್ಟ್
ಸಮಸ್ಯೆ : ವಿದ್ಯೆ, ಉದ್ಯೋಗ, ಆರೋಗ್ಯ, ಹಣಕಾಸು, ಸಾಲಬಾಧೆ, ಮಾಟ ಮಂತ್ರ
ವಿ.ಸೂ.: ಸ್ತ್ರೀ-ಪುರುಷ ವಶೀಕರಣಕ್ಕೆ ಕೇವಲ 3 ದಿನಗಳಲ್ಲಿ ಪರಿಹಾರ ಶತಸಿದ್ಧ. ನಿಮ್ಮ ಯಾವುದೇ ಸಮಸ್ಯೆಯಿದ್ದರೂ ಫೋನಿನ ಮೂಲಕ ಸಂಪರ್ಕಿಸಿ ಸಮಸ್ಯೆ ಪರಿಹರಿಸಿಕೊಳ್ಳಿ.
ಫೋ.: 9902324487

**ಲಾರಿ ಡ್ರೈವರ್ ಬೇಕಾಗಿದ್ದಾರೆ**
ಐಗೂರಿನಲ್ಲಿರುವ ಫ್ಯಾಕ್ಟರಿಗೆ ಅನುಭವವುಳ್ಳ ಲಾರಿ ಡ್ರೈವರ್ ಹಾಗೂ ಐಟಿಐ ಫಿಟ್ಟರ್ ಆಗಿರುವ ಮೆಕ್ಯಾನಿಕ್ ಬೇಕಾಗಿದ್ದಾರೆ
99016-76700

**Commercial Building Available for Rent**
Ground floor 1000 Sq.ft First Floor 1700 Sq.ft, Second Floor 1700 Sq.ft with lift and Generator Chetana Hotel Road.
94480 56468

**WANTED ACCOUNTANT - 1**
(2-3 Year Experience Tally)
Contact : 98441 20003
Shamanur Pharma & Health Care Pvt. Ltd., 374, P.J. Extn., Davangere.

**ಹುಡುಗರು ಬೇಕಾಗಿದ್ದಾರೆ**
ಕಾರ್ ಪ್ರೊಫೆಷನಲ್ಸ್, ಪಿ.ಬಿ. ರೋಡ್, ದಾವಣಗೆರೆ ವಾಟರ್ ಸರ್ವೀಸ್ ಸ್ಟೇಷನ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
97399 42217

**CAREER OPPORTUNITY**
Top MNC Looking for Candidates from Banking/Finance/Insurance Industry. Age 27 above. Fixed Pay upto 75K, Huge Incentives, PF,ESI, Reward & Recognition and Foreign travel.
98806 56168

# ಚಂದ್ರಯಾನ -3 ಯಶಸ್ಸಿನ ಲಾಭದಿಂದ ಮಾರ್ಕೆಟ್ ಮಾಡುತ್ತಿರುವ ಮೋದಿ

ದಾವಣಗೆರೆ, ಆ. 25- ಚಂದ್ರಯಾನ -3 ರ ಸಂಪೂರ್ಣ ಯಶಸ್ಸು ಇಸ್ರೋ ಹಾಗೂ ಇಸ್ರೋ ವಿಜ್ಞಾನಿಗಳಿಗೆ ಸಲ್ಲುತ್ತದೆ. ಚಂದ್ರಯಾನ ಮೂರರ ಯೋಜನೆಯ ವಿಕ್ರಂ ಲ್ಯಾಂಡರ್ ಬುಧವಾರ ಚಂದ್ರನ ಮೇಲೆ ಯಶಸ್ವಿಯಾಗಿ ಲ್ಯಾಂಡ್ ಆಗುವ ವೇಳೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ದಕ್ಷಿಣ ಆಫ್ರಿಕಾದ ಜೋಹಾನ್ಸ್ ಬರ್ಗ್ ನ ಬ್ರಿಕ್ಸ್ ಶೃಂಗ ಸಭೆಯಲ್ಲಿ ಪಾಲ್ಗೊಂಡಿದ್ದರು. ಚಂದ್ರಯಾನ ಮೂರರ ಯಶಸ್ಸಿನ ಸುದ್ದಿ ತಿಳಿಯುತ್ತಲೇ ಎಂದಿನಂತೆ ಮೋದಿ ಅವರು ರಾಜಕೀಯ ಲಾಭ ಪಡೆಯಲು ಹವಣಿಸಲು ಶುರು ಮಾಡಿದ್ದಾರೆ. ವಿಕ್ರಂ ಲ್ಯಾಂಡರ್ ಸಾಫ್ಟ್ ಲ್ಯಾಂಡಿಂಗ್ ಆಗಲು ಕೆಲವೇ ನಿಮಿಷಗಳಿದ್ದಾಗ ಪ್ರಧಾನಿ ಮೋದಿ ಕಾಣಿಸಿಕೊಂಡರು. ರಾಜಕೀಯ ಮಾರ್ಕೆಟ್ ಮಾಡಿಕೊಳ್ಳಲು ಮೋದಿ ಹವಣಿಸಿದ್ದು ದೇಶದ ಜನ ನೋಡಿದ್ದಾರೆಂದು ಕೆಪಿಸಿಸಿ ರಾಜ್ಯ ವಕ್ತಾರ ಡಿ. ಬಸವರಾಜ್ ಮೋದಿ ಅವರನ್ನು ತೀವ್ರವಾಗಿ ಟೀಕಿಸಿದ್ದಾರೆ.

ಚಂದ್ರಯಾನ ಮೂರರ ಯಶಸ್ವಿಯ ಲಾಭ ಕೀರ್ತಿ ಎಲ್ಲವೂ ಇಸ್ರೋ ಅಧ್ಯಕ್ಷ ಎಸ್. ಸೋಮನಾಥ್ ಹಾಗೂ ಅವರ ಅಸಂಖ್ಯಾತ ವಿಜ್ಞಾನಿಗಳ ತಂಡಕ್ಕೆ ಸಲ್ಲಬೇಕು.



ಇದರಲ್ಲಿ ಪ್ರಧಾನಿ ತಮ್ಮ ರಾಜಕೀಯ ಬೆಳೆ ಬೇಯಿಸಿಕೊಳ್ಳಲು ದೇಶದ ಜನ ಅವಕಾಶ ನೀಡಲ್ಲವೆಂದು ಅವರು ಕಟುವಾಗಿ ಟೀಕಿಸಿದ್ದಾರೆ.

ದೇಶದ ವಿಜ್ಞಾನಿಗಳ ಪರಿಶ್ರಮದ ಫಲವಾಗಿರುವ ಚಂದ್ರಯಾನದ ಯಶಸ್ಸಿನಲಾಭ ತೆಗೆದುಕೊಳ್ಳಲು ಮುಂದಾಗಿರುವ ಪ್ರಧಾನಿ ಮೋದಿ ಮತ್ತು ಕೇಂದ್ರ ಸರ್ಕಾರ ಬಾಹ್ಯಾಕಾಶ ಸಂಶೋಧನೆಗೆ ಬಜೆಟ್ ನಲ್ಲಿ ಶೇ. 8 ರಷ್ಟು ಅನುದಾನವನ್ನು ಕಡಿತಗೊಳಿಸಿದ್ದಾರೆ. ಚಂದ್ರಯಾನ ಮೂರರ ಅನುದಾನದಲ್ಲಿ ಶೇಕಡ 38 ರಷ್ಟು ಕಡಿತಗೊಳಿಸಿದ್ದಾರೆ. ಬಾಹ್ಯಾಕಾಶ ವಿಜ್ಞಾನಿಗಳಿಗೆ ಬೇರೆ ದೇಶಗಳಿಗೆ ಹೋಲಿಸಿದರೆ ಐದನೇ ಒಂದು ಭಾಗದಷ್ಟು ಮಾತ್ರ ವೇತನ ನೀಡಲಾಗುತ್ತಿದೆ ಎಂದು ಇಸ್ರೋ ಮಾಜಿ ಅಧ್ಯಕ್ಷರಾದ ಮಾಧವನ್ ರವರು ಹೇಳಿದ್ದಾರೆ. ಸಂಶೋಧನೆಗಳಿಗೆ, ವಿಜ್ಞಾನಿಗಳಿಗೆ ಎಂದೂ ಪ್ರೋತ್ಸಾಹ ನೀಡದ ಪ್ರಧಾನಿ ಮೋದಿಗೆ ಚಂದ್ರಯಾನದ ಯಶಸ್ಸಿನ ಕ್ರೆಡಿಟ್ ಪಡೆಯಲು ಯಾವುದೇ ನೈತಿಕ ಹಕ್ಕು ಇಲ್ಲವೆಂದು ಬಸವರಾಜ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.



## ಸ್ನೇಹಿತರ ಬಳಗದಿಂದ ಸಂಭ್ರಮಾಚರಣೆ

ದಾವಣಗೆರೆ, ಆ. 25- ಚಂದ್ರನ ಮೇಲೆ ಭಾರತದ ತ್ರಿವಿಕ್ರಮ ಸಾಧನೆಯ ಯಶಸ್ಸಿನ ಸಂಭ್ರಮವನ್ನು ಪತ್ರಿಕಾ ವಿತರಕರ ಸಂಘದ ಅಧ್ಯಕ್ಷ ಚಂದ್ರು ಅವರ ಅಧ್ಯಕ್ಷತೆಯಲ್ಲಿ ನಗರದ ಹಳೇ ಬಸ್ ನಿಲ್ದಾಣದ ಮುಂಭಾಗದಲ್ಲಿ ರಮೇಶ್ ಕಾಫಿ ಬಾರ್‌ನ ಸ್ನೇಹಿತರು ಸಂಭ್ರಮ ಆಚರಿಸಿದರು.

## ನಗರದ ಪಂಚ ದೇವಸ್ಥಾನದಲ್ಲಿ ಇಂದು ಪುರಾಣ

ಪಿ.ಬಿ. ರಸ್ತೆಯಲ್ಲಿರುವ ಪಂಚ ದೇವಸ್ಥಾನಗಳ ಮಹಾ ಕ್ಷೇತ್ರದಲ್ಲಿ ಶ್ರಾವಣ ಮಾಸದ ಪ್ರಯುಕ್ತ ಒಂದು ತಿಂಗಳ ಕಾಲ ವಿಶೇಷ ಪೂಜೆ, ಅಭಿಷೇಕ ನಡೆಯಲಿದ್ದು, ಇಂದು ಬೆಳಿಗ್ಗೆ 8.30 ರಿಂದ ಶ್ರೀ ಶನೇಶ್ವರ ಮಹಾಸ್ವಾಮಿಯ ಪುರಾಣ ನಡೆಯಿದೆ. ಇಂದು ಪ್ರಾತಃಕಾಲ ಪಂಚ ದೇವರುಗಳಿಗೆ ಹಾಗೂ ಶ್ರೀ ಕಾಶಿ ವಿಶ್ವನಾಥ ಲಿಂಗಕ್ಕೆ ನವಗ್ರಹ ಮೂರ್ತಿಗಳಿಗೆ ವಿಶೇಷ ಪೂಜೆ, ಅಲಂಕಾರ, ಅಭಿಷೇಕ, ತೀರ್ಥ-ಪ್ರಸಾದ ವಿನಿಯೋಗ ನಡೆಯುವುದು.

## ಎಲೆಬೇತೂರಿನಲ್ಲಿ ಇಂದು ಪರವು

ದಾವಣಗೆರೆ ಎಲೆಬೇತೂರು ಗ್ರಾಮದ ಶ್ರೀ ಬಂಡೆ ರಂಗಪ್ಪ ಸ್ವಾಮಿಯ ಶ್ರಾವಣ ಮಾಸದ ಪರವು ಕಾರ್ಯಕ್ರಮ ಇಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ. ಭಕ್ತಾದಿ ಗಳು ಬೆಳಿಗ್ಗೆ 10.30 ಕ್ಕೆ ಶ್ರೀ ಸವಗದ್ದಿಗೆ ಸಂಗಮೇಶ್ವರ ದೇವಸ್ಥಾನಕ್ಕೆ ಬಂದು ಸವಗದ್ದಿಗೆ ಸಂಗಮೇಶ್ವರ ಸ್ವಾಮಿಗೆ ಪೂಜೆ ಸಲ್ಲಿಸಿ, ಬಾಜಾ ಭಜಂತ್ರಿಯೊಂದಿಗೆ ಮೆರವಣಿಗೆ ಮೂಲಕ ಪುಟಗನಾಳು ರಸ್ತೆಯಲ್ಲಿರುವ ಶ್ರೀ ಬಂಡೆ ರಂಗಪ್ಪ ದೇವಸ್ಥಾನಕ್ಕೆ ಹೊರಡುವುದು.


# ನಗರದಲ್ಲಿ ನಾಳೆ 'ನೀನಿಲ್ಲದೆ ಮತ್ತಾರೂ ಇಲ್ಲವಯ್ಯಾ' ವಚನ ನೃತ್ಯ ರೂಪಕ ಪ್ರದರ್ಶನ



ದಾವಣಗೆರೆ, ಆ. 25- ಶ್ರೀ ಶಿವಕುಮಾರ ಕಲಾಸಂಘ ಸಾಣೇಹಳ್ಳಿ ಹಾಗೂ ನಗರದ ಸಮಸ್ತ ಭಕ್ತ ವೃಂದ ಇವರ ಸಹಯೋಗದಲ್ಲಿ ಭಾರತದ ಪ್ರಥಮ ವಚನ ಸಂಸ್ಕೃತಿ ಅಭಿಯಾನ ' ನೀನಲ್ಲದೆ ಮತ್ತಾರೂ ಇಲ್ಲವಯ್ಯಾ'(ತುಮ್ಹಾರೆ ಸಿವಾ ಔರ್ ಕೋಯಿ ನಹೀ) ಬಸವಣ್ಣನವರ ಆಯ್ದ 44 ವಚನಗಳ ಆಧಾರಿತ ವಚನ ನೃತ್ಯ ರೂಪಕ ಪ್ರದರ್ಶನ ಹಾಗೂ ಗುರುವಂದನೆ ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ 27 ರ ಭಾನುವಾರ ಸಂಜೆ 6 ಗಂಟೆಗೆ ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿನ ಎಸ್.ಎಸ್. ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ ಅವರು ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಮುಖ್ಯ ಅತಿಥಿಗಳಾಗಿ ಶಾಸಕ ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್, ಶಾಸಕ ದೇವೇಂದ್ರಪ್ಪ, ಉದ್ಯಮಿ ಎಸ್.ಎಸ್. ಗಣೇಶ, ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ, ಬೆಂಗಳೂರಿನ ರಂಗ ಸಂಘಟಕ ಶ್ರೀನಿವಾಸ ಜಿ. ಕಪ್ಪಣ್ಣ, ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್, ಸಹಕಾರಿ ಧುರೀಣ ಜೆ.ಆರ್. ಷಣ್ಮುಖಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಿ. ರವಿಚಂದ್ರ ಭಾಗವಹಿಸಲಿದ್ದಾರೆ ಎಂದು ರಾಜಣ್ಣ ಮಾಹಿತಿ ನೀಡಿದರು.

ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಾರ್ಗದರ್ಶನದಲ್ಲಿ ಜುಲೈ 2 ರಂದು ಬೆಂಗಳೂರಿನಲ್ಲಿ ಉದ್ಘಾಟನೆಗೊಂಡು 14 ರಾಜ್ಯಗಳಲ್ಲಿ 47 ಪ್ರದರ್ಶನಗಳನ್ನು ನೀಡಿದೆ. ಶಿವಸಂಚಾರ ಬಸ್‌ನಲ್ಲಿ 11 ಸಾವಿರ ಕಿ. ಮೀ. ಕ್ರಮಿಸಿದ್ದು, ಇದೇ ದಿನಾಂಕ 27 ರಂದು ದಾವಣಗೆರೆಗೆ ವಚನ ಸಂಸ್ಕೃತಿ ಅಭಿಯಾನದ ತಂಡ ಆಗಮಿಸಲಿದೆ ಎಂದು ತಿಳಿಸಿದರು.



**ದಾವಣಗೆರೆ ಭಕ್ತ ವೃಂದದಿಂದ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರಿಗೆ ಗುರುವಂದನೆ**

ಸೆಪ್ಟೆಂಬರ್ 2 ರಂದು ಸಾಣೇಹಳ್ಳಿಯಲ್ಲಿ ಅಭಿಯಾನ ಸಮಾರೋಪಗೊಳ್ಳಲಿದೆ. ವಚನ ನೃತ್ಯ ರೂಪಕ ಪ್ರದರ್ಶನದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಶಂಸೆಯ ಪತ್ರ ಬರೆದಿರುವುದೇ ವಚನ ಸಂಸ್ಕೃತಿ ಅಭಿಯಾನದ ಹೆಗ್ಗಳಿಕೆಗೆ ಹಿಡಿದ ಕನ್ನಡಿಯಾಗಿದೆ ಎಂದರು.

ಇದೊಂದು ದುಸ್ಸಾಹಸದ ಯಾತ್ರೆಯಾಗಿದ್ದು, ಯಶಸ್ವಿಯಾಗಲು ಶ್ರೀನಿವಾಸ ಜಿ.ಕಪ್ಪಣ್ಣ, ಸ್ನೇಹಾ ಕಪ್ಪಣ್ಣ, ವೈ.ಡಿ. ಬದಾಮಿ ಸೇರಿದಂತೆ 24 ಕಲಾವಿದರು ಮತ್ತು ತಂತ್ರಜ್ಞರು, ಸಂಘಟಕರೂ ಸೇರಿದಂತೆ ನೂರಾರು ಜನರು ಅಹರ್ನಿಶಿ ಶ್ರಮಿಸಿದ್ದಾರೆ. ಇವರಿಗೆ ಪ್ರೇರಕ ಶಕ್ತಿಯಾಗಿ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ನಿಂತಿದ್ದಾರೆ. ಶ್ರೀಗಳನ್ನು ಅಭಿನಂದಿಸುವ ಸಲುವಾಗಿ ದಾವಣಗೆರೆಯ ಸಮಸ್ತ ಭಕ್ತವೃಂದ ಅಪೇಕ್ಷಿಸಿದೆ ಎಂದು ಹೇಳಿದರು.

ಮತ್ತೆ ಕಲ್ಯಾಣ ರಾಜ್ಯವನ್ನಾಗಿ ಮಾಡುವುದೇ ಈ ಅಭಿಯಾನದ ಉದ್ದೇಶವಾಗಿದೆ. ಸಮಾಜ ತಿದ್ದುವ ಪ್ರಯತ್ನವನ್ನು ಈ ಕಾರ್ಯಕ್ರಮದ ಮೂಲಕ ಮಾಡಲಾಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬಾಪೂಜಿ ವಿದ್ಯಾಸಂಸ್ಥೆ ಶೈಕ್ಷಣಿಕ ನಿರ್ದೇಶಕ ಡಾ. ಎಂ.ಜಿ. ಈಶ್ವರಪ್ಪ, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ, ಜಿ.ಪಂ. ಮಾಜಿ ಸದಸ್ಯ ಶಾಮನೂರು ಬಸವರಾಜ್, ಐಗೂರು ಸಿ. ಚಂದ್ರಶೇಖರ್, ಬಿ.ಕೆ. ಬಸವಲಿಂಗಪ್ಪ, ಪಲ್ಲಾಗಟ್ಟೆ ನಾಗರಾಜ್ ಮತ್ತಿತರರು ಇದ್ದರು.

# ಸಹಕಾರ ಸಂಘಗಳ ಲಾಭಾಂಶಕ್ಕಿಂತ ಗ್ರಾಹಕರ ಹಿತ ಮುಖ್ಯ

**ಮಲೇಬೆನ್ನೂರಿನ ಶಿವ ಸಹಕಾರ ಸಂಘದಲ್ಲಿ ಡಿ. ಯೋಮಕೇಶ್ವರಪ್ಪ ಅಭಿಮತ**



ಮಲೇಬೆನ್ನೂರು, ಆ.25- ಸಹಕಾರ ಸಂಘಗಳು ಪ್ರಗತಿ ಸಾಧಿಸಿದರೆ ಸಾಲದು. ಸಹಕಾರ ಸಂಘಗಳಿಂದ ಸಾಲ ಪಡೆದ ಜನರೂ ಸಹ ಪ್ರಗತಿ ಸಾಧಿಸಬೇಕೆಂದು ಹರಿಹರದ ವಿಶ್ವ ಬಂಧು ಸೊಸೈಟಿಯ ನೂತನ ಅಧ್ಯಕ್ಷ ಯಲವಟ್ಟಿಯ ಡಿ. ಯೋಮಕೇಶ್ವರಪ್ಪ ಹೇಳಿದರು.

ಅವರು ಗುರುವಾರ ಇಲ್ಲಿನ ಶಿವ ವಿವಿಧೋದ್ದೇಶ ಸಹಕಾರ ಸಂಘದಲ್ಲಿ ಹಮ್ಮಿಕೊಂಡಿದ್ದ ಸಂಘದ ಮಾಸಿಕ ಸಭೆಯಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಈ ವೇಳೆ ಹೊಳೆಸಿರಿಗೆರೆ ಗ್ರಾ.ಪಂ. ನೂತನ ಅಧ್ಯಕ್ಷ ಬಿ. ಶೇಖರಪ್ಪ ಮತ್ತು ಕುಂಬಳೂರು ಪಿಎಸಿಎಸ್ ನೂತನ ನಿರ್ದೇಶಕ ಎಸ್. ಮಂಜಪ್ಪ ಅವರನ್ನೂ ಸಂಘದಿಂದ ಸನ್ಮಾನಿಸಲಾಯಿತು.

ಸಂಘದ ಅಧ್ಯಕ್ಷ ಡಾ. ಬಿ. ಚಂದ್ರಶೇಖರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂಘದ ಈ ವರ್ಷದ ವಾರ್ಷಿಕ ಮಹಾಸಭೆಯನ್ನು ಸೆ. 22 ರಂದು ಹಮ್ಮಿಕೊಳ್ಳಲಾಗಿದೆ ಎಂದರು.

ಸಂಘದ ಹಿರಿಯ ನಿರ್ದೇಶಕ ಬಣಕಾರ್ ವಿರೂಪಾಕ್ಷಪ್ಪ ಮಾತನಾಡಿ, ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡಿದವರಿಗೆ ಸಾಕಷ್ಟು ಅವಕಾಶಗಳು ಸಿಗಲಿವೆ ಎಂದರು.

ಸಂಘದ ಉಪಾಧ್ಯಕ್ಷ ಯಲವಟ್ಟಿ ಆಂಜನೇಯ, ನಿರ್ದೇಶಕರಾದ ಮಲೇಬೆನ್ನೂರಿನ ಹೆಚ್.ಜಿ. ಚಂದ್ರಶೇಖರ್, ಕೆ.ಜಿ. ರಂಗನಾಥ್, ಶ್ರೀಮತಿ ಸರೋಜಮ್ಮ ಭರಮಗೌಡ, ಬೆಳ್ಳೂಡಿಯ ಗೌಡ್ರ ರವಿಶಂಕರ್, ಜಿಗಳಿ ಪ್ರಕಾಶ್, ನಿಟ್ಟೂರಿನ ಶ್ರೀಮತಿ ನಾಗರತ್ನ ಬಿ.ಜಿ. ಧನಂಜಯ, ಕುಂಬಳೂರಿನ ಹಲ್ಲುಮನಿ ಷಣ್ಮುಖಪ್ಪ, ಬೆಳ್ಳೂಡಿಯ ಎ. ದೇವೇಂದ್ರಪ್ಪ, ಮಲೇಬೆನ್ನೂರಿನ ಎಸ್. ಸಿದ್ದೇಶ್ ಮತ್ತು ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಪ್ರಸನ್ನ ಬಣಕಾರ್, ಕುಂಬಳೂರು ವಾಸು, ಸಂಘದ ಕಾರ್ಯದರ್ಶಿ ನಳಿನ ಹಾಗೂ ಇತರರು ಈ ವೇಳೆ ಹಾಜರಿದ್ದರು.

# ಹಡಗಲಿ : ಜಿ.ಪಂ. ಎ.ಇ.ಇ. ಮಹೇಶಪ್ಪ ಅಧಿಕಾರ ಸ್ವೀಕಾರ



ಹೂವಿನಹಡಗಲಿ, ಆ. 25 - ಇಲ್ಲಿನ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದ ಸಹಾಯಕ ಕಾರ್ಯ ಪಾಲಕ ಅಭಿಯಂತರಾಗಿ ಎನ್. ಮಹೇಶಪ್ಪ ಅಧಿಕಾರ ಸ್ವೀಕರಿಸಿದ್ದಾರೆ. ಪ್ರಭಾರಿ ಎ.ಇ.ಇ. ಯಾಗಿದ್ದ ಎನ್. ನಾಗಪ್ಪ ಇವರು ಹರಪನಹಳ್ಳಿ ಉಪವಿಭಾಗಕ್ಕೆ ಮರಳಿದ್ದಾರೆ. ಎನ್. ಮಹೇಶಪ್ಪ ಅವರು ಈವರೆಗೂ ಲೋಕೋಪಯೋಗಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು.

# ನಗರದಲ್ಲಿ ಇಂದು 'ಆರೂಢ ದಾಸೋಹಿ ಶರಣ ಮಾಗನೂರು ಬಸಪ್ಪ' ಪ್ರಶಸ್ತಿ ಪ್ರದಾನ

ದಾವಣಗೆರೆ, ಆ. 25- ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಶರಣ ಮಾಗನೂರು ಬಸಪ್ಪ ಪ್ರತಿಷ್ಠಾನ ಸ್ಥಾಪಿತ ರಾಜ್ಯಮಟ್ಟದ 'ಆರೂಢ ದಾಸೋಹಿ ಶರಣ ಮಾಗನೂರು ಬಸಪ್ಪ' ಪ್ರಶಸ್ತಿ ಪ್ರದಾನ ಸಮಾರಂಭವು ನಾಳೆ ದಿನಾಂಕ 26ರ ಶನಿವಾರ ಕುವೆಂಪು ಕನ್ನಡ ಭವನದಲ್ಲಿ ನಡಯಲಿದೆ.

2022ನೇ ಸಾಲಿನ ಪ್ರಶಸ್ತಿಗೆ ಮಾಜಿ ಸಚಿವರು ಹಾಗೂ ಸಾಹಿತಿ ಡಾ.ಬಿ.ಟಿ. ಲಲಿತಾ ನಾಯ್ಕ್ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು 50 ಸಾವಿರ ರೂ. ನಗದು, ಫಲಕ, ಸನ್ಮಾನ ಪತ್ರ ಒಳಗೊಂಡಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸಮಾರಂಭದ ಸಾನ್ನಿಧ್ಯ ಹಾಗೂ ಉದ್ಘಾಟನೆಯನ್ನು ಚಿಕ್ಕಮಗಳೂರು ಶ್ರೀ ಬಸವತತ್ವ ಪೀಠದ ಡಾ.ಶ್ರೀ ಬಸವ ಮರುಳಸಿದ್ಧ ಸ್ವಾಮೀಜಿ ನೆರವೇರಿಸಲಿದ್ದಾರೆ.

ಶರಣ ಮಾಗನೂರು ಬಸಪ್ಪ ಪ್ರತಿಷ್ಠಾನದ ಅಧ್ಯಕ್ಷ ಎಂ.ಬಿ. ಸಂಗಮೇಶ್ವರ ಗೌಡ್ರು ಅಧ್ಯಕ್ಷತೆ ವಹಿಸಲಿದ್ದಾರೆ. ಕಸಾಪ ನಿಕಟಪೂರ್ವ ಅಧ್ಯಕ್ಷ ನಾಡೋಜ ಡಾ.ಮನು ಬಳಿಗಾರ್ ಪ್ರಶಸ್ತಿ ಪ್ರದಾನ ಮಾಡಿ ಅಭಿನಂದನಾ ನುಡಿಗಳನ್ನಾಡಲಿದ್ದಾರೆ. ಡಾ.ಹೆಚ್.ಹೆಸ್. ಮಂಜುನಾಥ ಕುರ್ಕಿ ಶರಣ ಮಾಗನೂರು ಬಸಪ್ಪನವರ ವ್ಯಕ್ತಿತ್ವ ಕುರಿತು ಮಾತನಾಡಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಬಿ.ದಿಳ್ಳೆಪ್ಪ, ಎನ್‌.ಟಿ. ಯರ್ರಿ ಸ್ವಾಮಿ, ಎಸ್.ಆರ್. ಶಿರಗುಂಬಿ, ಮಂಜುನಾಥ್ ಉಪಸ್ಥಿತರಿದ್ದರು.

# ಯೋಗಾಸನ ಕ್ರೀಡಾ ಸಂಸ್ಥೆ ರಾಜ್ಯ ಸಂಘಟನಾ ನಿರ್ದೇಶಕರಾಗಿ ಎನ್.ಪರಶುರಾಮ್



ದಾವಣಗೆರೆ, ಆ.25- ಕರ್ನಾಟಕ ಯೋಗಾಸನ ಕ್ರೀಡಾ ಸಂಸ್ಥೆಯು ರಾಜ್ಯ ವಿಭಾಗ ಮಟ್ಟದ ಯೋಗಾಸನ ಸ್ಪರ್ಧೆಗೆ ರಾಜ್ಯ ಸಂಘಟನಾ ನಿರ್ದೇಶಕರನ್ನಾಗಿ ಯೋಗಾಚಾರ್ಯ ಎನ್. ಪರಶುರಾಮ್ ಅವರನ್ನು ಆಯ್ಕೆ ಮಾಡಿದೆ.

ಬೆಂಗಳೂರಿನ ಗ್ರಾಮಾಂತರ ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿನ ವಿವಿಧ ಶಾಲಾ-ಕಾಲೇಜ್‌ನ ಯೋಗ ಸ್ಪರ್ಧಿಗಳು ನಾಡಿದ್ದು ದಿನಾಂಕ 27ರಂದು ಬೆಂಗಳೂರಿನ ದೇವನಹಳ್ಳಿಯ ಸರ್ಕಾರಿ ಪದವಿಪೂರ್ವ ಕಾಲೇಜ್ ಆವರಣದಲ್ಲಿ ನಡೆಯುವ ಜಿಲ್ಲಾವಾರು ವಿಭಾಗ ಮಟ್ಟದ ಯೋಗಾಸನ ಸ್ಪರ್ಧೆಯ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಎನ್. ಪರಶುರಾಮ್ ಕೋರಿದ್ದಾರೆ.

# ಕಾಂ. ಪಂಪಾಪತಿ : ಸಚಿವ ಎಸ್ಸೆಸ್ಸೆಂ ಅವರಲ್ಲಿ ಒಂದು ಮನವಿ


**ಮಾನ್ಯರೇ,**

ಪುನರ್ ನಿರ್ಮಾಣಗೊಳ್ಳುತ್ತಿರುವ ನಗರದ ಸರ್ಕಾರಿ ಬಸ್ ನಿಲ್ದಾಣಕ್ಕೆ ಇತ್ತೀಚೆಗೆ ಭೇಟಿ ಕೊಟ್ಟ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ದಿ. ಕಾಂ. ಪಂಪಾಪತಿಯವರನ್ನು ನೆನಪಿಸಿಕೊಂಡಿದ್ದು ಶ್ಲಾಘನೀಯ.

ನಾವು ಕಂಡಂತೆ ಅಧಿಕಾರಸ್ಥ ರಾಜಕಾರಣಿಗಳು ಹಿಂದಿನವರ ಸಾಧನೆಗಳನ್ನು ನೆನಪಿಸಿಕೊಳ್ಳುವುದು ದುಸ್ತರವಾದ ಇಂದಿನ ದಿನಗಳಲ್ಲಿ ಮಲ್ಲಿಕಾರ್ಜುನ್ ಅವರು, ಇದೇ ಬಸ್ ನಿಲ್ದಾಣಕ್ಕಾಗಿ ಪಂಪಾಪತಿ ಮಾಡಿದ ಹೋರಾಟವನ್ನು ಮತ್ತು ಆಗ ತಾವು ಬಾಲಕರಾಗಿದ್ದ ಸಂದರ್ಭವನ್ನು ಮೆಲುಕು ಹಾಕಿದ್ದು, ತಮಗಿಂತ ಹಿರಿಯರು ಮತ್ತು ಅವರ ಸಾಧನೆಗಳ ಬಗ್ಗೆ ಇಟ್ಟಿರುವ ಗೌರವ ಭಾವನೆಗಳನ್ನು ಎತ್ತಿ ತೋರಿಸುತ್ತದೆ.

ದಾವಣಗೆರೆ ಕಂಡ ಅಪರೂಪದ ರಾಜಕಾರಣಿ ಮತ್ತು ಹೋರಾಟಗಾರ ದಿ. ಪಂಪಾಪತಿಯವರು ಈ ನಗರ ಮತ್ತು ರಾಜ್ಯದ ಬಡವರ ಹಾಗು ಶ್ರಮಿಕರ ಬೆವರಿಗೆ ಬೆಲೆ ತಂದುಕೊಟ್ಟ ನಾಯಕ. 1974ರಿಂದ 1978 ರವರೆಗೆ ದಾವಣಗೆರೆಯ ನಗರ ಸಭೆಯ ಅಧ್ಯಕ್ಷರಾಗಿ, 1978 ರಿಂದ 1989 ರ ತನಕ ಸತತ ಶಾಸಕರಾಗಿ ದಾವಣಗೆರೆಯ ಅಭಿವೃದ್ಧಿಗಾಗಿ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡಿದ್ದನ್ನು ಮರೆಯಲಾಗದು.

ಈಗಿನ ಯುವ ಪೀಳಿಗೆಗೆ ಪಂಪಾಪತಿಯವರ ಅಥವಾ 70-80 ರ ದಶಕದ ದಾವಣಗೆರೆಯ ಚಾರಿತ್ರಿಕ ಘಟನೆಗಳ ಕುರಿತು ಅರಿವಿಲ್ಲದಿರಬಹುದು, ಮಂತ್ರಿಯಾಗಿದ್ದರೂ ತಮ್ಮ ತಂದೆಯ ಆಗಿನ ರಾಜಕಾರಣದ ಸಾಮೀಪ್ಯ ಹೊಂದಿದ್ದ ಪಂಪಾಪತಿಯವರ ಬಗ್ಗೆ ಮಂತ್ರಿ ಮಲ್ಲಣ್ಣ





ತಮ್ಮ ಹೃದಯದಲ್ಲಿ ಗೌರವ ಸ್ಥಾನವನ್ನು ಇಟ್ಟು ಕೊಂಡಿರುವುದು ಹೆಮ್ಮೆ ಪಡುವ ವಿಚಾರವಾಗಿದೆ.

**ನೆನಪಿನಂಗಳದಿಂದ ಹೇಳಬೇಕೆಂದರೆ;** ಜುಲೈ ಮುವತ್ತೊಂದು 2002 ರ ದಿನ, ಅಂದು ಬದುಕಿನುದ್ದಕ್ಕೂ ಈ ದಾವಣಗೆರೆ ಮತ್ತು ರಾಜ್ಯದ ಶ್ರಮಿಕರ ಹೋರಾಟಗಳನ್ನು ಕಟ್ಟಿ ಬೆಳೆಸಿದ ಕಾಮ್ರೇಡ್ ಪಂಪಾಪತಿ ತಮ್ಮ ಬದುಕಿನ ಹೋರಾಟವನ್ನು ನಿಲ್ಲಿಸಿ ಜಗತ್ತಿಗೇ ವಿದಾಯ ಹೇಳಿದರು. ಮಾರನೆ ದಿನ ಅವರ ಅಂತಿಮ ಯಾತ್ರೆ ದಾವಣಗೆರೆಯ ಅವರ ನಿವಾಸದಿಂದ ಆವರಗೆರೆಯ ತನಕ ಮಂತ್ರಿಯೂ ಆಗಿದ್ದ ಮಲ್ಲಿಕಾರ್ಜುನ್ ಶವಸಂಸ್ಕಾರದ ತನಕ ಯಾತ್ರೆಯನ್ನು ಕಾಲ್ನಡಿಗೆಯಲ್ಲಿಯೇ ಬಂದು ಸಾಮಾನ್ಯರಂತೆ ಭಾಗವಹಿಸಿದ್ದು ಮರೆಯಲಾಗದ ಕ್ಷಣಗಳು.

ಇದೇ ಸಂದರ್ಭದಲ್ಲಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್‌ರವರಲ್ಲಿ ಬಹುತೇಕರ ಆಶಯದಂತೆ ನನ್ನದೊಂದು ಮನವಿ. ದಾವಣಗೆರೆ ನಗರದ ಅಭಿವೃದ್ಧಿಗಾಗಿ ಹಗಲಿರುಳೂ ಶ್ರಮಿಸಿದ, ದುಡಿಯುವ ಜನರ ಹಕ್ಕುಗಳಿಗಾಗಿ ಜೀವವನ್ನೇ ಮುಡಿಪಾಗಿಟ್ಟಿದ್ದ ಮತ್ತು ತಮ್ಮ ನಗರಾಧ್ಯಕ್ಷ ಅವಧಿಯಲ್ಲಿ ಸಹಸ್ರಾರು ಬಡವರಿಗೆ ನಿಮ್ಮಂತೆಯೇ ಸೂರು ಒದಗಿಸುವ ಕಾರ್ಯ ಮಾಡಿದ ಪಂಪಾಪತಿ, ತಮ್ಮ ಅಷ್ಟು ವರ್ಷಗಳ ಅಧಿಕಾರವಧಿಯಲ್ಲಿ ಕನಿಷ್ಠ ಒಂದು ಬೀದಿಗಾದರೂ ತಮ್ಮ ಹೆಸರು ಇರುವಂತೆ ಬಯಸಲಿಲ್ಲ! ಈಗ ತಾವೇ ನೆನಪಿಸಿಕೊಂಡಂತೆ ದಾವಣಗೆರೆಯ ಸರ್ಕಾರಿ ಬಸ್ ನಿಲ್ದಾಣಕ್ಕಾಗಿ ಅವರ ಹೋರಾಟ ಮತ್ತು ದಾವಣಗೆರೆ ನಗರ ಸಾರಿಗೆ ವ್ಯವಸ್ಥೆಗಾಗಿಯೂ ಅವರು ಮಾಡಿದ ಅಮರಣಾಂತ ಉಪವಾಸ ಸತ್ಯಾಗ್ರಹಗಳನ್ನು ಬಹಳಷ್ಟು ಜನ ಮರೆತಿದ್ದರೂ ತಾವು ಮರೆತಿರಲಿಕ್ಕಿಲ್ಲ. ದಿ.ಪಂಪಾಪತಿಯವರ ಹೋರಾಟಗಳ ದಿನಗಳು ಅವರು ಮಾಡಿದ ಸೇವೆಯನ್ನು ಸಂಪೂರ್ಣ ಮರೆಯಾಗುವ ಮುನ್ನ ಪುನರ್ ನಿರ್ಮಾಣಗೊಳ್ಳುತ್ತಿರುವ ದಾವಣಗೆರೆಯ ಸರ್ಕಾರಿ ಬಸ್ ನಿಲ್ದಾಣಕ್ಕೆ ದಿ.ಪಂಪಾಪತಿಯವರ ಹೆಸರಿಡಲು ತಮ್ಮ ಪ್ರಯತ್ನ ಅತ್ಯಗತ್ಯ. ನಿಲ್ದಾಣಕ್ಕೆ ಅವರ ನಾಮಕರಣ ಮಾಡಿಸಿ ಸದಾ ನೆನಪಿಡುವಂತೆ ಆಗ್ರಹಿಸುವೆ.

**- ಇಮ್ತಿಯಾಜ್ ಹುಸೇನ್,**
ದಾವಣಗೆರೆ.




## ಕಾಣೆಯಾಗಿದ್ದಾರೆ

ದಾವಣಗೆರೆಯ ಜಾಲಿನಗರ, 2ನೇ ಮೇನ್, 1ನೇ ಕ್ರಾಸ್ ವಾಸಿ ಯಶೋಧಮ್ಮ ಇವರ ಮಗನಾದ **ನಾಗರಾಜ ಹೆಚ್.** ಅವರು ದಿನಾಂಕ 21.08.2023 ರ ಸೋಮವಾರ ಸಾಯಂಕಾಲದಿಂದ ಮನೆಯಿಂದ ಹೊರಗೆ ಹೋದವರು ವಾಪಸ್ ಬಂದಿರುವುದಿಲ್ಲ. ಇವರು ಮಾನಸಿಕವಾಗಿ ಅಸ್ವಸ್ಥರಾಗಿದ್ದು ಕನ್ನಡ ಭಾಷೆ ಮಾತನಾಡುತ್ತಾರೆ. ಇವರು ಬಿಳಿ ಬಣ್ಣದ ತುಂಬು ತೋಳಿನ ಅಂಗಿ ಮತ್ತು ನೀಲಿ ಬಣ್ಣದ ಚೌಕಳಿ ಲುಂಗಿಯನ್ನು ಧರಿಸಿರುತ್ತಾರೆ. ಇವರನ್ನು ಯಾರಾದರೂ ನೋಡಿದಲ್ಲಿ ಹತ್ತಿರದ ಪೊಲೀಸ್ ಠಾಣೆಗೆ ಅಥವಾ ಈ ಕೆಳಗಿನ ಮೊಬೈಲ್ ನಂಬರಿಗೆ ತಿಳಿಸಬೇಕಾಗಿ ವಿನಂತಿ.

**ಮೊ.ನಂ: 98443 21371, 90665 33120**


# ಚಂದ್ರಯಾನ-3 ಯೋಜನೆಯಲ್ಲಿ ತರಳಬಾಳು ವಿದ್ಯಾಸಂಸ್ಥೆಯ ವಿದ್ಯಾರ್ಥಿ ಗೋವಿಂದರಾಜ್ ಶೆಟ್ಟಿ

ಸಿರಿಗೆರೆ, ಆ.25- 'ಚಂದ್ರಯಾನ-3' ಯಶಸ್ವೀ ಯಾತ್ರೆ ಇಡೀ ಜಗತ್ತೇ ಭಾರತದ ಕಡೆಗೆ ನಿಬ್ಬೆರಗಾಗಿ ನೋಡುವಂತೆ ಮಾಡಿದೆ. ಈ ಯಶಸ್ಸಿನ ಹಿಂದೆ ಅನೇಕ ತಂತ್ರಜ್ಞರ ಕಾರ್ಯಕ್ಷಮತೆ ಮೆಚ್ಚುವಂತಹದ್ದು. ಈ ತಂತ್ರಜ್ಞರ ಸಾಲಿನಲ್ಲಿರುವ ವಿಜ್ಞಾನಿ ಗೋವಿಂದ ರಾಜ್ ಶೆಟ್ಟಿ ಅವರು ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಹೆಮ್ಮೆಯ ವಿದ್ಯಾರ್ಥಿ.

ಚಂದ್ರಯಾನ-3 ಮಿಷನ್‌ನ ವಿನ್ಯಾಸ, ಅಭಿವೃದ್ಧಿ, ಪರೀಕ್ಷೆ ಮತ್ತು ಆವಿಷ್ಕಾರದಲ್ಲಿ ಪ್ರಮುಖ ಪಾತ್ರ ವಹಿಸಿದ ಗೋವಿಂದ ರಾಜ್ ಶೆಟ್ಟಿ ಬೆಂಗಳೂರಿನ ಇಸ್ರೋ ಕೇಂದ್ರದಲ್ಲಿ ತಾಂತ್ರಿಕ ವ್ಯವಸ್ಥೆಯ ವಿಭಾಗದಲ್ಲಿ ತಾಂತ್ರಿಕ ವಿನ್ಯಾಸ ಘಟಕದ ಹಿರಿಯ ವಿಜ್ಞಾನಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕೊಟ್ಟೂರು ತಾಲ್ಲೂಕಿನ ತೂಲಹಳ್ಳಿ ಗ್ರಾಮದ ಸುಬ್ಬಣ್ಣ ಶೆಟ್ಟಿಯವರ ಸುಪುತ್ರ ಗೋವಿಂದ ರಾಜ ಶೆಟ್ಟಿಯವರು ಪ್ರೌಢಶಾಲಾ ಶಿಕ್ಷಣವನ್ನು ಪಡೆದದ್ದು ಇದೇ ಗ್ರಾಮದ ಶ್ರೀ ತರಳಬಾಳು ಸಿದ್ದೇಶ್ವರ ಪ್ರೌಢಶಾಲೆಯಲ್ಲಿ. 1985-86 ರ ವಾರ್ಷಿಕ ಪರೀಕ್ಷೆಯಲ್ಲಿ ಶಾಲೆಗೆ ಪ್ರಥಮ ಸ್ಥಾನದಲ್ಲಿ ಉತ್ತೀರ್ಣರಾದ ಪ್ರತಿಭಾನ್ವಿತ ವಿದ್ಯಾರ್ಥಿ.

ನಂತರ ಬಳ್ಳಾರಿಯಲ್ಲಿ ಮೆಕ್ಯಾನಿಕಲ್ ಡಿಪ್ಲೋಮಾ ಮತ್ತು ಚಿತ್ರದುರ್ಗ ಜೆ ಎಂ ಐ ಟಿಯಲ್ಲಿ ಇಂಜಿನಿಯರಿಂಗ್ ಪದವಿ ಪಡೆದರು. ಕೆಲ ವರ್ಷಗಳ ಕಾಲ ಖಾಸಗಿ



ಕಂಪನಿಯಲ್ಲಿ ಕಾರ್ಯ ನಿರ್ವಹಿಸಿ, 1998ರಲ್ಲಿ ಇಸ್ರೋಗೆ ಸೇರಿದರು. ಕಳೆದ 26 ವರ್ಷಗಳಿಂದ ಇಸ್ರೋದಲ್ಲಿದ್ದು, ಸೀನಿಯರ್ ಸೈಂಟಿಸ್ಟ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.


ತಾವು ಓದಿದ ಶಾಲೆಯ ಬಗ್ಗೆ ಅಪಾರ ಅಭಿಮಾನ ಹೊಂದಿರುವ ಗೋವಿಂದ ರಾಜ ಶೆಟ್ಟರು ದತ್ತಿ ನಿಧಿಯನ್ನು ಸ್ಥಾಪಿಸಿದ್ದಾರೆ. ಈ ದತ್ತಿ ನಿಧಿಯಿಂದ ಪ್ರತಿವರ್ಷ ಶಾಲೆಯ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಿ ಪ್ರೋತ್ಸಾಹಿಸುತ್ತಿದ್ದಾರೆ. ಎಲೆಮರೆಯ ಕಾಯಿಯಂತಿದ್ದು, ಇಂದಿಗೂ ಶಾಲೆ ಮತ್ತು ಗ್ರಾಮದ ಬಗೆಗೆ ಬದ್ಧತೆ ಮತ್ತು ಪ್ರೀತಿಯನ್ನು ಹೊಂದಿದ್ದಾರೆ ಎಂದು ಊರಿನ ಮುಖಂಡ ಶಾಂತನಗೌಡರು ಹೆಮ್ಮೆಯಿಂದ ನೆನಪಿಸಿಕೊಳ್ಳುತ್ತಾರೆ.


## ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ನಂ. 403/4-ಎ, ಡಾ|| ಮೋದಿ ಕಣ್ಣಿನ ಆಸ್ಪತ್ರೆ ರಸ್ತೆ,
ಪಿ.ಜೆ. ಬಡಾವಣೆ, ದಾವಣಗೆರೆ-577 002. ಫೋ. : 255974



ಎನ್.ಜೆ. ಗುರುಸಿದ್ದಯ್ಯ ಡಿಐಸಿ, ಅಧ್ಯಕ್ಷರು | ಕೆ.ಎಸ್. ಮಹೇಶ್ವರಪ್ಪ, ಎಂ.ಎಸ್ಸಿ, ನಿರ್ದೇಶಕರು | ಬಿ.ಹೆಚ್. ಪರಶುರಾಮಪ್ಪ ಸಿವಿಲ್ ಇಂಜಿನಿಯರ್ ನಿರ್ದೇಶಕರು | ಹೆಚ್.ಎಂ. ವಿಶ್ವನಾಥ್ ಬಿ.ಎಸ್ಸಿ, ನಿರ್ದೇಶಕರು | ಶ್ರೀಮತಿ ಎನ್.ಎಂ. ಪಂಕಜ ವೀರಯ್ಯ ನಿರ್ದೇಶಕರು | ನಿರಂಜನ್ ನಿಶಾನಿಮಠ್, ಎಂ.ಎ. ಉಪಾಧ್ಯಕ್ಷರು



ವಿಕಾಸ್ ಕುಮಾರ್ ಬಿ.ಕಾಂ., ನಿರ್ದೇಶಕರು | ಬಂಡಿವಾಡ ಎನ್.ವ್ಹಿ., ಡಿ.ಐ.ಎ., ನಿರ್ದೇಶಕರು | ಶ್ರೀಮತಿ ಕೌಶಲ್ಯ ಆರ್., ಬಿ.ಎ. ಬಿ.ಎಡ್, ನಿರ್ದೇಶಕರು | ರವೀಂದ್ರನಾಥ್ ಕೆ.ಆರ್. ಬಿ.ಇ. ಸಿವಿಲ್ ಇಂಜಿನಿಯರ್, ನಿರ್ದೇಶಕರು | ಡಾ. ಎಂ. ಸೋಮಶೇಖರಪ್ಪ, ಎಂ.ಎ., ಎಲ್.ಎಲ್.ಎಂ. ಪಿಹೆಚ್‌ಡಿ ವೃತ್ತಿಪರ ನಿರ್ದೇಶಕರು | ಸುಮಂತ್ ಎಂ.ಎಸ್., ಎಂ.ಕಾಂ. ಸಿ.ಎ., ವೃತ್ತಿಪರ ನಿರ್ದೇಶಕರು

### 31ನೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ


ಮೇಲ್ಕಂಡ ಬ್ಯಾಂಕಿನ 2022-23ನೇ ಸಾಲಿನ 31ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ : 26.08.2023ನೇ ಶನಿವಾರ ಬೆಳಿಗ್ಗೆ 11.30 ಗಂಟೆಗೆ ಷ||ಬ್ರ||ಡಾ|| ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮಿಗಳು, ಎಂ.ಸಿ.ಸಿ. "ಬಿ" ಬ್ಲಾಕ್, ಶಿವಾಚಾರ್ಯ ನಿಕೇತನ ಹಿರೇಮಠ, ದಾವಣಗೆರೆ ಇಲ್ಲಿ ಕರೆಯಲಾಗಿದೆ. ವಾರ್ಷಿಕ ವರದಿಯ ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದೇ ಆಹ್ವಾನ ಪತ್ರಿಕೆ ಎಂದು ತಿಳಿದು ಬ್ಯಾಂಕಿನ ಮಾನ್ಯ ಸದಸ್ಯರು ಸಭೆಗೆ ಸಕಾಲಕ್ಕೆ ಆಗಮಿಸಬೇಕೆಂದು ಕೋರಲಾಗಿದೆ.

ಕಾರ್ಯನಿರ್ವಾಹಕ ಮಂಡಳಿಯ ಅಪ್ಪಣೆಯ ಮೇರೆಗೆ
ಸಹಿ/- ಅಧ್ಯಕ್ಷರು





## ಹೃದಯಪೂರ್ವಕ ಅಭಿನಂದನೆಗಳು



ಶ್ರೀ ಎನ್.ಜೆ. ಗುರುಸಿದ್ದಯ್ಯ | ಶ್ರೀ ನಿರಂಜನ ನಿಶಾನಿಮಠ | ಶ್ರೀ ಇಂದೂಧರ ನಿಶಾನಿಮಠ

ದಾವಣಗೆರೆಯ ಪ್ರತಿಷ್ಠಿತ ಸಹಕಾರಿ ಬ್ಯಾಂಕ್‌ಗಳಲ್ಲೊಂದಾದ ಸಿಟಿ ಕೋ-ಆಪರೇಟಿವ್ ಬ್ಯಾಂಕಿನ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವ
**ಜಂಗಮ ಸಮಾಜದ ಮುಖಂಡರಾದ**
**ಶ್ರೀ ನಿರಂಜನ ನಿಶಾನಿಮಠ** ಅವರಿಗೆ
ಹೃದಯಪೂರ್ವಕ ಅಭಿನಂದನೆಗಳು.

✦ ನಿಶಾನಿಮಠ ವಂಶಸ್ಥರು
✦ ಡಾ|| ಎ.ಹೆಚ್. ಶಿವಯೋಗಿಸ್ವಾಮಿ, ಮಾಜಿ ಮುಖ್ಯ ಸಚೇತಕರು, ವಿಧಾನ ಪರಿಷತ್
✦ ತೆಗ್ಗಿನಮಠದ ವಂಶಸ್ಥರು, ಹರಪನಹಳ್ಳಿ. ✦ ಬಿಕ್ಷಾವರ್ತಿ ಮಠದ ವಂಶಸ್ಥರು, ನಾಯಕನಹಟ್ಟಿ
✦ ಜೆ.ಡಿ.ಎಂ. ಮಠದ ವಂಶಸ್ಥರು, ಜಗಳೂರು. ✦ ಸಾಲಿಮಠದ ವಂಶಸ್ಥರು
✦ ತಿರುಕಪ್ಪನ ಮಠದ ವಂಶಸ್ಥರು ✦ ಚಾನಕೋಟೆ ಮಠ ವಂಶಸ್ಥರು, ಕೊಟ್ಟೂರು
✦ ದಾವಣಗೆರೆ ಹಿರೇಮಠದ ವಂಶಸ್ಥರು ✦ ಹಂಜಿಗಿಮಠದ ವಂಶಸ್ಥರು
✦ ಕುರುಡಿ ಮಠದ ವಂಶಸ್ಥರು ✦ ಮೈಸೂರು ಮಠದ ವಂಶಸ್ಥರು
✦ ತೊಗಲೇರಿ ಮಠದ ವಂಶಸ್ಥರು ಹಾಗೂ ಜಂಗಮ ಸಮಾಜದ ಬಂಧುಗಳು
✦ ನಿರಂಜನ್ ಪ್ರಿಂಟಿಂಗ್ ಪ್ರೆಸ್ ಸಿಬ್ಬಂದಿ, ಈಶ್ವರ್ ಕಾಂಪ್ಲೆಕ್ಸ್, ದಾವಣಗೆರೆ.

## ಜೆಜೆಎಂ ಮೆಡಿಕಲ್ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ



ದಾವಣಗೆರೆ, ಆ. 25- ನಗರದ ಜೆ.ಜೆ.ಎಂ. ಮೆಡಿಕಲ್ ಕಾಲೇಜಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಉಚಿತ ಲ್ಯಾಪ್‌ಟಾಪ್ ವಿತರಿಸಿದರು.

38 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಿ ನಿಮ್ಮ ಸೇವೆ ನಮ್ಮ ಕಾಲೇಜಿಗೆ, ರಾಜ್ಯಕ್ಕೆ, ದೇಶಕ್ಕೆ ಕೀರ್ತಿ ತರುವಂತಿರಲಿ ಎಂದು ಎಸ್ಸೆಸ್ ಕಿವಿಮಾತು ಹೇಳಿದರು. ಕಾಲೇಜಿನ ಪ್ರಾಂಶುಪಾಲ ಡಾ. ಎಸ್.ಬಿ. ಮುರುಗೇಶ್ ಉಪಸ್ಥಿತರಿದ್ದರು.

## ಸಚಿವಾಲಯದಲ್ಲಿ ದೇವಾಲಯ, ಮಸೀದಿ, ಚರ್ಚ್ ಉದ್ಘಾಟನೆ

ಹೈದರಾಬಾದ್, ಆ. 25 - ತೆಲಂಗಾಣದ ಹೊಸ ಸಚಿವಾಲಯದ ಆವರಣದಲ್ಲಿ ದೇವಾಲಯ, ಮಸೀದಿ ಮತ್ತು ಚರ್ಚ್ ಅನ್ನು ಉದ್ಘಾಟಿಸಲಾಯಿತು. ತೆಲಂಗಾಣ ರಾಜ್ಯಪಾಲ ತಮಿಳಿಸೈ ಸೌಂದರರಾಜನ್ ಮತ್ತು ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಮಸೀದಿ ಉದ್ಘಾಟಿಸಿ ಮಾತನಾಡಿದ ರಾವ್, ಸಚಿವಾಲಯದ ಆವರಣದಲ್ಲಿ ದೇವಾಲಯ, ಚರ್ಚ್ ಮತ್ತು ಮಸೀದಿಯನ್ನು ನಿರ್ಮಿಸಲಾಗಿದೆ. ಇದು ಇಡೀ ದೇಶಕ್ಕೆ ಸಾಮರಸ್ಯ ಮತ್ತು ಸಹೋದರತ್ವಕ್ಕೆ ಉತ್ತಮ ಉದಾಹರಣೆ ಎಂದರು.

## ಇಂದೋರ್‌ಗೆ ಅತ್ಯುತ್ತಮ ಸ್ಮಾರ್ಟ್ ಸಿಟಿ ಪ್ರಶಸ್ತಿ

ನವದೆಹಲಿ, ಆ. 25 - ಕೇಂದ್ರ ಸರ್ಕಾರ ಸ್ಮಾರ್ಟ್ ಸಿಟಿ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ಇಂದೋರ್ ಅತ್ಯುತ್ತಮ ಸ್ಮಾರ್ಟ್ ಸಿಟಿ ಎಂಬ ಪ್ರಶಸ್ತಿ ಪಡೆದುಕೊಂಡಿದೆ. ಸೂರತ್ ಹಾಗೂ ಆಗ್ರಾ ನಗರಗಳು ಕ್ರಮವಾಗಿ 2 ಹಾಗೂ 3ನೇ ಸ್ಥಾನಗಳಲ್ಲಿವೆ. ಮಧ್ಯ ಪ್ರದೇಶ ಅತ್ಯುತ್ತಮ ರಾಜ್ಯ ಪ್ರಶಸ್ತಿ ಪಡೆದಿದೆ. ತಮಿಳುನಾಡು ನಂತರದ ಸ್ಥಾನದಲ್ಲಿದೆ. ರಾಜಸ್ಥಾನ ಹಾಗೂ ಉತ್ತರ ಪ್ರದೇಶಗಳು 3 ನೇ ಸ್ಥಾನವನ್ನು ಹಂಚಿಕೊಂಡಿವೆ.

# ನಗರದ ಎಲ್ಲೆಡೆ ವರಮಹಾಲಕ್ಷ್ಮಿ ಹಬ್ಬದ ಸಂಭ್ರಮ

ದಾವಣಗೆರೆ, ಆ. 25- ನಗರದಲ್ಲಿ ವರಮಹಾಲಕ್ಷ್ಮಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಮಹಿಳೆಯರು ಬೆಳಗ್ಗೆ ಬೇಗ ಎದ್ದು ಮನೆಯ ಮುಂದೆ ರಂಗೋಲಿ ಹಾಕಿ, ದೇವರ ಕೋಣೆಯನ್ನು ಅಲಂಕರಿಸಿ, ವರ ಮಹಾಲಕ್ಷ್ಮಿಗೆ ಪೂಜೆ ಸಲ್ಲಿಸಿದರು.

ಪ್ರತಿ ವರ್ಷ ಶ್ರಾವಣ ಮಾಸದ ಹುಣ್ಣಿಮೆಯ ಹಿಂದಿನ ಶುಕ್ರವಾರ ವರಮಹಾಲಕ್ಷ್ಮಿ ಹಬ್ಬ ಆಚರಿಸಲಾಗುತ್ತದೆ. ಈ ವಿಶೇಷ ದಿನ ಮಹಾಲಕ್ಷ್ಮಿಯನ್ನು ಪೂಜಿಸಿದರೆ ಕುಟುಂಬದಲ್ಲಿ ಸುಖ, ಶಾಂತಿ, ನೆಮ್ಮದಿ ನೆಲೆಸುತ್ತದೆ. ಅಷ್ಟೈಶ್ವರ್ಯ ಲಭಿಸುತ್ತದೆ ಎಂಬ ನಂಬಿಕೆ ಭಕ್ತರಲ್ಲಿದೆ. ಹಾಗಾಗಿ, ಈ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ.

ಪೂಜೆ ನಡೆದ ನಂತರ ಸಂಬಂಧಿಕರು, ಸ್ನೇಹಿತರನ್ನು ಆಹ್ವಾನಿಸಿ, ಪರಸ್ಪರ ಶುಭಾಶಯ ಕೋರಿ, ಅರಿಷಿಣ-ಕುಂಕುಮದ ಜೊತೆ ಉಡಿ ಕೊಟ್ಟು ಸಂಭ್ರಮಿಸಿದರು.

ಮನೆಗಳಲ್ಲಿ ಸಂಭ್ರಮ ಒಂದೆಡೆಯಾದರೆ, ದೇವಸ್ಥಾನಗಳಲ್ಲೂ ಹಬ್ಬದ ಅಂಗವಾಗಿ ವಿಶೇಷ ಪೂಜೆಗಳು ನಡೆದವು. ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಾಲಯ, ನಿಟುವಳ್ಳಿಯ ಶ್ರೀ ದುರ್ಗಾಂಬಿಕಾ ದೇವಸ್ಥಾನ, ಚೌಡಮ್ಮನ ದೇವಸ್ಥಾನ ಸೇರಿದಂತೆ ದೇವತೆಗಳಿಗೆ ವಿಶೇಷ ಪೂಜೆ, ಅಲಂಕಾರಗಳು ನಡೆದವು. ವಿಶೇಷ ಅಲಂಕಾರದ ನಂತರ ಬರುವ ಭಕ್ತಾದಿಗಳಿಗೆ ದರ್ಶನಕ್ಕೆ ಅವಕಾಶ ನೀಡಲಾಗಿತ್ತು.





ದಾವಣಗೆರೆಯ ಮನೆಯೊಂದರಲ್ಲಿ ವರಮಹಾಲಕ್ಷ್ಮಿ ಹಬ್ಬದ ಪೂಜೆ. ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿಗೆ ವಿಶೇಷ ಅಲಂಕಾರ (ಬಲಚಿತ್ರ)

**ಸಾಮಾಜಿಕ ಜಾಲ ತಾಣಗಳಲ್ಲಿ ಮಹಿಳೆಯರ ಹವಾ:** ಫೇಸ್‌ಬುಕ್, ಇನ್‌ಸ್ಟಾಗ್ರಾಂ, ವಾಟ್ಸಾಪ್ ಸ್ಟೇಟಸ್ ಇತ್ಯಾದಿ ಎಲ್ಲಿ ನೋಡಿದರೂ ಮಹಿಳೆಯರು ವರಮಹಾಲಕ್ಷ್ಮಿ ಹಬ್ಬದ ಸಂಭ್ರಮ ಹಂಚಿಕೊಂಡರು.

ಕೆಲವರು ವರಮಹಾಲಕ್ಷ್ಮಿ ದೇವಿಯ ಅಲಂಕಾರದ ಫೋಟೋಗಳನ್ನು ಹಂಚಿಕೊಂಡಿದ್ದಾರೆ. ಇನ್ನು ಕೆಲವರು ಸುಂದರ ಉಡುಗೆ ತೊಟ್ಟು ಹಬ್ಬದ ಸಿಹಿಯನ್ನು ತೋರಿಸಿ ಸಂಭ್ರಮಿಸಿದರು. ಶುಭ ಕೋರಿದರು.

## ಮುರುಘಾ ಮಠದಲ್ಲಿ ಇಂದು ವಚನಾಭಿಷೇಕ

ಚಿತ್ರದುರ್ಗ ಮುರುಘಾ ಮಠದಲ್ಲಿ ಕರ್ತೃಗದ್ದುಗೆಗೆ ಇಂದಿನಿಂದ 1 ತಿಂಗಳ ಕಾಲ ಪ್ರತಿನಿತ್ಯ ಬೆಳಗ್ಗೆ ವಚನಾಭಿಷೇಕ ಜರುಗಲಿದೆ ಎಂದು ಶ್ರೀ ಬಸವ ಪ್ರಭು ಸ್ವಾಮೀಜಿ ತಿಳಿಸಿದ್ದಾರೆ. ಇಂದಿನಿಂದ ಪ್ರತಿದಿನ ಅಥವಾ ವಾರಕ್ಕೆ ಎರಡು ದಿನ ಚಿಂತನ ಶ್ರಾವಣ ನಡೆಯಲಿದೆ.

## ಬಿ. ಕಲಪನಹಳ್ಳಿಯಲ್ಲಿ ಇಂದು ಶ್ರಾವಣದ ವಚನಾಭಿಷೇಕ

ದಾವಣಗೆರೆ ತಾಲ್ಲೂಕು ಬಿ. ಕಲಪನಹಳ್ಳಿ ಗ್ರಾಮದ ಶರಣ ಬಸವೇಶ್ವರ ಮಠದಲ್ಲಿ ಇಂದು ಬೆಳಿಗ್ಗೆ 5.30 ಕ್ಕೆ ವಚನಾಭಿಷೇಕ, ಮಹಾ ಮಂಗಳಾರತಿ ನಂತರ ಪ್ರಸಾದ ವಿನಿಯೋಗ ನಡೆಯಲಿದೆ.


ಹರಿಹರ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಸಂಘ ನಿ.,
1ನೇ ಮಹಡಿ, ಹಳೇ ಮಹಾರಾಷ್ಟ್ರ ಬ್ಯಾಂಕ್ ಬಿಲ್ಡಿಂಗ್, ಪಿ.ಬಿ. ರಸ್ತೆ, ಹರಿಹರ.

2022-23ನೇ ಸಾಲಿನ ಒಂಭತ್ತನೇ ವರ್ಷದ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ

ಹರಿಹರ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಸಂಘ ನಿ., ಹರಿಹರ ಇವರ 9ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ: 26.08.2023ನೇ ಶನಿವಾರ ಮಧ್ಯಾಹ್ನ 12.00 ಘಂಟೆಗೆ ಹರಿಹರದ ಗಾಂಧಿ ಮೈದಾನದ ಪಕ್ಕದಲ್ಲಿರುವ ರಚನಾ ಕ್ರೀಡಾ ಕ್ಲಬ್‌ನಲ್ಲಿ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಹೆಚ್.ಎಂ. ನಾಗರಾಜ ಇವರ ಘನ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಸರ್ವ ಸದಸ್ಯರು ಸಕಾಲಕ್ಕೆ ಆಗಮಿಸಿ, ಕಾರ್ಯ ಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಡಬೇಕೆಂದು ಕೋರಲಾಗಿದೆ.

ನಾಗರಾಜ ಹೆಚ್.ಎಂ. ಅಧ್ಯಕ್ಷರು
ಡಾ. ಪ್ರವೀಣ ಹೆಗಡೆ. ಉಪಾಧ್ಯಕ್ಷರು

ಪದಾಧಿಕಾರಿಗಳು :
ವೀರಣ್ಣ ಜಿ.ಕೆ. ನಿರ್ದೇಶಕರು
ಮಂಜುನಾಥ್ ಹೆಚ್.ಎಸ್. ನಿರ್ದೇಶಕರು
ನಂಜಪ್ಪ ಜಿ. ನಿರ್ದೇಶಕರು
ಸುಜಯ್ ಹೆಚ್.ವಿ. ನಿರ್ದೇಶಕರು
ಮಯೂರ್ ಹೆಚ್.ಎನ್. ನಿರ್ದೇಶಕರು
ರಾಘವೇಂದ್ರ ಬೊಂಗಾಳೆ ನಿರ್ದೇಶಕರು
ಡಾ. ಸೀಮಾ ಎನ್. ನಿರ್ದೇಶಕರು
ಶ್ರೀಮತಿ ಸುನಿತಾ ಪಿ. ಬದ್ದಿ ನಿರ್ದೇಶಕರು
ಶ್ರೀಮತಿ ನಾಗರತ್ನ ಜಿ.ಕೆ. ನಿರ್ದೇಶಕರು
ಶ್ರೀಮತಿ ಮಂಜುಳಾ ಪ್ರಸಾದ್ ನಿರ್ದೇಶಕರು

ವಿಶೇಷ ಸೂಚನೆ:
ಆಮಂತ್ರಣ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಸಭೆಗೆ ಹಾಜರಾಗಬೇಕಾಗಿ ಕೋರಿದೆ.

ಆಡಳಿತ ಮಂಡಳಿಯ ಪರವಾಗಿ
ರುದ್ರಯ್ಯ ಕಳ್ಳಿಮಠ
ಪ್ರಭಾರ ಕಾರ್ಯದರ್ಶಿ



ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ 2022-23ನೇ ಸಾಲಿನ 62ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯು ದಿನಾಂಕ 26.08.2023ರ ಶನಿವಾರ ಬೆಳಿಗ್ಗೆ 11.30 ಗಂಟೆಗೆ ಶ್ರೀ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪ, ದಾವಣಗೆರೆ ಇಲ್ಲಿ ನಡೆಯಲಿದ್ದು, ಈ ಸಭೆಯು ಯಶಸ್ವಿಯಾಗಲಿ ಎಂದು ಹಾರ್ದಿಕ ಶುಭಾಶಯಗಳು.

ಈ ಸಭೆಯಲ್ಲಿ ಬ್ಯಾಂಕಿನ ಸರ್ವ ಸದಸ್ಯರು ಭಾಗವಹಿಸಿ ಯಶಸ್ವಿಗೊಳಿಸುವಂತೆ ವಿನಂತಿ.



ಎಂ.ವಿ. ಜಯಪ್ರಕಾಶ್ ಮಾಗಿ, (ಅಕ್ಕಿ ವರ್ತಕರು)
ಷೇರುದಾರರು,
ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್, ದಾವಣಗೆರೆ.
✦ರೈಸ್ ಕಾರ್ನರ್ ✦ಹರ್ಷ ಕಮರ್ಷಿಯಲ್ಸ್
✦ಜೆ.ಪಿ. ಎಂಟರ್‌ಪ್ರೈಸಸ್
ಗುಜರಿ ಲೈನ್ ಚೌಕಿಪೇಟೆ ಹಿಂಭಾಗ, ದಾವಣಗೆರೆ.



ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ, ಪರಿಶುದ್ಧ ರೇಷ್ಮೆ ಸೀರೆ ಮತ್ತು ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ

ಅಭಿವೃದ್ಧಿ ಸಿಲ್ಕ್ ಇಂಡಿಯ® 2023

ಭಾರತದ ಎಲ್ಲಾ ರಾಜ್ಯಗಳಿಂದ ಪರಿಶುದ್ಧ ರೇಷ್ಮೆ ಸೀರೆಗಳು ಹಾಗೂ ರೇಷ್ಮೆ ಉತ್ಪನ್ನಗಳು

19 ರಿಂದ 27 ಆಗಸ್ಟ್ 2023 ರವರೆಗೆ | ಸಮಯ : ಬೆಳಗ್ಗೆ 10.30 ರಿಂದ ಸಂಜೆ 8.30 ರವರೆಗೆ

ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್
ಪಿ.ಬಿ. ರಸ್ತೆ, ದಾವಣಗೆರೆ

ಬಿಹಾರ್ : ತಸ್ಸರ್ ರೇಷ್ಮೆ ಸೀರೆಗಳು, ಸ್ಟೋಲ್ಸ್, ಶಾಲುಗಳು ಕರ್ನಾಟಕ : ಕ್ರೇಪ್, ಶಿಫಾನ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಅರಿಣಿ ತಮಿಳುನಾಡು : ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು ಆಂಧ್ರ ಪ್ರದೇಶ : ಧರ್ಮಾವರಂ ಸೀರೆಗಳು, ಉಪ್ಪಡಾ ಮತ್ತು ಗೊಡ್ವಾಲ್ ಸೀರೆಗಳು, ಮಂಗಲಗಿರಿ ಹಾಗೂ ಪೋಚಂಪಲ್ಲಿ ಸೀರೆಗಳು ಉತ್ತರ ಪ್ರದೇಶ : ಬನಾರಸ್ ಮತ್ತು ಜಮ್‌ದಾನಿ, ಜಮಾವರ್ ರೇಷ್ಮೆ, ಟೆಂಪಲ್ ಬಾರ್ಡಾರ್‌ಉಳ್ಳ ಮುಲ್‌ಬಾರಿ ಸಿಲ್ಕ್, ಲಕ್ನೋ ಚಿಕಾನ್ ಕಸೂತಿ ಮಹಾರಾಷ್ಟ್ರ : ಪೈಥಾಣಿ ಸೀರೆ, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್ ಪಂಜಾಬ್ : ಪಟಿಯಾಲ ಡ್ರೆಸ್ ಮೆಟೀರಿಯಲ್ಸ್ ಒರಿಸ್ಸಾ : ಸಂಬಲ್‌ಪುರಿ, ಇಕ್ಕತ್, ಬೋಂಕೈ ಸೀರೆಗಳು, ಹ್ಯಾಂಡ್‌ಲೂಮ್ ಸಿಲ್ಕ್ ಕಾಟನ್ ಚತ್ತೀಸ್‌ಘಡ್ : ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು ಮಧ್ಯ ಪ್ರದೇಶ : ಮಹೇಶ್ವರಿ ಮತ್ತು ಚಂದೇರಿ ಸಿಲ್ಕ್ ಪಶ್ಚಿಮ ಬಂಗಾಳ : ಢಾಕ ಸೀರೆಗಳು, ಬಲ್‌ಚೂರಿ ರೇಷ್ಮೆ, ಕಲ್ಕೋತ್ತಾ ರೇಷ್ಮೆ ಸೀರೆಗಳು ಮತ್ತು ಕಾಂತ ಎಂಬ್ರಾಯಿಡರಿ ಸೀರೆಗಳು ಅಸ್ಸಾಂ : ಮುಗಾ ಮತ್ತು ಎರ್ರಿ ರೇಷ್ಮೆ ಸೀರೆಗಳು ಜಮ್ಮು ಮತ್ತು ಕಾಶ್ಮೀರ : ಚಿನಾನ್, ಟೆಡ್ಡಿ ರೇಷ್ಮೆ ಸೀರೆಗಳು, ಪಶ್ಮೀನಾ ಸೀರೆಗಳು, ಸ್ಟೋಲ್ಸ್, ಶಾಲುಗಳು ರಾಜಾಸ್ಥಾನ್ : ಕೋಟಾ ಸಿಲ್ಕ್, ಕೈ ಅಚ್ಚಿನ ಸೀರೆಗಳು

Last 2 Days



Entry Free | All Credit & Debit Cards Accepted
Contact : 6364165579, 7892403536
Organised by : abhivrudhi
(Registered with O/o D C (H) Ministry of Textiles, Govt. of India)



ಪ್ರಥಮ ವರ್ಷದ ಪುಣ್ಯಸ್ಮರಣೆ



ಶ್ರೀ ಎಂ. ಶಶಿಧರ್
ನೀನು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ. ಸದಾ ನಿನ್ನ ಸ್ಮರಣೆಯಲ್ಲಿರುವ

ತಾಯಿ-ತಂದೆ : ಶ್ರೀಮತಿ ಚಂದ್ರಕಲಾ ಮತ್ತು ಶ್ರೀ ಮಂಜುನಾಥ (ಟೈಲರ್), ದಾವಣಗೆರೆ ಹಾಗೂ
ತಾತ : ಬೆಳ್ಳೂಡಿ ಹನುಮಂತಪ್ಪ ಮತ್ತು ಕುಟುಂಬದವರು
ಮೊ. : 99002-55448, 95389-94929



॥ ಶ್ರೀ ಗುರು ತಿಪ್ಪೇರುದ್ರಸ್ವಾಮಿ ಪ್ರಸನ್ನ ॥
ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಸಿಟಿ ಆಂಜನೇಯ ಬಡಾವಣೆ ವಾಸಿ,
ಶ್ರೀ ಎ.ಟಿ. ಶಿವಮೂರ್ತಿ, ನಿವೃತ್ತ ಮುಖ್ಯೋಪಾಧ್ಯಾಯರು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 18-08-2023ರ ಶುಕ್ರವಾರ ಸಂಜೆ 6.30 ಕ್ಕೆ ನನ್ನ ತಮ್ಮ ಶ್ರೀ ಎ.ಟಿ. ಮುರುಗೇಶ್, ಬಿಎಸ್‌ಎನ್‌ಎಲ್ ನಿವೃತ್ತ ಅಧಿಕಾರಿ, ಸಿದ್ದವೀರಪ್ಪ ಬಡಾವಣೆ, 14ನೇ ಕ್ರಾಸ್ ದಾವಣಗೆರೆ ಇವರ ಧರ್ಮಪತ್ನಿ
ನೇತ್ರದಾನಿ ಶ್ರೀಮತಿ ಕೊಟ್ರಮ್ಮ ಭದ್ರಶೆಟ್ಟಿ
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು
ಜಗದ್ಗುರು ಶ್ರೀ ಶ್ರೀ ಶ್ರೀ ವಚನಾನಂದ ಮಹಾಸ್ವಾಮಿಗಳು
ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠ, ಸುಕ್ಷೇತ್ರ ಹರಿಹರ
ಇವರ ದಿವ್ಯ ಸಾನ್ನಿಧ್ಯದಲ್ಲಿ ದಿನಾಂಕ 26-08-2023ರ ಶನಿವಾರ ಬೆಳಿಗ್ಗೆ 11.30 ಕ್ಕೆ ಸರ್ಕಾರಿ ನಿವೃತ್ತ ನೌಕರರ ಭವನ, ಎಂ.ಸಿ.ಸಿ.'ಬಿ' ಬ್ಲಾಕ್, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತ ಕುಟುಂಬ ವರ್ಗ : ಶ್ರೀ ಎ.ಟಿ. ಶಿವಮೂರ್ತಿ, ಶ್ರೀ ಎ.ಟಿ. ಮುರುಗೇಶ್, ಸಹೋದರರು, ಸಹೋದರಿ, ಮೃತರ ಮಗ ಎ.ಎಮ್. ಚಂದನ್, ಸೊಸೆ ಮತ್ತು ಐಗೂರು ಅಂಗಡಿ ವಂಶಸ್ಥರು ಹಾಗೂ ಬಂಧು-ಮಿತ್ರರು. ಮೊ. : 94485 67567, 94498 55542

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ತಪ್ಪದೇ ಆಗಮಿಸಬೇಕಾಗಿ ವಿನಂತಿ.



ಶ್ರೀ ಅಂಬಾಭವಾನಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,
# 26/2ಎ, ವಿಜಯಲಕ್ಷ್ಮಿ ರೋಡ್, ದಾವಣಗೆರೆ 577 001. ☎ : 271688 296900, GST No.: 29AABAS2774F1ZC ✉ ambabhavaniucbdvg@gmail.com

ಶ್ರೀ ಕಿರಣ್‌ಕುಮಾರ್ ಎ. ಅಧ್ಯಕ್ಷರು
ಶ್ರೀ ಪರಶುರಾಮರಾವ್ ಜಿ.ಎಂ. ಉಪಾಧ್ಯಕ್ಷರು

ಡಾ॥ ತಿಪ್ಪೇಸ್ವಾಮಿ ಏಕಬೋಟೆ ನಿರ್ದೇಶಕರು
ಶ್ರೀ ಸತ್ಯನಾರಾಯಣ ಆರ್.ಜಿ. ನಿರ್ದೇಶಕರು
ಶ್ರೀ ಬಾಬುರಾವ್ ಸಾಳಂಕಿ ಎಸ್. ನಿರ್ದೇಶಕರು
ಶ್ರೀ ಜಗನ್ನಾಥ ಗಂಜಗಟ್ಟೆ ಎಸ್. ನಿರ್ದೇಶಕರು
ಶ್ರೀ ಪಿ.ಜಿ. ಪಾಂಡುರಂಗ ನಿರ್ದೇಶಕರು
ಶ್ರೀ ಶಿವಾಜಿರಾವ್ ನಿರ್ದೇಶಕರು
ಶ್ರೀ ಗಿರಿಧರ್ ಎಂ.ಡಿ. ನಿರ್ದೇಶಕರು
ಶ್ರೀ ಆನಂದ ಡಿ. ಸಫಾರೆ ನಿರ್ದೇಶಕರು
ಶ್ರೀ ಗೋಪಿನಾಥ್ ನಿರ್ದೇಶಕರು
ಶ್ರೀ ಬಾಬು ನಿರ್ದೇಶಕರು
ಶ್ರೀಮತಿ ಡಾ. ರಜನಿ ಎಸ್. ನಿರ್ದೇಶಕರು
ಶ್ರೀಮತಿ ಅನಿತಾಬಾಯಿ ಜಿ. ನಿರ್ದೇಶಕರು
ಶ್ರೀಮತಿ ಶಾಮಲಾ ಜಿ.ಎಂ. ನಿರ್ದೇಶಕರು
ಶ್ರೀ ರಾಜು ಮಹೇಂದ್ರಕರ್ ವೃತ್ತಿಪರ ನಿರ್ದೇಶಕರು ಚಾರ್ಟರ್ಡ್ ಅಕೌಂಟೆಂಟ್
ಶ್ರೀ ಎ.ಸಿ. ರಾಘವೇಂದ್ರ ಮೊಹರೆ ವೃತ್ತಿಪರ ನಿರ್ದೇಶಕರು ವಕೀಲರು
ಶ್ರೀ ನಾಗರಾಜ್ ಗೌಡನಕಟ್ಟಿ ವ್ಯವಸ್ಥಾಪಕರು
ಶ್ರೀ ಅನಿಲ್ ಟಿ. ಮಾಳದಕರ್ ಸಹಾಯಕ ವ್ಯವಸ್ಥಾಪಕರು
ಶ್ರೀ ಕೃಷ್ಣಕಾಂತ್ ಲೆಕ್ಕಾಧಿಕಾರಿ

ಸೂಚನೆ :
1) ಈಗಾಗಲೇ ಬ್ಯಾಂಕಿನ ಸದಸ್ಯರಿಗೆ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ಕೆಲವು ಪ್ರತಿಗಳು ವಿಳಾಸ ಬದಲಾವಣೆಯಿಂದ ಬ್ಯಾಂಕಿಗೆ ವಾಪಸ್ ಬಂದಿರುತ್ತವೆ. ಆದ ಕಾರಣ, ಬ್ಯಾಂಕಿನ ಕಛೇರಿ ವೇಳೆಯಲ್ಲಿ ಬಂದು ಸರಿಯಾದ ವಿಳಾಸ, ದೂರವಾಣಿ ಸಂಖ್ಯೆ ಹಾಗೂ ಕೆ.ವೈ.ಸಿ (ಚುನಾವಣಾ ಕಾರ್ಡ್, ಪಾನ್ ಕಾರ್ಡ್, ಆಧಾರ ಕಾರ್ಡ್) ನೀಡಿ, ಪತ್ರಿಕೆ ಪಡೆಯತಕ್ಕದ್ದು ಹಾಗೂ ಇದನ್ನು ಆಹ್ವಾನವೆಂದು ಭಾವಿಸಿ, ಮಹಾಸಭೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೋರಿಕೆ.

28ನೇ ವಾರ್ಷಿಕ ಮಹಾಸಭೆಯ ನೋಟೀಸ್

ನಮ್ಮ ಬ್ಯಾಂಕಿನ 2022-2023ನೇ ಸಾಲಿನ 28ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ 26-08-2023ನೇ ಶನಿವಾರ ಬೆಳಿಗ್ಗೆ 11-30 ಕ್ಕೆ ಸ್ಥಳ : ಶ್ರೀಕೃಷ್ಣಭವಾನಿ ಕಲ್ಯಾಣ ಮಂಟಪ, ದೇವರಾಜ ಅರಸು ಬಡಾವಣೆ, ಬಿ ಬ್ಲಾಕ್, ದಾವಣಗೆರೆ ಇಲ್ಲಿ ಕರೆಯಲಾಗಿದೆ. ಮಾನ್ಯ ಬ್ಯಾಂಕಿನ ಸರ್ವಸದಸ್ಯರು ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿ ವಾರ್ಷಿಕ ಮಹಾಸಭೆಯನ್ನು ಯಶಸ್ವಿಯಾಗಿ ನಡೆಸಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಸಭೆಯ ಕಾರ್ಯಕಲಾಪಗಳು

(1) ಪ್ರಾರ್ಥನೆ (2) ಸ್ವಾಗತ ಭಾಷಣ (3) ದಿನಾಂಕ 28.08.2022 ರಂದು ನಡೆದ 27ನೇ ಮಹಾಸಭೆಯ ನಿರ್ಣಯ ಓದಿ ಅಂಗೀಕರಿಸುವುದು. (4) 2022-23ನೇ ಸಾಲಿನ ಆಡಳಿತ ಮಂಡಲಿಯು ತಯಾರಿಸಿರುವ 28ನೇ ವಾರ್ಷಿಕ ವರದಿಯನ್ನು ಪರಿಶೀಲಿಸುವುದು (ಅನುಮೋದಿಸುವುದು). (5) 2022-23ನೇ ಸಾಲಿನ ಲೆಕ್ಕಪರಿಶೋಧನೆಯಾದ ಲಾಭ-ನಷ್ಟ ಮತ್ತು ಆಢಾವೆ ಪತ್ರಿಕೆಯನ್ನು ಹಾಗೂ ಲೆಕ್ಕಪರಿಶೋಧಕರ ವರದಿಯನ್ನು ಪರಿಶೀಲಿಸುವುದು. (ಅನುಮೋದಿಸುವುದು). (6) 2022-2023ನೇ ಸಾಲಿನ ಲಾಭ ವಿಲೇವಾರಿ ಮಾಡುವುದು. (7) 2023-2024ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರ ನೇಮಕಾತಿ ಮಾಡುವುದು ಮತ್ತು ಅವರಿಗೆ ಕೊಡಬಹುದಾದ ಸಂಭಾವನೆ ನಿರ್ಣಯದ ಬಗ್ಗೆ ಚರ್ಚಿಸುವುದು. (8) 2022-2023ನೇ ಸಾಲಿನಲ್ಲಿ ಮುಂಗಡ ಪತ್ರಕ್ಕಿಂತ ಹೆಚ್ಚುವರಿ ಆದ ಖರ್ಚುಗಳನ್ನು ಒಪ್ಪುವುದು ಮತ್ತು 2023 - 2024ನೇ ಸಾಲಿಗೆ ವಾರ್ಷಿಕ ಮುಂಗಡ ಪತ್ರವನ್ನು ಮಂಜೂರು ಮಾಡುವುದು. (9) ನಿರ್ದೇಶಕ ಮಂಡಲಿಯು ರೂಪಿಸಿದ ಬ್ಯಾಂಕಿನ ಮುಂಬರುವ ವರ್ಷದ ಕಾರ್ಯಚಟುವಟಿಕೆಗಳನ್ನು ಅನುಮೋದಿಸುವುದು. (10) ಪದಾಧಿಕಾರಿಗಳು ಸೇರಿದಂತೆ ನಿರ್ದೇಶಕರಿಗೆ, ಅವರ ಸಾಮರ್ಥ್ಯದಲ್ಲಿ ನಿರ್ವಹಿಸಿದ ಕರ್ತವ್ಯಗಳಿಗೆ ಸಂಬಂಧಪಟ್ಟ ಸಭೆಗೆ ಹಾಜರಾದುದಕ್ಕೆ ಅವರಿಗೆ ಸಂದಾಯ ಮಾಡಿದ ಸಂಭಾವನೆ ಹಾಗೂ ಇತರೆ ಭತ್ಯೆಗಳ ಪರಿಶೀಲನೆ. (11) ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು.

ಸಹಿ/- ಶ್ರೀ ಕಿರಣ್‌ಕುಮಾರ್ ಎ. ಅಧ್ಯಕ್ಷರು
ಸಹಿ/- ಪರಶುರಾಮರಾವ್ ಜಿ.ಎಂ. ಉಪಾಧ್ಯಕ್ಷರು
ಸಹಿ/- ನಾಗರಾಜ್ ಗೌಡನಕಟ್ಟಿ ವ್ಯವಸ್ಥಾಪಕರು
ಸಹಿ/- ಅನಿಲ್ ಟಿ. ಮಾಳದಕರ್ ಸಹಾಯಕ ವ್ಯವಸ್ಥಾಪಕರು